ಸಂಪುಟ: 06 ಸಂಚಿಕೆ: 38 ಪುಟಗಳು: 08 ಬುಧವಾರ 22 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಅಹಿಂಸೆಗೆ ಎರಡು ನಂಬಿಕೆಗಳು ಬೇಕಾಗುತ್ತದೆ. ದೇವರು ಮೇಲೆ ನಂಬಿಕೆ ಇದ್ದಂತೆಯೇ ಮನುಷ್ಯನ ಮೇಲೆಯೂ ವಿಶ್ವಾಸ ಇರಬೇಕು.

## ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿ ಇ.ಡಿ ದಾಳಿ: ಸಿಎಂ

• ಉದಯವಾಹಿನಿ, ಗುಂಡ್ಲುಪೇಟೆ

ಕಾಂಗ್ರೆಸ್ ನಾಯಕರನ್ನು ಗುರಿಯಾಗಿಸಿಕೊಂಡು ಕೇಂದ್ರ ಸರ್ಕಾರ ಇ.ಡಿ ದಾಳಿ ನಡೆಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು. ಬಿಜೆಪಿ ನಾಯಕರ ನಾಯಕರ ಮೇಲೆ ಇಡಿ ದಾಳಿ ನಡೆಸುವುದಿಲ್ಲ ಏಕೆ ಎಂದು ಪ್ರಶ್ನಿಸಿದರು. ಅಂದು ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಯಕ್ರಮಗಳನ್ನು ವಿರೋಧ ಮಾಡಿದ್ದ ಬಿಜೆಪಿ ಚುನಾವಣೆ ಗೆಲ್ಲಲು ಗ್ಯಾರಂಟಿ ಯೋಜನೆಗಳನ್ನು ಘೋಷಿಸುತ್ತಿದೆ.

ಗ್ಯಾರಂಟಿ ಯೋಜನೆಗಳ ಮಹತ್ವ ಬಿಜೆಪಿಗೆ ಅರಿವಾದಂತಿದೆ ಎಂದು ವ್ಯಂಗ್ಯವಾಡಿದರು. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಲು ಸಂವಿಧಾನದ 73, 74 ನೇ ಕಲಂಗೆ ತಿದ್ದುಪಡಿ ತಂದು ರಾಜ್ಯಸಭೆಯಲ್ಲಿ ಜಾರಿಗೊಳಿಸಲು ಮುಂದಾದಾಗ ಎನ್‌ಡಿಎ ಮೈತ್ರಿಕೂಟ ಅಡ್ಡಿಪಡಿಸಿತ್ತು. ಬಿಜೆಪಿ ನಿಜವಾದ ಮಹಿಳಾ ಮೀಸಲಾತಿಯ ವಿರೋಧಿ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

## ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಸಿಗಬೇಕು: ಸತೀಶ ಜಾರಕಿಹೊಳಿ

• ಉದಯವಾಹಿನಿ, ಬೆಳಗಾವಿ

'ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷದ ಭದ್ರಬುನಾದಿಯಾಗಿದ್ದು, ಅವರಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂಬುದು ನನ್ನ ನಿಲುವು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಚುನಾವಣೆ ಸಂದರ್ಭ ಮತ್ತು ನಂತರ ಅಲ್ಪಸಂಖ್ಯಾತ ಮುಖಂಡರನ್ನು ಪಕ್ಷದಿಂದ ದೂರವಿಟ್ಟಿದ್ದು ಅಥವಾ ಹೊರಹಾಕಿದ್ದು ಸರಿಯಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಿಳಿಸಿದ್ದೇನೆ. ಮುಂದೆ ಇದನ್ನು ಸರಿಪಡಿಸುವುದಾಗಿ ಭರವಸೆ ನೀಡಿದ್ದಾರೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು. ಶಾಸಕ ಎನ್.ಎ.ಹ್ಯಾರಿಸ್ ಮತ್ತು ಅವರ ಪುತ್ರ ಮೊಹಮ್ಮದ್ ನಲಪಾಡ್ ಮನೆ ಮೇಲೆ ಇ.ಡಿ ದಾಳಿ ಕುರಿತು ಇಂತಹ ಘಟನೆಗಳು ಸಹಜವಾಗಿ ನಡೆಯುತ್ತಿರುತ್ತವೆ. ಕಾನೂನು ಹೋರಾಟ ಮಾಡಬೇಕಷ್ಟೆ ಎಂದರು.

## ಶಾಲಾ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ: ಪ್ರಕ್ರಿಯೆ ಆರಂಭ

• ಉದಯವಾಹಿನಿ, ಬೆಂಗಳೂರು

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಮಂಗಳವಾರದಿಂದ (ಏ.21) ಆರಂಭವಾಗಲಿದೆ. ಜಿಲ್ಲಾ ಹಂತಗಳಲ್ಲಿ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿಕೊಂಡು ಪ್ರಕ್ರಿಯೆ ಆರಂಭಿಸಬೇಕು. ಅಂಗವಿಕಲ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ವರ್ಗಾವಣಾ ತಂತ್ರಾಂಶದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಅನುಗುಣವಾಗಿ ಬಡ್ತಿ ನೀಡಬೇಕು. ಸುಳ್ಳು ದಾಖಲೆ ಸಲ್ಲಿಸಿ ಬಡ್ತಿ ಪಡೆಯುವ ಪ್ರಕರಣಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು.

ಬಡ್ತಿ ನಿರಾಕರಿಸುವ ಶಿಕ್ಷಕರಿಂದ ಕಡ್ಡಾಯವಾಗಿ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆದೇಶದಲ್ಲಿ ಹೇಳಿದೆ. ಬಡ್ತಿಗೆ ಅರ್ಹರಾದವರ ಪಟ್ಟಿ ಪ್ರಕಟಿಸಿದ ನಂತರ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಬೇಕು. ಎಲ್ಲ ಪ್ರಕ್ರಿಯೆಗಳನ್ನೂ ಏ.29ರ ಒಳಗೆ ಮುಕ್ತಾಯ ಮಾಡಬೇಕು ಎಂದು ಸೂಚಿಸಲಾಗಿದೆ.

ಹೊಸ ಮಾರ್ಗಸೂಚಿ ಪ್ರಕಾರ ಮೂರು ಹುದ್ದೆಗಳಿದ್ದರೆ ಎರಡು ಹುದ್ದೆಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಒಂದು ಹುದ್ದೆ ಪದವೀಧರ ಪ್ರಾಥಮಿಕ ಶಿಕ್ಷಕರಿಗೆ ಮೀಸಲಾಗಿರುತ್ತದೆ. ಪದೋನ್ನತಿಗೆ ಪರಿಗಣಿಸಲು ಎರಡೂ ವೃಂದದ ಶಿಕ್ಷಕರು ಕನಿಷ್ಠ 12 ವರ್ಷಗಳ ಸೇವಾವಧಿ ಪೂರೈಸಿರಬೇಕು.

## ವಿನಯ ಕುಲಕರ್ಣಿಗೆ ಶಿಕ್ಷೆ: ಆದೇಶ ತಲುಪಿಲ್ಲ ಎಂದ ವಿಧಾನಸಭಾಧ್ಯಕ್ಷ

• ಉದಯವಾಹಿನಿ, ಬೆಂಗಳೂರು

'ಶಾಸಕ ವಿನಯ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ವಿಧಿಸಿರುವ ಕುರಿತು ನ್ಯಾಯಾಲಯದಿಂದ ಈ ವರೆಗೆ ನಮ್ಮ ಕಚೇರಿಗೆ ಅಧಿಕೃತ ಆದೇಶ ಬಂದಿಲ್ಲ. ಆದೇಶ ಬಂದ ನಂತರ ಮುಂದಿನ ಕ್ರಮದ ಬಗ್ಗೆ ಯೋಚಿಸಲಾಗುವುದು' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು. 'ಕೇಂದ್ರ ಸರ್ಕಾರ ಯಾವ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲು ಹೊರಟಿದೆ ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದರು. 'ಆದರೆ, ಯಾವುದೇ ಕಾನೂನು ರೂಪಿಸುವಾಗ ಎಲ್ಲಾ ಪ್ರದೇಶ, ಜಾತಿ, ವರ್ಗ, ಧರ್ಮದವರನ್ನು ವಿಶ್ವಾಸಕ್ಕೆ ಪಡೆದು, ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗುತ್ತದೆ' ಎಂದು ಹೇಳಿದರು. ಸಮಿತಿ ಸಭೆ: ಪಕ್ಷಾಂತರ ನಿಷೇಧ ಕಾಯ್ದೆ ಬಲಪಡಿಸುವ ನಿಟ್ಟಿನಲ್ಲಿ ರಚನೆಯಾಗಿರುವ ಪರಿಶೀಲನಾ ಸಮಿತಿಯ ಸಭೆಯು ಒಡಿಶಾದ ಭುವನೇಶ್ವರದಲ್ಲಿ ಇದೇ 22 ಮತ್ತು 23ರಂದು ನಡೆಯಲಿದೆ. ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ನಾಗಾಲ್ಯಾಂಡ್, ಸಿಕ್ಕಿಂ ರಾಜ್ಯಗಳ ಸ್ಪೀಕರ್‌ಗಳು, ಹಿರಿಯ ವಕೀಲರು ಭಾಗವಹಿಸಲಿದ್ದಾರೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ರಚಿಸಿರುವ ಈ ಸಮಿತಿ ಈಗಾಗಲೇ ಒಂದು ಸಭೆ ನಡೆಸಿದ್ದು. ಇನ್ನು ಒಂದು ವರ್ಷದ ಒಳಗಾಗಿ ವರದಿ ಸಲ್ಲಿಸಲಿದೆ ಎಂದರು.

**ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳ ಬದಲು ಗ್ರೇಡ್ ನೀಡಲು ಮುಂದಾಗಿದ್ದ ರಾಜ್ಯ ಸರ್ಕಾರದ ಕ್ರಮಕ್ಕೆ ಹೈಕೋರ್ಟ್‌ನಲ್ಲಿ ತೀವ್ರ ಹಿನ್ನಡೆಯಾಗಿದ್ದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಅಂಕಗಳನ್ನು ನೀಡುವ ಪದ್ಧತಿ ಮುಂದುವರಿಸಬೇಕು ಎಂದು ಸೂಚನೆ ನೀಡಿದೆ.**





**ರಾಜ್ಯ ಸರ್ಕಾರಕ್ಕೆ ಹಿನ್ನಡೆ**

**ತೃತೀಯ ಭಾಷೆಗಳಿಗೆ ಗ್ರೇಡ್ ಬದಲು ಅಂಕಗಳನ್ನೇ ನೀಡಲು ಹೈಕೋರ್ಟ್ ಆದೇಶ**

# ಗ್ರೇಡ್ ಬಿಡಿ ಅಂಕ ಕೊಡಿ

**ಹೈಕೋರ್ಟ್ ಆದೇಶ ಮರುಪರಿಶೀಲನಾ ಅರ್ಜಿ ಇತ್ಯರ್ಥ**

1 ಗ್ರೇಡ್ ಬದಲು SSLC ಪರೀಕ್ಷೆಗೆ ಮತ್ತೆ ಅಂಕ ಪದ್ಧತಿ ಅನುಸರಿಸಿ ಎಂದ ಹೈಕೋರ್ಟ್ ಪೀಠ

2 ಅಗತ್ಯವಾದ ನಿಯಮ ರೂಪಿಸಬೇಕು, ನಿಯಮಕ್ಕೂ ಮುನ್ನ ಅಂಕ ಪದ್ಧತಿ ಬದಲು ಸೂಕ್ತವಲ್ಲ

3 ರಾಜ್ಯ ಸರ್ಕಾರದ ಪುನರ್ ಪರಿಶೀಲನಾ ಅರ್ಜಿ ವಜಾಗೊಳಿಸಿದ ಹೈಕೋರ್ಟ್

| ಎಸ್‌ಎಸ್‌ಎಲ್‌ಸಿ ಬರೆದ ವಿದ್ಯಾರ್ಥಿಗಳು | |
|---|---|
| 4.25 ಲಕ್ಷ | ಬಾಲಕರು |
| 4.05 ಲಕ್ಷ | ಬಾಲಕಿಯರು |
| 8.30 ಲಕ್ಷ | ಒಟ್ಟು ವಿದ್ಯಾರ್ಥಿಗಳು |

**ಮೌಲ್ಯಮಾಪನದಲ್ಲಿ ಅಂಕವೇ ಪರಿಗಣಿಸಲ್ಪಟ್ಟಿದೆ!**

ಈಗಾಗಲೇ ಎಸ್‌ಎಸ್‌ಎಲ್ ಮೌಲ್ಯಮಾಪನ ಬಹುತೇಕ ಪೂರ್ಣಗೊಂಡಿದೆ. ಹಿಂದಿ ಸೇರಿದಂತೆ ತೃತೀಯ ಭಾಷೆ ಬರೆದ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯನ್ನು ಕೂಡಾ ಮೌಲ್ಯಮಾಪಕರು ಅಂಕಗಳನ್ನೇ ನಮೂದಿಸಿದ್ದಾರೆ.

**ರಿಟ್ ಅರ್ಜಿ ಸಲ್ಲಿಸಿದ್ದ ಯುವತಿ**

ಸಹನಾ ಆರ್ ನಾಯ್ಕ್ ಎನ್ನುವ ಚಿಕ್ಕಮಗಳೂರಿನ ಯುವತಿ, ಕೇಂದ್ರದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಂಕ ಮುಖ್ಯ ಗ್ರೇಡ್ ಕೊಟ್ಟರೆ ಭವಿಷ್ಯ ಸಮಸ್ಯೆ. ಗ್ರೇಡ್ ಬದಲು ಅಂಕ ಕೊಡುವಂತೆ ನಿರ್ದೇಶನ ಕೊಡುವಂತೆ ಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಸದ್ಯ ಹೈ ಕೋರ್ಟ್‌ನ ಈ ಆದೇಶ ತೃತೀಯ ಭಾಷೆಗೂ ಅನ್ವಯವಾಗುತ್ತದೆ.

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ಅಂಕಗಳನ್ನೇ ನೀಡಬೇಕೆಂದು ನಿರ್ದೇಶನ ನೀಡಿದ್ದ ಹೈಕೋರ್ಟ್ ಆದೇಶದ ಕ್ರಮವನ್ನು ಮರುಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕಗಳ ಬದಲಿಗೆ ಗ್ರೇಡ್ ನೀಡುವುದಾಗಿ ಸ್ಪಷ್ಟಪಡಿಸಬೇಕಿತ್ತು. ಆದರೆ, ಅಧಿಸೂಚನೆಯಲ್ಲಿ ತಿಳಿಸದ ಅಂಶವನ್ನು ಪರಿಚಯಿಸಿ ಗ್ರೇಡ್ ಪದ್ಧತಿಯನ್ನು ಅನುಷ್ಠಾನಕ್ಕೆ ಮುಂದಾಗಿದ್ದೀರಿ. ನಿಯಮ ರೂಪಿಸಿದ ಬಳಿಕ ಸರ್ಕಾರ ಸೂಕ್ತವೆನಿಸಿದ ಕ್ರಮ ಕೈಗೊಳ್ಳಬಹುದು. ನಿಯಮ ರೂಪಿಸುವ ಮುಂಚಿನ ಪರೀಕ್ಷೆಯ ಅಂಕ ಪದ್ಧತಿ ಬದಲಾವಣೆ ಸೂಕ್ತವಲ್ಲ ಎಂದು ತಿಳಿಸಿದ ಪೀಠ, 2025-26ನೇ ಸಾಲಿಗೆ ಹಿಂದಿ ಭಾಷೆ ಸೇರಿದಂತೆ ತೃತೀಯ ಭಾಷೆಗಳಿಗೆ ಅಂಕಗಳನ್ನೇ ನೀಡುವುದನ್ನು ಮುಂದುವರೆಸಬೇಕು ಎಂದು ಸೂಚಿಸಿ ಅರ್ಜಿ ಇತ್ಯರ್ಥಪಡಿಸಿದೆ.

ಇದಕ್ಕೂ ಮುನ್ನ ಸರ್ಕಾರದ ಪರವಾಗಿ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, ಇದೇ ಅಂಶವನ್ನು ಪ್ರಶ್ನಿಸಿ ವಿಭಾಗೀಯ ಪೀಠದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿ ವಜಾಗೊಂಡಿದ್ದು, ಅರ್ಜಿದಾರರಿಗೆ ದಂಡ ವಿಧಿಸಲಾಗಿದೆ. ಅಲ್ಲದೆ, ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣರಾಗುತ್ತಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳ ಮೇಲೆ ಒತ್ತಡ ಕಡಿಮೆ ಮಾಡುವ ಸಲುವಾಗಿ ಈ ಕ್ರಮಕ್ಕೆ ಮುಂದಾಗಿದ್ದೇವೆ. ಅಗತ್ಯ ಸೂಕ್ತ ತಿದ್ದುಪಡಿಯೊಂದಿಗೆ ನಿಯಮ ರಚಿಸಲು ಸರ್ಕಾರ ಕರಡು ರೂಪಿಸುತ್ತಿದೆ ಎಂದು ಪೀಠಕ್ಕೆ ವಿವರಿಸಿದರು.

ಹಿನ್ನೆಲೆ: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು(ಎನ್‌ಎಸ್‌ಕ್ಯೂಎಫ್) ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಪರೀಕ್ಷೆ ನಡೆಯುತ್ತಿದ್ದ ಸಂದರ್ಭ (ಮಾರ್ಚ್ 28)ದಲ್ಲಿ ಪ್ರಕಟಿಸಿದ್ದರು. ಆ ಕ್ರಮವನ್ನು ಪ್ರಶ್ನಿಸಿ ವಿದ್ಯಾರ್ಥಿನಿಯರಾದ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್, ಉಡುಪಿಯ ಅನುಷಾ ಮತ್ತು ಸುಧೀಕ್ಷಾ ಅವರು ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಅರ್ಜಿಯನ್ನು ಏ.15ರಂದು ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರ ಪೀಠ, 2025-26ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು.


ಹಿಂದಿ ಸೇರಿ ತೃತೀಯ ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿ, ಅರ್ಜಿ ಇತ್ಯರ್ಥ ಮಾಡಿತ್ತು.

ಈ ಆದೇಶದ ಮರುಪರಿಶೀಲನೆ ಕೋರಿದ್ದ ಸರ್ಕಾರ, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಕೆಎಸ್‌ಇಎಬಿ) ನಿಯಮಗಳಿಗೆ ತಿದ್ದುಪಡಿ ತರಲು ಈಗಾಗಲೇ ಕರಡು ಅಧಿಸೂಚನೆ (ಏ.10ರಂದು)ಯನ್ನು ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿದೆ.

ಈ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೇ ಆದೇಶ ಪಡೆದುಕೊಂಡಿದ್ದಾರೆ. ಅದೇ ರೀತಿ, ಮೂಲ ತಕರಾರು ಅರ್ಜಿ ಸಂಬಂಧ ನ್ಯಾಯಾಲಯಕ್ಕೆ ತನ್ನ ಆಕ್ಷೇಪಣೆಗಳನ್ನು ಸಲ್ಲಿಸಲು ಸರ್ಕಾರಕ್ಕೆ ಅವಕಾಶವೇ ಸಿಕ್ಕಿಲ್ಲ. ಅರ್ಜಿದಾರರು ಕರಡು ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ನಡುವೆ ಸಮಾನ ಅವಕಾಶ ಕಲ್ಪಿಸಲು ಹಾಗೂ ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡಲು ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯೂಎಫ್ ವಿಷಯಗಳಿಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲು ಉದ್ದೇಶಿಸಲಾಗಿದೆ.

ಅಂಕದ ಬದಲು ಗ್ರೇಡ್ ನೀಡುವುದು ಸುಧಾರಣಾ ಕ್ರಮವಾಗಿದೆ. ಇದು ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಸರ್ಕಾರದ ನಡೆಯಿಂದ ತೃತೀಯ ಭಾಷೆ ತಿರಸ್ಕಾರಕ್ಕೆ ಒಳಗಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ. ಆದ್ದರಿಂದ ಏ.15ರಂದು ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಬೇಕು ಎಂದು ಸರ್ಕಾರ ಕೋರಿತ್ತು.




**ಹೈಕೋರ್ಟ್ ಹೇಳಿದ್ದೇನು**

ಹಿಂದಿ ಭಾಷೆಯಲ್ಲಿ ಲಕ್ಷಕ್ಕೂ ಹೆಚ್ಚು ಜನ ಅನುತ್ತೀರ್ಣಗೊಂಡಿದ್ದರು. ಹೀಗಾಗಿ ವಿದ್ಯಾರ್ಥಿಗಳ ಒತ್ತಡ ಕಮ್ಮಿ ಮಾಡುವ ಉದ್ದೇಶದಿಂದ ಸರಕಾರ ಗ್ರೇಡ್ ನೀಡುವ ನಿರ್ಧಾರಕ್ಕೆ ಬಂದಿತ್ತು. ಆದರೆ ಪರೀಕ್ಷೆಯ ಅಧಿಸೂಚನೆ ಹೊರಡಿಸುವ ಮೊದಲೇ ಈ ನಿಯಮ ಮಾಡಬೇಕಿತ್ತು ಎಂದು ಹೇಳಿದೆ. ಆದರೆ ಪರೀಕ್ಷೆ ಅಧಿಸೂಚನೆಯಲ್ಲಿ ಇಲ್ಲದೇ ಇರುವ ನಿಯಮ ಯಾಕೆ ತರುತ್ತಿದ್ದೀರಿ ಪಿಯುಸಿಯಲ್ಲಿ 83% ಉತ್ತೀರ್ಣರಾಗುತ್ತಿದ್ದಾರೆ. ಎಸ್ ಎಸ್ ಎಲ್ ಸಿಯಲ್ಲಿ ಎಲ್ಲರನ್ನೂ ಪಾಸ್ ಮಾಡುವ ಉದ್ದೇಶವಿದ್ದರೆ ಪರೀಕ್ಷೆ ಯಾಕೆ ಬೇಕಿತ್ತು ನಿಯಮ ರೂಪಿಸಿದ ಬಳಿಕ ಪರೀಕ್ಷೆ ನಡೆಸಿದ್ದರೆ ಸರಿಯಾಗುತ್ತಿತ್ತು, ಈಗ ಬದಲಾವಣೆ ಸರಿಯಲ್ಲ. ಈ ವರ್ಷ ಅಂಕಗಳನ್ನೇ ಕೊಡಿ ಎಂದು ಸೂಚಿಸಿದೆ.

## ಮಾಜಿ ಸ್ಪೀಕರ್ ರಮೇಶ್ ಕುಮಾರ್‌ಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್

• ಉದಯವಾಹಿನಿ, ಬೆಂಗಳೂರು

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಜಿನಗಲಕುಂಟೆ ಅರಣ್ಯ ವಲಯದ ಹೊಸಹುಡ್ಯ ಗ್ರಾಮದಲ್ಲಿ ಭೂ ಒತ್ತುವರಿ ಆರೋಪ ಎದುರಿಸುತ್ತಿರುವ ಮಾಜಿ ಸ್ಪೀಕರ್ ಕೆಆರ್ ರಮೇಶ್ ಕುಮಾರ್‌ಗೆ ಕರ್ನಾಟಕ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ.

60 ಎಕರೆ 23 ಗುಂಟೆ ಜಮೀನನ್ನು 30 ದಿನಗಳೊಳಗೆ ತೆರವುಗೊಳಿಸಿ ಹಸ್ತಾಂತರಿಸಬೇಕೆಂದು ಮೇಲ್ಮನವಿ ಪ್ರಾಧಿಕಾರ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ - ಬೆಂಗಳೂರು) ಮಾಡಿರುವ ಆದೇಶ ಪ್ರಶ್ನಿಸಿ ರಮೇಶ್‌ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ಪೀಠ ಮಧ್ಯಂತರ ಆದೇಶ ನೀಡಿದೆ.

**ಸರ್ವೆ ನಂಬರ್ 1ಕ್ಕೂ ಅರ್ಜಿದಾರರಿಗೂ ಸಂಬಂಧವಿಲ್ಲ.**

ಅರ್ಜಿದಾರರ ಪರ ವಾದ ಮಂಡಿಸಿದ ಆರ್.ಸುಬ್ರಮಣ್ಯ, ''ಮೊದಲಿಗೆ ಸರ್ವೆ ಸೆಟಲ್‌ಮೆಂಟ್ ಆಗಿಲ್ಲಮತ್ತು ಅರಣ್ಯದ ಗಡಿಯೇ ನಿಗದಿಯಾಗಿಲ್ಲ. ಜತೆಗೆ, ಎರಡು ಸರ್ವೆ ನಂಬರ್ ಸಂಬಂಧ ವಿವಾದವಿದೆ. ಸರ್ವೆ ನಂಬರ್ 1ಕ್ಕೂ ಅರ್ಜಿದಾರರಿಗೂ ಸಂಬಂಧವಿಲ್ಲ. ಸರ್ವೆ ನಂಬರ್ 2ರಲ್ಲಿಅರ್ಜಿದಾರರ ಭೂಮಿ ಇದೆ. ದಾಖಲೆಗಳ ಮೂಲದ ಪ್ರಕಾರ 113 ಎಕರೆ ಅರಣ್ಯ ಭೂಮಿ ಎನ್ನಲಾಗಿದೆ.

ಆದರೆ, ಅರಣ್ಯ ಇಲಾಖೆ ಈಗ 245 ಎಕರೆ ಭೂಮಿ ತನಗೆ ಸೇರಿದ್ದೆಂದು ಹಕ್ಕು ಮಂಡಿಸುತ್ತಿದೆ,'' ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಅಲ್ಲದೆ, ''ಹಿಂದೆ ಜಿಲ್ಲಾಧಿಕಾರಿ ಎರಡು ಬಾರಿ ಸ್ಥಳ ಪರಿಶೀಲನೆ ನಡೆಸಿ ಜಂಟಿ ವರದಿಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ಅರಣ್ಯ ಇಲಾಖೆ ತನ್ನದೆಂದು ಹಕ್ಕು ಮಂಡಿಸುತ್ತಿರುವ ಭೂಮಿಯ ಕುರಿತು ಯಾವುದೇ ದಾಖಲೆ ಸಲ್ಲಿಸಿಲ್ಲವೆಂದು ಸ್ಪಷ್ಟವಾಗಿ ಹೇಳಿದೆ.

ಮೇಲಾಗಿ 50 - 60 ವರ್ಷಗಳ ಹಿಂದೆಯೇ ಕಂದಾಯ ಇಲಾಖೆ ಭೂಮಿಯನ್ನು ಹಲವರಿಗೆ ಮಂಜೂರು ಮಾಡಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.



ಕರ್ನಾಟಕ ಅರಣ್ಯ ಕಾಯಿದೆ ಸೆಕ್ಷನ್ 19 ರಡಿ ಅರಣ್ಯದ ಗಡಿ ನಿಗದಿ ಮಾಡದ ಹೊರತು ಯಾವುದೇ ತೀರ್ಮಾನ ಕೈಗೊಳ್ಳುವಂತಿಲ್ಲ. ಆದರೆ, ಮೇಲ್ಮನವಿ ಪ್ರಾಧಿಕಾರ ಡಿಸಿ ವರದಿ ಸೇರಿದಂತೆ ಯಾವ ಅಂಶಗಳನ್ನೂ ಪರಿಗಣಿಸದೆ ತೆರವುಗೊಳಿಸಬೇಕೆಂದು ಆದೇಶ ಹೊರಡಿಸಿರುವುದು ಕಾನೂನು ಬಾಹಿರ,'' ಎಂದು ಹೇಳಿದರು. ಕಳೆದ ಏಪ್ರಿಲ್ 10ರಂದು ರಮೇಶ್ ಕುಮಾರ್ ಸಲ್ಲಿಸಿದ್ದ ಮೇಲ್ಮನವಿ ತಿರಸ್ಕರಿಸಿದ್ದ ಮೇಲ್ಮನವಿ ಪ್ರಾಧಿಕಾರ, 2011ರ ಜೂನ್ 24 ರಂದು ಕೋಲಾರ ವಲಯದ ಉಪ ಅರಣ್ಯ ಸಂರಕ್ಷಣಾಧಿಕಾರಿಯು ಒತ್ತುವರಿ ತೆರವಿಗೆ ಆದೇಶಿಸಿದ್ದ ಕ್ರಮ ಎತ್ತಿಹಿಡಿದಿದೆ. 2025ರ ಜನವರಿ 15 ಹಾಗೂ 16ರಂದು ನಡೆಸಿದ ಜಂಟಿ ಸಮೀಕ್ಷೆಯಲ್ಲಿ ಒತ್ತುವರಿಯಾಗಿರುವುದು ದೃಢಪಟ್ಟಂತೆ ಹೊಡಹುಡ್ಯ ಗ್ರಾಮದ ಸರ್ವೆ ಸಂಖ್ಯೆ 1ರಲ್ಲಿ ಆರು ಎಕರೆ ಮತ್ತು ಸರ್ವೆ ಸಂಖ್ಯೆ 2 ರಲ್ಲಿನ 54 ಎಕರೆ 23 ಗುಂಟೆ ಸೇರಿ ಒಟ್ಟು 60 ಎಕರೆ 23 ಗುಂಟೆ ಜಮೀನನ್ನು ತೆರವುಗೊಳಿಸಬೇಕು ಎಂದು ಆದೇಶಿಸಿದ್ದಾರೆ.

**ಭೂ ಒತ್ತುವರಿ ಆರೋಪ**

ಮೇಲ್ಮನವಿ ಪ್ರಾಧಿಕಾರ ಹಾಗೂ ಅರಣ್ಯ ಸಂರಕ್ಷಣಾಧಿಕಾರಿ ಹೊರಡಿಸಿರುವ ಆದೇಶ ರದ್ದುಪಡಿಸಬೇಕು ಮತ್ತು ಕೋಲಾರ ಜಿಲ್ಲಾಧಿಕಾರಿ ಮೂರು ಬಾರಿ ಸಲ್ಲಿಸಿರುವ ವರದಿ ಸಂಬಂಧ ಕ್ರಮ ಕೈಗೊಳ್ಳುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ರಮೇಶ್ ಕುಮಾರ್ ಹೈಕೋರ್ಟ್‌ನ ಮೊರೆ ಹೋಗಿದ್ದರು.

## 600 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂ ಶಂಕುಸ್ಥಾಪನೆ

### ದೇವರಾಜು ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬೃಹತ್ ಕಾರ್ಯಕ್ರಮಕ್ಕೆ ಚಾಲನೆ

• ಉದಯವಾಹಿನಿ, ಗುಂಡ್ಲುಪೇಟೆ

ಕ್ಷೇತ್ರದ 110 ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಸಲುವಾಗಿ 475 ಕೋಟಿ ವೆಚ್ಚದ ನೀರು ತುಂಬಿಸುವ ಯೋಜನೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಶಂಕುಸ್ಥಾಪನೆ ನೆರವೇರಿಸಿದರು. ಪಟ್ಟಣದ ದೇವರಾಜು ಅರಸು ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಬೃಹತ್ ಕಾರ್ಯಕ್ರಮಕ್ಕೆ ದೀಪಬೆಳಗಿಸುವ ಮೂಲಕ ಚಾಲನೆ ನೀಡಿದರು.

ಗುಂಡ್ಲುಪೇಟೆಗೆ ಬರುವುದೆಂದರೆ ಸಂತಸವಾಗುತ್ತದೆ ಶಾಸಕ ಗಣೇಶ್ ಪ್ರಸಾದ್ ಬೇಡಿಕೆಗಳಿಗೆ ಸ್ಪಂದಿಸಿ ಕ್ಷೇತ್ರದ ಅಭಿವೃದ್ಧಿಗಾಗಿ 523 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೇರವೇರಿಸಿದ್ದೇನೆ, ಈ ಭಾಗದ ರೈತರ ಬಹುದಿನಗಳ ಬೇಡಿಕೆ ಹಾಗೂ ಕನಸನ್ನ ನನಸು ಮಾಡಲು 110 ಕೆರೆಕಟ್ಟೆಗಳನ್ನ ಗೊತ್ತುಪಡಿಸಿ 475 ಕೋಟಿ ಯೋಜನಾ ವೆಚ್ಚದಲ್ಲಿ ನೀರು ತುಂಬಿಸಲು ಚಾಲನೆ ನೀಡಲಾಗಿದೆ. ಕೆರೆಗಳಿಗೆ ನೀರು ತುಂಬಿಸುವುದರ ಹಿಂದೆ ರೈತರ ಕಷ್ಟ ಕಾರ್ಪಣ್ಯಗಳನ್ನ ತೊಡೆದುಹಾಕುವ ಸದುದ್ದೇಶವಿದೆ, ಕೆರೆಗಳಿಗೆ ನೀರು ತುಂಬಿದರೆ ಅಂತರ್ಜಲ ವೃದ್ಧಿಯಾಗುವ ಜತೆಗೆ ರೈತರ ಪಂಪ್ ಸೆಟ್‌ಗಳಿಗೆ ಸಕಾಲಕ್ಕೆ ನೀರು ಪೂರೈಕೆಯಾದಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗುತ್ತದೆ, ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಅವರ ದೂರದೃಷ್ಟಿ ಚಿಂತನೆಯಿಂದ ಸಮಸ್ಯೆಗಳಿಗೆ ತ್ವರಿತಪರಿಹಾರ ಸಿಗುತ್ತಿದೆ ಇಂದು ಚಾಲನೆ ನೀಡಿರುವ ಅಷ್ಟೂ ಅಭಿವೃದ್ಧಿ ಕಾಮಗಾರಿಗಳನ್ನ ಸಿದ್ಧಿಗೊಳಿಸಿದ ಕೀರ್ತಿ ಗಣೇಶ್ ಪ್ರಸಾದ್‌ಗೆ ಸಲ್ಲುತ್ತದೆ ಎಂದು ಶ್ಲಾಘಿಸಿದರು.

ಗುಂಡ್ಲುಪೇಟೆ ಹಿಂದುಳಿದಾ ತಾಲ್ಲೂಕಾಗಿರುವುದರಿಂದ ನಾವು ವಿಶೇಷ ಪ್ರಾತಿನಿಧ್ಯ ನೀಡಿದ್ದೇವೆ, ಮಹದೇವಪ್ರಸಾದ್ ಅವರ ಕಾಲದಲ್ಲಿಯೇ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ನಾನೇ ಮಂಜೂರಾತಿ ನೀಡಿದ್ದ ಹಾಗೇಯೇ ಪ್ರಸ್ತುತವಾಗಿ ಶಂಕುಸ್ಥಾಪನೆ ನೆರವೇರಿಸಿದ್ದರೂ ಸಹ ಅದರ ಹಿಂದಿನ ಶ್ರಮದ ಫಲ ನಿಮ್ಮ ಶಾಸಕರದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ವರ್ಷಗಳ ಅವಧಿಯಲ್ಲಿ ಅನೇಕ ಜನಪರ ಕೆಲಸಗಳನ್ನ ಮಾಡಿರುವ ಗಣೇಶ್ ಕ್ಷೇತ್ರದ ಮತದಾರರ ನಂಬಿಕೆ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಶ್ಲಾಘಿಸಿದರು.

ಕಾಂಗ್ರೆಸ್ ಸರ್ಕಾರದ ಅವದಿಯಲ್ಲಾಗುತ್ತಿರುವ ಸರ್ವಾಂಗೀಣ ಅಭಿವೃದ್ಧಿಯನ್ನ ಕಂಡು ಹರಗಿಸಿಕೊಳ್ಳಲಾಗದ ಬಿಜೆಪಿಯವರು ಅಪಪ್ರಚಾರದಲ್ಲಿ ತೊಡಗಿದ್ದಾರೆ ಹಾಗಾಗಿ ಯಾರು ಸಹ ಅವರ ಮಾತಿಗೆ ಕಿವಿಗೊಡಬೇಡಿ ಎಂದು ಸಲಹೆ ನೀಡಿದರು.



**ನಮ್ಮದು ರೈತಪರ ಸರ್ಕಾರವೆಂದ ಸಿಎಂ**



**ನಾರಿಶಕ್ತಿ ಬಲಿಷ್ಠವಾಗಿದ್ದು ಕಾಂಗ್ರೆಸ್ಸಿಂದ :** ದೇಶದಲ್ಲಿನ 140 ಕೋಟಿ ಜನಸಂಖ್ಯೆಯಲ್ಲಿ 70 ಕೋಟಿಯಷ್ಟು ಮಹಿಳೆಯರಿದ್ದು ಸಬಲೀಕರಣಕ್ಕಾಗಿ ಕಾಂಗ್ರೆಸ್ ಸಾಕಷ್ಟು ಅವಕಾಶಗಳನ್ನ ಮಾಡಿಕೊಟ್ಟಿದೆ, ನಾರಿಶಕ್ತಿ ಎಂಬುದು ಬಿಜೆಪಿಯವರ ಕೇವಲ ಹೊರನುಡಿಯಾಗಿದೆಯಷ್ಟೆ ನಾವು ರಾಜಕೀಯ ನಿರ್ಣಯದಲ್ಲಿಯೂ ಸಹ ಸ್ತ್ರೀ ಶಕ್ತಿ ಪಾತ್ರ ಬಹುಮುಖ್ಯ ಎಂಬುದನ್ನ ಸಾಬೀತು ಪಡಿಸಿದ್ದೇವೆ ಎಂದು ಗೇಲಿ ಮಾಡಿದರು. ಮಹಿಳಾ ಮೀಸಲಾತಿ ಕುರಿತಾಗಿ ಸಂವಿಧಾನವನ್ನ ತಿದ್ದುಪಡಿ ಮಾಡಲೊರಟಿರುವ ಬಿಜೆಪಿಗರ ನಡೆಯನ್ನ ವಿರೋಧಿಸುತ್ತಿದ್ದೇವೆಯೇ ಹೊರತು ಮಹಿಳಾ ಮೀಸಲಾತಿಯನ್ನಲ್ಲ ಎಂದು ಸ್ಪಷ್ಟನೆ ನೀಡಿದರು.

**ಮಹಿಳಾ ಮೀಸಲಾತಿಗೆ ವಿರೋಧವಿಲ್ಲ**

ನಾವು ಮಹಿಳಾ ಮೀಸಲಾತಿ ವಿರೋಧಿಗಳಲ್ಲ ಈ ಹಿಂದೆಯೇ ಅನೇಕ ತಿದ್ದುಪಡಿಗಳನ್ನ ತಂದಂತ ವೇಳೆ ವಿರೋಧ ವ್ಯಕ್ತಪಡಿಸಿದ್ದ ಬಿಜೆಪಿಗರು ಯಾವ ನೈತಿಕತೆಯ ಮೇಲೆ ನಮ್ಮನ್ನ ಮಹಿಳಾ ಮೀಸಲಾತಿ ವಿರೋಧಿಗಳು ಎಂದು ಜನರಿಗೆ ತಪ್ಪು ಸಂದೇಶಗಳನ್ನ ರವಾನಿಸುತ್ತಿದ್ದಾರೆಯೋ ಗೊತ್ತಿಲ್ಲ, ಈ ಮುಂಚೆಯೇ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಟ್ಟಿದ್ದು ಕಾಂಗ್ರೆಸ್, ದೇಶದಲ್ಲಿ ಮಹಿಳೆಯರ ಪರವಾಗಿ ಇರುವ ಏಕೈಕ ಪಕ್ಷ ಕಾಂಗ್ರೆಸ್ ಮಾತ್ರ ಎಂದು ವಿಪಕ್ಷದವರ ಟೀಕೆಗೆ ತಿರುಗೇಟು ನೀಡಿದರು.

ಗ್ಯಾರಂಟಿ ಯೋಜನೆ ಜಾರಿಯಾಗಿದ್ದೆಯಾದಲ್ಲಿ ರಾಜ್ಯ ದಿವಾಳಿಯಾಗುತ್ತದೆ ಎಂದು ಬೀಗುತ್ತಿದ್ದ ಬಿಜೆಪಿಯವರೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳನ್ನ ಅನುಸರಣೆ ಮಾಡುತ್ತಿರುವುದು ನಾಚಿಕೆಗೇಡು ಎಂದು ಕಿಡಿಕಾರಿದರು. ನಿಮ್ಮ ಶಾಸಕರ ಉತ್ಸಾಹಕ್ಕೆ ನಮ್ಮ ಸರ್ಕಾರ ಅಡ್ಡಿಯಾಗುವುದಿಲ್ಲ ತಂದೆಯ ಹಾದಿಯಲ್ಲಿ ಅವರು ಉತ್ತುಂಗತ ಕೆಲಸ ಕಾರ್ಯಗಳನ್ನ ನಿರ್ವಹಿಸುಕೊಂಡು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಈ ಹಿನ್ನೆಲೆಯಲ್ಲಿ ಸರ್ಕಾರ ಅವರ ಜೊತೆ ಸದಾಕಾಲವಿರುತ್ತದೆ ಇಂತಹ ಶಾಸಕರನ್ನ ಪಡೆದ ನೀವೇ ಧನ್ಯರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದಕ್ಕೂ ಮುಂಚೆ ಸಿಎಂ ಆಗಮಿಸುತ್ತಿದ್ದಂತೆ ಎಲಿಪ್ಯಾಡ್ ಬಳಿ ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪ ಪುಷ್ಪಗುಚ್ಛ ನೀಡುವ ಮೂಲಕ ಆತ್ಮೀಯವಾಗಿ ಬರಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಡಿಸಿಎಂ ಡಿಕೆ ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಸಂಸದ ಸುನಿಲ್ ಬೋಸ್, ಶಾಸಕರಾದ ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಎ.ಆರ್.ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಶ್ರೀ ರೂಪ, ಸಿಇಒ ಮೋನಾ ರೋತ್, ವಿಭಾಗೀಯ ಅಧಿಕಾರಿ ಮಹೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಹಾಗೂ ಗೃಹಲಕ್ಷ್ಮೀ ಫಲಾನುಭವಿ ಮಹಿಳೆಯರು, ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಹಿರಿಯರು ಭಾಗಿಯಾಗಿದ್ದರು.

**ಈ ದಿನದ ದರ** ಪೆಟ್ರೋಲ್: 103.33 ₹/L ಡೀಸೆಲ್ : 91.84 ₹/L ಬಂಗಾರ: ₹15,529/Gram24ct ₹14,235/Gram22ct ಬೆಳ್ಳಿ: ₹265.00/Gram

# ರಾಜ್ಯದಲ್ಲಿ ಈ ಬಾರಿ ಮುಂಗಾರು ಕೊರತೆ, ಬರದ ಭೀತಿ

• ಉದಯವಾಹಿನಿ, ಬೆಂಗಳೂರು

ಒಂದೆಡೆ ಜೂನ್‌ವರೆಗೆ ಬಿಸಿಗಾಳಿಯ ಮುನ್ಸೂಚನೆ, ಅದರ ಜೊತೆಗೆ ಬೇಸಿಗೆ ಹಂಗಾಮಿನಲ್ಲಿ ಬಿತ್ತನೆ ಪ್ರಮಾಣವೂ ಕುಂಠಿತವಾಗಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ಹವಾಮಾನ ಇಲಾಖೆ ಪ್ರಕಾರ ರಾಜ್ಯದಲ್ಲಿ ಈ ಬಾರಿ ಮುಂಗಾರು ಮಳೆ ಕೊರತೆಯಾಗಲಿದೆ. ಆ ಮೂಲಕ ರಾಜ್ಯದಲ್ಲಿ ಬರದ ಭೀತಿ ಕಾಡಲು ಆರಂಭವಾಗಿದೆ. ರಾಜ್ಯದಲ್ಲಿ ಏಪ್ರಿಲ್‌ನಿಂದ ಜೂನ್ ಅವಧಿಗೆ ಬಿಸಿಗಾಳಿಯ ದಿನಗಳ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ರಾಜ್ಯದ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಅಂದರೆ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡುಬರುವ ಸಾಧ್ಯತೆಗಳಿವೆ ಎಂದು ಎಚ್ಚರಿಕೆ ನೀಡಿದೆ. ಬೀದರ್, ಕಲಬುರಗಿ, ರಾಯಚೂರು, ವಿಜಯಪುರ, ಯಾದಗಿರಿ, ಗದಗ, ಕೊಪ್ಪಳ, ವಿಜಯನಗರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಜೂನ್ ವರೆಗೆ ಬಿಸಿಗಾಳಿ ಬೀಸುವ ಮುನ್ಸೂಚನೆಯನ್ನು ಇಲಾಖೆ ನೀಡಿದೆ. ಉಳಿದಂತೆ ಕರಾವಳಿ, ಮಲೆನಾಡು ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ವಾಡಿಕೆಗಿಂತ ಕಡಿಮೆ ಬಿಸಿಗಾಳಿ ದಿನಗಳು ಸಾಧ್ಯತೆ ಇದ್ದು, ದಕ್ಷಿಣ ಒಳನಾಡಿನ ಅಲ್ಲಲ್ಲಿ ಹೆಚ್ಚಿನ ತಾಪಮಾನ ಮತ್ತು ಬಿಸಿಗಾಳಿ ಎದುರಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. **ಕೃಷಿ ಬಿತ್ತನೆಯಲ್ಲಿ ಕುಸಿತ:** ಇತ್ತ ಮಳೆಯ ಕೊರತೆ ಮಧ್ಯೆ ಬಿಸಿಗಾಳಿಯ ಮಧ್ಯೆ ರಾಜ್ಯ ಮಾರ್ಚ್ ಅಂತ್ಯದ ವರೆಗೆ ಬೇಸಿಗೆ ಋತುವಿನಲ್ಲಿ ಬಿತ್ತನೆ ಗುರಿ ಮುಟ್ಟಲು ಸಾಧ್ಯವಾಗಿಲ್ಲ. ವಾಡಿಕೆ ಬಿತ್ತನೆ ಸಾಧ್ಯವಾಗದೆ ಕುಸಿತ ಕಂಡು ಬಂದಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ. ಬೇಸಿಗೆ ಋತುವಿನಲ್ಲಿ ರಾಜ್ಯದಲ್ಲಿ 6.40 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ ನಿಗದಿಯಾಗಿತ್ತು. ಆದರೆ, ಮಾರ್ಚ್ ಅಂತ್ಯಕ್ಕೆ ಆಗಿರುವ ವಾಸ್ತವಿಕ ಬಿತ್ತನೆ 4.54 ಲಕ್ಷ ಹೆಕ್ಟೇರ್ ಮಾತ್ರ. ಶೇಕಡಾವಾರು ಬಿತ್ತನೆ ವ್ಯಾಪ್ತಿ 71ರಷ್ಟು ಮಾತ್ರ ಎಂದು ಕೃಷಿ ಇಲಾಖೆ ಅಂಕಿಅಂಶ ನೀಡಿದೆ. ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಕಂಡು ಬಂದ ಸರಾಸರಿ ವಾಡಿಕೆ ಬಿತ್ತನೆ ಪ್ರದೇಶ 4.72 ಲಕ್ಷ ಹೆಕ್ಟೇರ್. ಅಂದರೆ ಶೇಕಡಾವಾರು ವಾಡಿಕೆ ಬಿತ್ತನೆ ವ್ಯಾಪ್ತಿ 965 ಇರುತ್ತದೆ. ಕಳೆದ ವರ್ಷ 2025ರಲ್ಲಿ ಇದೇ ಅವಧಿಗೆ ಅಂದರೆ ಮಾ. 31ರ ವೇಳೆಗೆ ಬಿತ್ತನೆ ವ್ಯಾಪ್ತಿ 5.74 ಲಕ್ಷ ಹೆಕ್ಟೇರ್ ಆಗಿತ್ತು. ಈ ಬಾರಿಯ ಗುರಿಗಿಂತ 1.86 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಕುಸಿತ ಕಂಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ 1.2 ಲಕ್ಷ ಹೆಕ್ಟೇರ್ ಬಿತ್ತನೆ ಪ್ರದೇಶ ಕಡಿಮೆಯಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.


ಉದಯವಾಹಿನಿ ಚಿತ್ರ

### ಮುಂಗಾರಿನ ಮಳೆಯ ಪರಿಸ್ಥಿತಿ ಹೇಗಿದೆ

**ಮಾರ್ಚ್ 1ರಿಂದ ಏಪ್ರಿಲ್ 15ರವರೆಗೆ 10 ಜಿಲ್ಲೆಗಳಾದ ಧಾರವಾಡ, ಉತ್ತರ ಕನ್ನಡ, ಶಿವಮೊಗ್ಗ, ಕಲಬುರಗಿ, ಹಾವೇರಿ, ಗದಗ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ದಾವಣಗೆರೆ, ಉಡುಪಿಯಲ್ಲಿ ಅತ್ಯಧಿಕ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ವಾಡಿಕೆಯಂತೆ ವಿಜಯನಗರ, ತುಮಕೂರು, ಬಳ್ಳಾರಿ, ವಿಜಯಪುರ, ಚಿತ್ರದುರ್ಗ, ಬೆಂಗಳೂರು ನಗರ, ಬೆಂಗಳೂರು ದಕ್ಷಿಣ, ದಕ್ಷಿಣ ಕನ್ನಡ, ಹಾಸನ, ಕೋಲಾರ ಸೇರಿ 10 ಜಿಲ್ಲೆಗಳಲ್ಲಿ ವಾಡಿಕೆ ಮಳೆಯಾಗಿದೆ.**

## ನಾನು ಜೆಡಿಎಸ್‌ಗೆ ಹೋಗ್ತೀನಿ ಅನ್ನೋದು ಊಹಾಪೋಹ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನನಗೆ ಕಾಂಗ್ರೆಸ್ ಏನು ಕಡಿಮೆ ಮಾಡಿಲ್ಲ. ನಾನು ಯಾಕೆ ಜೆಡಿಎಸ್‌ಗೆ ಹೋಗಲಿ. ನಾನು ಜೆಡಿಎಸ್‌ಗೆ ಹೋಗುತ್ತೇನೆ ಅನ್ನೋದು ಊಹಾಪೋಹ ಎಂದು ಸಚಿವ ಜಮೀರ್ ಅಹ್ಮದ್ ಸ್ಪಷ್ಟಪಡಿಸಿದ್ದಾರೆ.

ಜಮೀರ್ ಜೆಡಿಎಸ್‌ಗೆ ಹೋಗುತ್ತಾರೆ, ಕುಮಾರಸ್ವಾಮಿ ಜೊತೆ ರಹಸ್ಯ ಮಾತುಕತೆ ಮಾಡಿದ್ದಾರೆ ಎಂಬ ವಿಚಾರಕ್ಕೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಥೂ..ಥೂನಾನು ಯಾಕೆ ಜೆಡಿಎಸ್‌ಗೆ ಹೋಗಲಿ. ಇದೆಲ್ಲ ಊಹಾಪೋಹ ಸುದ್ದಿ ಎಂದರು. ನಾನು ಜೆಡಿಎಸ್ ಬಿಟ್ಟು ಬಂದು ಮತ್ತೆ ಯಾಕೆ ಹೋಗಲಿ ಕಾಂಗ್ರೆಸ್ ಪಕ್ಷ ನನಗೇನು ಕಡಿಮೆ ಮಾಡಿಲ್ಲ. 2017ರಲ್ಲಿ ನಾನು ಕಾಂಗ್ರೆಸಗೆ ಬಂದೆ. 2018ರಲ್ಲಿ ಸಮ್ಮಿಶ್ರ ಸರ್ಕಾರ ಕುಮಾರಸ್ವಾಮಿ ಸಿಎಂ ಇದ್ದರು. ನಿರೀಕ್ಷೆ ಕೂಡಾ ಮಾಡಿರಲಿಲ್ಲ, ಯಾರನ್ನು ಕೇಳಿರಲಿಲ್ಲ ಆಗಲೇ ಮಂತ್ರಿ ಮಾಡಿದ್ರು. 5 ಖಾತೆಗಳನ್ನ ಕೊಟ್ಟಿದ್ದರು. ಜೆಡಿಎಸ್‌ನಲ್ಲಿ ಕುಮಾರಸ್ವಾಮಿ ಸಿಎಂ ಆಗಿದ್ದಾಗ ವಕ್ಫ್ ಖಾತೆ ಮಾತ್ರ ಕೊಟ್ಟಿದ್ದರು. 5 ಖಾತೆ ಕೊಟ್ಟಿದ್ದರು ಕಾಂಗ್ರೆಸ್ ಅವರು. ಈಗ 2023ರಲ್ಲಿ 4 ಖಾತೆ ಕೊಟ್ಟಿದ್ದಾರೆ. ಕಾಂಗ್ರೆಸ್ ನನಗೇನು ಕಡಿಮೆ ಮಾಡಿದೆ ಜೆಡಿಎಸ್‌ಗೆ ಹೋಗೋಕೆ ಎಂದು ಹೇಳಿದರು. 2018ರಲ್ಲಿ ನನಗಿಂತ ಸೀನಿಯರ್ ಇದ್ದರು, ನನ್ನನ್ನು ಮಂತ್ರಿ ಮಾಡಿದ್ರು. ರಹಸ್ಯವಾಗಿ ನಾನು ಯಾಕೆ ಕುಮಾರಸ್ವಾಮಿ ಜೊತೆ ಮಾತಾಡಲಿ. ಅದು ಊಹಾಪೋಹ ಸುದ್ದಿ. ನಾನು ಯಾಕೆ ಜೆಡಿಎಸ್‌ಗೆ ಹೋಗಲಿ. ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ರೆ ಹೇಳಲಿ. ಅದು ಬಿಟ್ಟು ಅಡ್ಡ ಗೋಡೆ ಮೇಲೆ ದೀಪ ಇಟ್ಟರೆ ನಾನು ಏನು ಮಾಡಲಿ ಎಂದು ತಿಳಿಸಿದರು.

## ಸಂಪುಟ ಪುನರ್ ರಚನೆ ಮಾಡಲು ಮನವಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಸಂಪುಟ ಪುನರ್ ರಚನೆ ಮಾಡಬೇಕು ಅಂತ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಮನವಿ ಮಾಡಿದ್ದೇವೆ ಎಂದು ಕಾಂಗ್ರೆಸ್ ಶಾಸಕ ಬಂಗಾರಪೇಟೆ ನಾರಾಯಣಸ್ವಾಮಿ ತಿಳಿಸಿದ್ದಾರೆ. ದೆಹಲಿಗೆ ಶಾಸಕರು ಹೋಗಿದ್ದ ವಿಚಾರಕ್ಕೆ ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ದೆಹಲಿಗೆ ಹೋಗಿ ಮಲ್ಲಿಕಾರ್ಜುನ ಖರ್ಗೆ ಭೇಟಿ ಮಾಡಿದ್ದೇವೆ. ಸಂಪುಟ ಪುನಾರಚನೆ ಮಾಡಬೇಕು ಎಂದು ಕೇಳಿದ್ದೇವೆ. ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದಿದ್ದಾರೆ. ಮೇ ಮೊದಲ ವಾರದಲ್ಲಿ ಪುನಾರಚನೆ ಮಾಡುತ್ತೇವೆ ಎಂದಿದ್ದಾರೆ. ಸಂಪುಟ ಪುನಾರಚನೆ ಸಿಎಂ ಪರಮಾಧಿಕಾರ. ಸಿಎಂ ಬಳಿ ಚರ್ಚಿಸುವುದಾಗಿ ಖರ್ಗೆ ಹೇಳಿದ್ದಾರೆ ಎಂದರು. ನಾಯಕತ್ವ ಬದಲಾವಣೆ ಆಗಬೇಕು ಎಂಬ ವಿಚಾರ ಚರ್ಚೆ ಮಾಡಲಿಲ್ಲ. ನಾಯಕತ್ವ ಬದಲಾಣೆ ಮಾಡಿ ಎಂದು ನಾನು ಹೇಳಿಲ್ಲ. ನಾಯಕತ್ವ ಬದಲಾವಣೆ ವಿಚಾರ ಹೈಕಮಾಂಡ್‌ಗೆ ಬಿಟ್ಟ ವಿಚಾರ. ವಿಸ್ತರಣೆ ಮಾಡಿ ಎಂದು ಮಾತ್ರ ಕೇಳಿದ್ದೇವೆ ಎಂದು ಹೇಳಿದರು. ಅಲ್ಪಸಂಖ್ಯಾತ ನಾಯಕರ ವಿರುದ್ಧ ಕ್ರಮದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಜೀರ್, ಜಬ್ಬಾರ್, ಜಮೀರ್ ಪಕ್ಷ ವಿರೋಧಿ ಮಾಡಿದ್ದಾರೆ .

## ನೊಂದ ಕುಟುಂಬಕ್ಕೆ ಶಾಸಕ ಸುರೇಶ್ ಕುಮಾರ್ ನೆರವು


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಮಗಳ ಜೀವನಕ್ಕಾಗಿ ತಂದೆ ಕಿಡ್ನಿ ಮಾರಾಟಕ್ಕೆ ಮುಂದಾದ ಕರುಣಾಜನಕ ಕಥೆ ಬೆಂಗಳೂರಿನಲ್ಲಿ ನಡೆದಿದೆ. ವಿಚಾರ ತಿಳಿದ ತಕ್ಷಣ ಸ್ಪಂದಿಸಿದ ಶಾಸಕ ಸುರೇಶ್ ಕುಮಾರ್ ನೊಂದ ಕುಟುಂಬಕ್ಕೆ ನೆರವಾಗಿ ಮಾನವೀಯತೆ ಮರೆದಿದ್ದಾರೆ.

ಕುಸುಮಾ ಎಂಬ ಮಹಿಳೆ ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದ್ದರು. ಕಾಲು ಕಳೆದುಕೊಂಡಿದ್ದರೂ ಇತ್ತೀಚೆಗೆ ಪರೀಕ್ಷೆ ಬರೆದಿದ್ದರು. ಅನಾರೋಗ್ಯದಿಂದ ವೈಟ್‌ಫೀಲ್ಡ್‌ನ ಎಸ್ಟರ್ ಆಸ್ಪತ್ರೆಗೆ ದಾಖಲಾಗಿದ್ದರು. 4 ದಿನಕ್ಕೆ ಕುಸುಮಾ ಚಿಕಿತ್ಸೆಗೆ ಐದೂವರೆ ಲಕ್ಷ ರೂಪಾಯಿ ವೆಚ್ಚವಾಗಿತ್ತು. ಮಗಳ ಚಿಕಿತ್ಸೆಗೆ ಹೆಚ್ಚಿನ ಹಣ ಹೊಂದಿಸಲು ಸಾಧ್ಯವಾಗದೇ ತಂದೆ ಕಿಡ್ನಿ ಮಾರಾಟಕ್ಕೆ ಮುಂದಾಗಿದ್ದರು. ನೊಂದ ಕುಟುಂಬದ ಬಗ್ಗೆ ವಿಷಯ ತಿಳಿದು ಶಾಸಕ ಸುರೇಶ್ ಕುಮಾರ್ ಆಸ್ಪತ್ರೆಗೆ ಭೇಟಿ ನೀಡಿ ವಿಚಾರಿಸಿದರು. ವೈದ್ಯರು ಮತ್ತು ಆಸ್ಪತ್ರೆ ಆಡಳಿತ ಮಂಡಳಿಯ ಜೊತೆ ಮುಕ್ತ ಮಾತುಕತೆ ನಡೆಸಿದರು. ಈ ವಿಚಾರವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರ ಗಮನಕ್ಕೆ ತಂದರು. ಕೊನೆಗೆ ಕುಸುಮಾ ಚಿಕಿತ್ಸೆಗಾಗಿ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಆಸ್ಪತ್ರೆ ವೆಚ್ಚ ಭರಿಸಲು ಅನುವು ಮಾಡಿಕೊಡಲಾಯಿತು. ಇತ್ತ ಚಿಕಿತ್ಸೆ ಹಣ ಸ್ವೀಕರಿಸದಿರಲು ಆಸ್ಪತ್ರೆ ಆಡಳಿತ ಮಂಡಳಿ ನಿರ್ಧರಿಸಿತು. ಆಸ್ಪತ್ರೆ ವತಿಯಿಂದಲೇ ಉಚಿತವಾಗಿ ಚಿಕಿತ್ಸೆ ನೀಡುವುದಾಗಿ ಆಸ್ಪತ್ರೆ ಮಂಡಳಿ ತಿಳಿಸಿತು. ಇನ್ನೆರಡು ದಿನಗಳಲ್ಲಿ ರೋಗಿಯ ಆರೋಗ್ಯ ಸರಿಪಡಿಸುವುದಾಗಿ ಭರವಸೆ ನೀಡಿತು.

## ಬೆಂಗಳೂರಲ್ಲಿ ಕಂಪನಿಯ ಕ್ರೆಡಿಟ್ ಕಾರ್ಡ್ ಬಳಸಿ 27 ಲಕ್ಷ ದುರ್ಬಳಕೆ

• ಉದಯವಾಹಿನಿ, ಬೆಂಗಳೂರು

ಅಧಿಕೃತ ಖರ್ಚು ಭರಿಸಲು ಕಂಪನಿಯು ನೀಡಿದ್ದ ಕ್ರೆಡಿಟ್ ಕಾರ್ಡ್ ಬಳಸಿಕೊಂಡು 27 ಲಕ್ಷ ರೂಪಾಯಿ ದುರ್ಬಳಕೆ ಮಾಡಿಕೊಂಡಿದಲ್ಲದೆ, ಪ್ರಶ್ನಿಸಿದ್ದಕ್ಕೆ ಚೀನಾ ಹಾಗೂ ಪಾಕಿಸ್ತಾನದ ಅನಾಮಧೇಯ ವ್ಯಕ್ತಿಗಳಿಂದ ಬೆದರಿಕೆಗೆ ಒಳಗಾಗಿದ್ದೆ ಎಂದು ಕೃತ್ಯವನ್ನು ಸಮರ್ಥಿಸಿಕೊಂಡಿದ್ದ ಉದ್ಯೋಗಿ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸರ್ಜಾಪುರ ರಸ್ತೆಯಲ್ಲಿರುವ ಐಟಿ ಕಂಪನಿಯೊಂದರ ಪ್ರತಿನಿಧಿ ಅರ್ಜುನ್ ಶೆಟ್ಟಿ ನೀಡಿದ ದೂರಿನಡಿ ಒಡಿಶಾ ಮೂಲದ ಸೌಮ್ಯ ರಂಜನ್ ಪಾಂಡ ವಿರುದ್ಧ ಎಫ್‌ಐಆರ್ ದಾಖಲಾಗಿದೆ.2022 ರಿಂದ ಆರೋಪಿಯು ಕಂಪನಿಯಲ್ಲಿ ಸಿಸ್ಟಂ ಅಡ್ಮಿನಿಸ್ಟ್ರೇಟಿವ್ ಆಗಿ ಕೆಲಸ ಮಾಡುತ್ತಿದ್ದರು. ಅಧಿಕೃತ ವೆಚ್ಚಕ್ಕಾಗಿ ಕಂಪನಿಯು 2 ಲಕ್ಷ ಮಿತಿಯಿರುವ ಕ್ರೆಡಿಟ್ ಕಾರ್ಡ್ ನೀಡಿತ್ತು.

# ಹೆಚ್‌ಡಿಕೆ ಡಿಸಿಎಂ ಡಿಕೆಶಿ ಜಟಾಪಟಿ


• ಉದಯವಾಹಿನಿ, ಬೆಂಗಳೂರು

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕರ್ನಾಟಕ ರಾಜ್ಯ ಹಾಗೂ ಬೆಂಗಳೂರಿನ ಬಗ್ಗೆ ಅರಿವಿಲ್ಲ. ಗ್ರೇಟರ್ ಬೆಂಗಳೂರು ಕ್ಷೇತ್ರ ಪುನರ್ ವಿಂಗಡನೆಗಳ ವಿಚಾರದಲ್ಲಿ ತಾವು ವಿರೋಧ ಪಕ್ಷಗಳ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದಾಗಿ ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರ ಪಕ್ಷದ ಶಾಸಕರೂ ಕೂಡ ಬೆಂಗಳೂರಿನ ಕ್ಷೇತ್ರ ಪುನರ್ ವಿಂಗಡನೆ ಸಭೆಯಲ್ಲಿ ಭಾಗವಹಿಸಿದ್ದರು ಎಂದು ಹೇಳಿದರು.ಕುಮಾರಸ್ವಾಮಿ ಅವರಿಗೆ ಮಾಹಿತಿ ಇಲ್ಲ ಎಂದಾದರೆ, ಸಮಿತಿಯಲ್ಲಿದ್ದ ಅವರ ಪಕ್ಷದ ಶಾಸಕರಿಂದ ಕೇಳಿ ತಿಳಿದುಕೊಳ್ಳಲಿ.

ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲಾ ಪಕ್ಷಗಳ ಶಾಸಕರು ಸಮಿತಿಯ ಸಭೆಯಲ್ಲಿ ಭಾಗವಹಿಸಿ ದ್ದರು. ಎಲ್ಲರ ಅಭಿಪ್ರಾಯ ಪಡೆದ ನಂತರವೇ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು. ವಿರೋಧ ಪಕ್ಷಗಳ ಅಭಿಪ್ರಾಯಗಳು ಏನೇ ಇರಬಹುದು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ನಾಯಕರನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂಬ ಸಣ್ಣ ಅನುಭವ ತಮಗಿದೆ. ಸಭೆಯಲ್ಲಿ ಎಷ್ಟು ಗಂಟೆ ಯಾವ ರೀತಿ ಚರ್ಚೆ ನಡೆಸಲಾಗಿದೆ ಎಂದು ಶಾಸಕರನ್ನು ಕೇಳಿ ಕುಮಾರಸ್ವಾಮಿ ತಿಳಿದುಕೊಳ್ಳಲಿ ಎಂದರು. ಜಿಬಿಎಗೆ ಚುನಾವಣೆ ನಡೆಸಲು ಈಗಾಗಲೇ ನಾವು ಸಿದ್ಧರಿದ್ದೇವೆ. ನ್ಯಾಯಾಲಯ ಸೂಕ್ತ ನಿರ್ದೇಶನ ನೀಡಬೇಕು. ಸರ್ಕಾರ ಅದರಂತೆ ತೀರ್ಮಾನ ತೆಗೆದುಕೊಳ್ಳಬೇಕು. ಜಿಬಿಎ ವತಿಯಿಂದ ಎಲ್ಲಾ ರೀತಿಯ ನಿರ್ಧಾರ ತೆಗೆದುಕೊಳ್ಳಲಾಗಿದೆ. ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ಕೇಂದ್ರದಿಂದ ಅನುದಾನ ಬರುತ್ತಿಲ್ಲ ಎಂದು ಜಿಬಿಎ ಮುಖ್ಯ ಆಯುಕ್ತರು ಪತ್ರ ಬರೆದಿರುವುದು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಆ ರೀತಿ ಪತ್ರ ಬರೆದಿದ್ದರೆ ಚರ್ಚೆ ನಡೆಸುತ್ತೇನೆ ಎಂದು ಹೇಳಿದರು. ಅಲ್ಪಸಂಖ್ಯಾತರ ವಿಚಾರವಾಗಿ ಕಾಂಗ್ರೆಸ್‌ನಲ್ಲಿ ಯಾರೂ ಹಗೆ ಸಾಧಿಸುತ್ತಿಲ್ಲ. ಪಕ್ಷದ ಶಿಸ್ತಿನಲ್ಲಿ ನೀಡುವ ಸೂಚನೆಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು. ಹೈಕಮಾಂಡ್ ನಿರ್ದೇಶನ ಪ್ರಕಾರ ಕೆಪಿಸಿಸಿ ಕ್ರಮ ಕೈಗೊಂಡಿದೆ ಎಂದು ಸ್ಪಷ್ಟಪಡಿಸಿದರು.

**ಕುಡಿಯುವ ನೀರಿನ ಸಮಸ್ಯೆಗೆ ಮುಂಜಾಗ್ರತೆ:** ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಅಗತ್ಯ ಇರುವ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅಂತರ್ ಜಲ ಅಭಿವೃದ್ಧಿ ಹಾಗೂ ನೀರು ಪೂರೈಕೆ ಸಂಬಂಧಪಟ್ಟಂತೆ ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಜೊತೆ ಚರ್ಚೆ ನಡೆಸಿ ಅಗತ್ಯ ಸೂಚನೆ ನಡೆಸಲಾಗಿದೆ.ಯಾವುದೇ ರೀತಿಯ ಪರಿಸ್ಥಿತಿ ಎದುರಾದರೂ ನಿಭಾಯಿಸುತ್ತೇನೆ. ಜನರಿಗೆ ತೊಂದರೆಯಾಗಲು ಬಿಡುವುದಿಲ್ಲ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಕುಮಾರಸ್ವಾಮಿಗೆ ಬೆಂಗಳೂರಿನ ಬಗ್ಗೆ ಅರಿವಿಲ್ಲ : ಡಿಸಿಎಂ ಡಿಕೆಶಿ ಟೀಕೆ

**1** ತಮಿಳುನಾಡಿನಲ್ಲಿ ಅಬ್ಬರದ ಪ್ರಚಾರ ಮಾಡುತ್ತಿರುವ ಡಿಕೆ ಶಿವಕುಮಾರ್.

**2** ಕೇಂದ್ರದ ಒತ್ತಾಯದ ಹಿಂದಿ ಹೇರಿಕೆ ವಿರುದ್ಧ ಡಿಕೆ ಶಿವಕುಮಾರ್ ವಾಗ್ದಾಳಿ.

**3** ಡಿಕೆ ಶಿವಕುಮಾರ್ ಆರೋಪಗಳಿಗೆ ಕರ್ನಾಟಕ ಬಿಜೆಪಿ ಸೂಕ್ತ ತಿರುಗೇಟು.

### ಬಿಜೆಪಿ ಪ್ರತ್ಯುತ್ತರ

ಇದಕ್ಕೆ ತಿರುಗೇಟು ನೀಡಿರುವ ಕರ್ನಾಟಕ ಬಿಜೆಪಿ ಘಟಕ, ನಿಮ್ಮ ಮೆದುಳು ಮತ್ತು ಮನಸ್ಸನ್ನು ಶಾಂತಿವಾಗಿಟ್ಟುಕೊಳ್ಳಿ ಎಂದು ಡಿಸಿಎಂ ಅವರಿಗೆ ಸಲಹೆ ನೀಡಿದೆ. ಈ ಕುರಿತು ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ, ಹಿಂದಿಯನ್ನು ದೇಶದ ಅಧಿಕೃತ ಭಾಷೆಯಾಗಿ ಜಾರಿಗೆ ತಂದವರು ನಿಮ್ಮ ನೆಹರು ಮತ್ತು ಕಾಂಗ್ರೆಸ್ ಪಕ್ಷ.

ಡಿಕೆಶಿ ಸರ್, ಕನಿಷ್ಠ ಈಗಲಾದರೂ ಇತರ ರಾಜ್ಯಗಳ ಚುನಾವಣಾ ಪ್ರಚಾರಗಳಲ್ಲಿ ಸುಳ್ಳುಗಳನ್ನು ಹರಡುವುದನ್ನು ನಿಲ್ಲಿಸಿ ಎಂದು ಕರ್ನಾಟಕ ಬಿಜೆಪಿ ಒತ್ತಾಯಿಸಿದೆ.

### ಸುಳ್ಳು ಆರೋಪ

ಅದೆಲ್ಲ ಸುಳ್ಳು. ಯಾರೂ ಹಗೆ ಸಾಧಿಸುತ್ತಿಲ್ಲ. ಪಕ್ಷವು ಶಿಸ್ತು ಪಾಲನೆಗೆ ಆದ್ಯತೆ ನೀಡುತ್ತಿದೆ. ಎಲ್ಲರೂ ಶಿಸ್ತು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು. ಬೇಸಿಗೆ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ನಿರ್ವಹಣೆ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ಈಗಾಗಲೇ ಬಿಡಬ್ಲ್ಯೂಎಸ್ ಎಸ್ ಬಿ ಅಧಿಕಾರಿಗಳ ಜತೆ ಚರ್ಚೆ ನಡೆಸಲಾಗಿದೆ. ಅಂತರ್ಜಲ ಹೆಚ್ಚಳದ ಬಗ್ಗೆ ಮಾತನಾಡಿದ್ದು, ಏನೇ ಸಮಸ್ಯೆ ಬಂದರೂ ನಾವು ಅದನ್ನು ಸಮರ್ಥವಾಗಿ ನಿಭಾಯಿಸುತ್ತೇವೆ ಎಂದು ತಿಳಿಸಿದರು.

**ಎಸ್ ಬಿ ಅಧಿಕಾರಿಗಳ ಜತೆ ಚರ್ಚೆ**

### ಡಿ.ಕೆ ಶಿವಕುಮಾರ್ ವಾಗ್ದಾಳಿ

**ನಾವೆಲ್ಲರೂ ಪರಸ್ಪರ ಅಣ್ಣ-ತಮ್ಮಂದಿರು. ಊರುಗಳಾಗಿ ಭಾಗವಾಗಿದ್ದೇವೆ ಅಷ್ಟೇ. ನಾವೆಲ್ಲರೂ ಇಂದು ದಕ್ಷಿಣ ಭಾರತದ ಸ್ವಾಭಿಮಾನ ಉಳಿಸಲು ಒಟ್ಟಾಗಿ ಹೋರಾಟ ಮಾಡುತ್ತಿದ್ದೇವೆ ಎಂದು ಕರ್ನಾಟಕದ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ತಮಿಳುನಾಡು ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೃಷ್ಣಗಿರಿ ಜಿಲ್ಲೆಯ ಥಳಿ ವಿಧಾನಸಭಾ ಕ್ಷೇತ್ರದ ಕೆಲಮಂಗಲಂನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿ. ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವ ವಿಧಾನಸಭಾ ಕ್ಷೇತ್ರ. ನನ್ನ ಕ್ಷೇತ್ರ ಕನಕಪುರದೊಂದಿಗೆ ಗಡಿಯನ್ನು ಈ ಕ್ಷೇತ್ರ ಹಂಚಿಕೊಂಡಿದೆ. ಇಲ್ಲಿ ಸಾಕಷ್ಟು ಜನ ಕನ್ನಡಿಗರು ಇದ್ದೀರಿ. ನನ್ನ ಕ್ಷೇತ್ರದಲ್ಲಿ ಜಮೀನು ಹೊಂದಿರುವ ಈ ಭಾಗದ ಅನೇಕರಿಗೆ ನಮ್ಮ ಕ್ಷೇತ್ರದಲ್ಲೇ ಮತ ಇಟ್ಟುಕೊಳ್ಳಿ ಎಂದು ನಾನು ಆಹ್ವಾನ ಕೊಟ್ಟಿದ್ದೆ ಎಂದು ತಿಳಿಸಿದ್ದಾರೆ.**

## ದಾಸವಾಣಿ ಕಾರ್ಯಕ್ರಮ



ಬೆಂಗಳೂರಿನ ತ್ಯಾಗರಾಜನಗರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಕ್ಷಯ ತೃತೀಯ ಪ್ರಯುಕ್ತ ಬೆಳಗ್ಗೆ ಗುರುರಾಯರಿಗೆ ಫಲಪಂಚಾಮೃತ ಅಭಿಷೇಕ, ಗಂಧ ಲೇಪನ ಅಲಂಕಾರ, ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಮಹಾಮಂಗಳಾರತಿ ಕಾರ್ಯಕ್ರಮಗಳು ಜರುಗಿದವು.

ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರಿಂದ ದಾಸವಾಣಿ ಕಾರ್ಯಕ್ರಮ ನಡೆಯಿತು.

## ಮದ್ಯ ಸೇವಿಸಿ ವಾಹನ ಚಾಲನೆ: 623 ಪ್ರಕರಣ ದಾಖಲು

• ಉದಯವಾಹಿನಿ, ಬೆಂಗಳೂರು


ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 623 ಮಂದಿವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಏ. 13ರಿಂದ 19ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ವಿವಿಧ ಮಾದರಿಯ 46,844 ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಯಿತು. ಆ ಪೈಕಿ 623 ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ. ಅತಿವೇಗದಿಂದ ವಾಹನ ಚಲಾಯಿಸುವವರ ವಿರುದ್ಧ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 150 ಪ್ರಕರಣ ದಾಖಲು ಮಾಡಿಕೊಂಡು 1.51 ಲಕ್ಷದಂಡ ವಿಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆಯನ್ನು ಮುಂದಿನ ದಿನಗಳಲ್ಲಿಯೂ ಹಮ್ಮಿಕೊಳ್ಳಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

## ರಾಜ್ಯದ ಹಲವೆಡೆ ಐದು ದಿನ ಭಾರೀ ಮಳೆ ಸಾಧ್ಯತೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಾದ್ಯಂತ ಉರಿ ಬಿಸಿಲಿನ ತೀವ್ರತೆ ಹೆಚ್ಚಾಗುತ್ತಿದ್ದು, ಜನಜೀವನ ಕಷ್ಟಕರವಾಗುತ್ತಿದೆ. ಮುಂದಿನ ಐದು ದಿನಗಳ ಕಾಲ ರಾಜ್ಯದ ವಿವಿಧ ಭಾಗಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಲಾಗಿದೆ.

ಏಪ್ರಿಲ್ 21ರಿಂದ 24ರವರೆಗೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನ ಭಾಗಗಳಾದ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಮುನ್ಸೂಚನೆ ಇದೆ. ಈ ಪ್ರದೇಶಗಳಲ್ಲಿ ಗಂಟೆಗೆ 40ರಿಂದ 50 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸಲಿದ್ದು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

ದಕ್ಷಿಣ ಒಳನಾಡಿನ ಮಲೆನಾಡು ಪ್ರದೇಶಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲೂ ಏ.24ರವರೆಗೆ ಗುಡುಗು ಸಹಿತ ಮಳೆಯಾಗಲಿದ್ದು, ಈ ಭಾಗಗಳಲ್ಲಿ ಗಾಳಿಯ ವೇಗವು ಗಂಟೆಗೆ 30ರಿಂದ 40 ಕಿಲೋಮೀಟರ್ ಇರಬಹುದು ಎಂದು ಅಂದಾಜಿಸಲಾಗಿದೆ. ಕರಾವಳಿ ಭಾಗಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆಯ ಮುನ್ಸೂಚನೆಯಿದ್ದು, ಮಳೆ ಮತ್ತು ಗುಡುಗು ಸಮಯದಲ್ಲಿ ಕೆಲವು ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

ಮರಗಳ ಕೆಳಗೆ ನಿಲ್ಲಬಾರದು, ಬಯಲು ಪ್ರದೇಶಗಳಲ್ಲಿ ಆಶ್ರಯ ಪಡೆಯಬಾರದು ಎಂದು ಎಚ್ಚರಿಸಲಾಗಿದೆ. ಬಿರುಗಾಳಿಯ ಸಮಯದಲ್ಲಿ ಹಳೆಯ ಕಟ್ಟಡಗಳು ಅಥವಾ ದುರ್ಬಲ ಮರಗಳ ಬಳಿ ವಾಹನಗಳನ್ನು ನಿಲ್ಲಿಸುವುದನ್ನು ತಪ್ಪಿಸುವುದು ಉತ್ತಮ. ಪಶ್ಚಿಮ ಮತ್ತು ಪೂರ್ವ ಭಾರತದ ಕೆಲವು ಪ್ರದೇಶಗಳನ್ನು ಹೊರತುಪಡಿಸಿ ದೇಶದ ಬಹುತೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ಇರಲಿದೆ ಎಂದು ನಿರೀಕ್ಷಿಸಿದೆ. ಬಹುತೇಕ ಪ್ರದೇಶಗಳಲ್ಲಿ ಕನಿಷ್ಠ ತಾಪಮಾನ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ.

ಮುಂದಿನ ಜೂನ್‌ವರೆಗೆ ಉತ್ತರ ಮತ್ತು ಪೂರ್ವ ಭಾರತ, ಮಧ್ಯ ಭಾರತದ ಬಹುತೇಕ ಭಾಗಗಳು ಮತ್ತು ವಾಯವ್ಯ ಭಾರತದ ಬಯಲು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಎರಡರಿಂದ ನಾಲ್ಕು ಪಟ್ಟು ಬಿಸಿಗಾಳಿ ಇರುವ ಸಾಧ್ಯತೆಯಿದೆ. ಬಹುತೇಕ ಭಾಗಗಳು ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನಕ್ಕೆ ಸಾಕ್ಷಿಯಾಗಬಹುದು. ಆದಾಗ್ಯೂ, ದಕ್ಷಿಣ ಮತ್ತು ವಾಯವ್ಯ ಭಾಗದ ಕೆಲವು ಪ್ರದೇಶಗಳಲ್ಲಿ ಸಾಮಾನ್ಯ ತಾಪಮಾನ ಇರಬಹುದು.

ವಾಯವ್ಯ ಮತ್ತು ಈಶಾನ್ಯದ ಕೆಲವು ಸ್ಥಳಗಳನ್ನು ಹೊರತುಪಡಿಸಿ, ದೇಶದ ಬಹುತೇಕ ಭಾಗಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ.ದೇಶದಲ್ಲಿ ಅತೀವ ಬಿಸಿಲಿನ ಹಿನ್ನೆಲೆಯಲ್ಲಿ ಶೇ.9ರಿಂದ 10ರಷ್ಟು ಗರಿಷ್ಠ ವಿದ್ಯುತ್ ಬೇಡಿಕೆಗೆ ಭಾರತ ಸಿದ್ಧವಾಗಬೇಕು ಎಂದು ತಜ್ಞರು ಎಚ್ಚರಿಸಿದ್ದಾರೆ.

## ಬಿಸಿಲ ತಾಪಕ್ಕೆ ಇಳುವರಿ ಕುಂಠಿತ, ಏರಿದ ತರಕಾರಿ ಬೆಲೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬಿಸಿಲಿನ ತಾಪಮಾನ ಏರಿಕೆಯಿಂದ ತರಕಾರಿ ಬೆಳೆಗಳ ಮೇಲೆ ಭಾರೀ ಹೊಡೆತ ಬಿದ್ದು ಇಳುವರಿ ಕುಂಠಿತವಾಗಿ ತರಕಾರಿಗಳ ಬೆಲೆ ಹೆಚ್ಚಾಗಿದ್ದು, ಬೀನ್ಸ್ ಶತಕ ಬಾರಿಸಿದೆ. ರಾಜ್ಯಾದ್ಯಂತ ಬಿಸಿಲಿನ ರೌದ್ರಾವತಾರಕ್ಕೆ ಜನರು ತತ್ತರಿಸಿದ್ದು, ತರಕಾರಿಗಳ ಬೆಲೆ ಏರಿಕೆ ಗ್ರಾಹಕರ ಜೇಬನ್ನು ಸುಡುತ್ತಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಯುದ್ಧದಿಂದಾಗಿ ರಾಜ್ಯದಲ್ಲಿ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯವಾದ ಹಿನ್ನೆಲೆಯಲ್ಲಿ ಹಲವು ಹೋಟೆಲ್, ರೆಸ್ಟೋರೆಂಟ್‌ಗಳು, ಪಿಜಿಗಳು ತಾತ್ಕಾಲಿಕವಾಗಿ ಬಂದ್ ಆಗಿದ್ದವು.

ಈ ವೇಳೆ ತರಕಾರಿ ಬೆಲೆ ಇಳಿದಿತ್ತು. ಆದರೆ, ಈಗ ಸ್ವಲ್ಪಮಟ್ಟದಲ್ಲಿ ಚೇತರಿಸಿಕೊಂಡಿದ್ದು, ಮದುವೆ ,ಜಾತ್ರೆ , ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿದ್ದು, ಮಾರುಕಟ್ಟೆಗಳಲ್ಲಿ ತರಕಾರಿಗೆ ಬೇಡಿಕೆ ಹೆಚ್ಚಾಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಮಾಲು ಬಾರದಿರುವುದರಿಂದ ಬೆಲೆ ಹೆಚ್ಚಳವಾಗಿದೆ.

ಕಳೆದ ವಾರಕ್ಕೆ ಹೋಲಿಸಿದರೆ ಪ್ರತಿ ತರಕಾರಿಗಳ ಬೆಲೆ ಕೆಜಿಗೆ 20 ರಿಂದ 30 ರೂ.ಗೆ ಹೆಚ್ಚಳವಾಗಿದೆ. ಈ ಭಾರಿ ತಾಪಮಾನ ಗರಿಷ್ಠ ಮಟ್ಟದಲ್ಲಿ ಏರಿಕೆಯಾಗಿದ್ದು, ಒಣಹವೆ ಹಾಗೂ ಬಿಸಿಲಿನ ತಾಪಕ್ಕೆ ಜನತೆ ತತ್ತರಿಸಿಹೋಗಿದ್ದಾರೆ.

ಈ ನಡುವೆ ವಿದ್ಯುತ್ ಕೊರತೆ, ಕೊಳವೆಬಾವಿಗಳಲ್ಲಿ ಪಾತಾಳ ತಲುಪಿದ ಅಂತರ್ಜಲದಿಂದ ನೀರಿನ ಅಭಾವ ಸೃಷ್ಟಿಯಾಗಿದ್ದು, ತರಕಾರಿ ಬೆಳೆಗೆ ಬೇಕಾದ ಪೂರಕ ವಾತಾವರಣವಿಲ್ಲದ ಕಾರಣ ಇಳುವರಿಯಲ್ಲಿ ಭಾರೀ ಕುಂಠಿತವಾಗಿ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಯಾಗಿದೆ.

ತರಕಾರಿ ಬೆಳೆಗೆ ಹೆಚ್ಚಾಗಿ ನೀರಿನ ಅವಶ್ಯಕತೆ ಇದ್ದು, ಅದರಲ್ಲೂ ಬೀನ್ಸಗೆ ಹೆಚ್ಚಾಗಿ ತಂಪು ವಾತಾವರಣ ಹಾಗೂ ಹೆಚ್ಚಿನ ನೀರು ಬೇಕಾಗಿದೆ. ಆದರೆ, ಪ್ರಸ್ತುತ ಬಿಸಿಲಿನ ತಾಪಕ್ಕೆ ಬೆಳೆ ಉತ್ತಮವಾಗಿ ಬಾರದಿರುವುದರಿಂದ ಇಳುವರಿಯಲ್ಲಿ ಹೊಡೆತಬಿದ್ದಿದೆ. ಇದರಿಂದ ಕೆಜಿಗೆ 80 ರಿಂದ 100 ರೂ.ಗೆ ಹೆಚ್ಚಳವಾಗಿದೆ. ಕಳೆದ ವಾರ 20 ರೂ. ಮಾರಾಟವಾಗುತ್ತಿದ್ದ ಕೆಜಿ ಟೊಮ್ಯಾಟೋ ಈಗ 35 ರಿಂದ 40 ರೂ. ತಲುಪಿದೆ. ಅದೇ ರೀತಿ ಕ್ಯಾರೆಟ್ 50 ರಿಂದ 60ರೂ., ಕ್ಯಾಪ್ಸಿಕಂ 80, ಗೆಡ್ಡೆಕೋಸು 50ರೂ., ಆಲೂಗೆಡ್ಡೆ 40 ರೂ., ಬಿಟ್ರೂಟ್ 40ರೂ., ಹಾಗಲಕಾಯಿ 60ರೂ., ಸೌತೆಕಾಯಿ 50ರೂ., ಬದನೆಕಾಯಿ 40 ರೂಗೆ ಮಾರಾಟವಾಗುತ್ತಿದೆ.

10ರೂ.ಗೆ ಒಂದು ನಿಂಬೆ ಬಿಸಿಲಿನ ಝಳಕ್ಕೆ ಜನರು ತತ್ತರಿಸಿದ್ದು, ಹೆಚ್ಚಾಗಿ ತಂಪು ಪಾನೀಯಗಳ ಮೊರೆಹೋಗುತ್ತಿದ್ದಾರೆ. ಎಲ್ಲೆಡೆ ನಿಂಬೆ ಶರಬತ್ತು ಮಾರಾಟ ಹೆಚ್ಚಾಗಿದೆ. ಜೊತೆಗೆ ಮನೆಗಳಲ್ಲೂ ಸಹ ನಿಂಬೆಹಣ್ಣು ಬಳಸಲಾಗುತ್ತಿದೆ. ಬಿಸಿಲಿನ ತಾಪಕ್ಕೆ ನಿಂಬೆಕಾಯಿ ಗಿಡದಲ್ಲಿ ಕಚ್ಚದೆ ಎಳೆ ಕಾಯಿಗಳೇ ಉದುರುತ್ತಿವೆ. ಇದರಿಂದ ಮಾರುಕಟ್ಟೆಗೆ ನಿರೀಕ್ಷಿತ ಪ್ರಮಾಣದಲ್ಲಿ ನಿಂಬೆಹಣ್ಣು ಬಾರದಿರುವುದರಿಂದ ಬೆಂಗಳೂರಿನಲ್ಲಿ ಚಿಲ್ಲರೆಯಾಗಿ 10ರೂ.ಗೆ ಒಂದು ಹಣ್ಣು ಮಾರಾಟ ಮಾಡಲಾಗುತ್ತಿದೆ.

## ಹೆಚ್ಚು ವಿದ್ಯುತ್ ದರ ವಿಧಿಸುವ ರಾಜ್ಯಗಳ ಪೈಕಿ ಕರ್ನಾಟಕಕ್ಕೆ ದ್ವಿತೀಯ ಸ್ಥಾನ

• ಉದಯವಾಹಿನಿ, ಬೆಂಗಳೂರು

ವಿದ್ಯುತ್ ದರ ಪರಿಷ್ಕರಣೆಯಿಂದಾಗಿ ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಿಗಿಂತ ಕರ್ನಾಟಕದ ಗೃಹಬಳಕೆಯ ವಿದ್ಯುತ್ ದರ ಅಧಿಕವಾಗಿದೆ. ದಕ್ಷಿಣ ಭಾರತದ 5 ರಾಜ್ಯಗಳ ನಡುವೆ ಗೃಹಬಳಕೆಯ ವಿದ್ಯುತ್ ದರಗಳನ್ನು ಹೋಲಿಕೆ ಮಾಡಿದರೆ ಕರ್ನಾಟಕಕ್ಕಿಂತ ತಮಿಳುನಾಡು, ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳ ವಿದ್ಯುತ್ ದರ ಕಡಿಮೆ ಇದ್ದರೆ ಕೇರಳ ರಾಜ್ಯದ ವಿದ್ಯುತ್ ದರ ಹೆಚ್ಚಳವಿದೆ.ಕರ್ನಾಟಕ, ತೆಲಂಗಾಣ ರಾಜ್ಯಗಳು 200 ಯೂನಿಟ್‌ವರೆಗೂ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ಒದಗಿಸುವುದರಿಂದ ಸಾಮಾನ್ಯ ಗ್ರಾಹಕರಿಗೆ ಹೆಚ್ಚಿನ ಹೊರೆ ಆಗುವುದಿಲ್ಲ. 100 ಯೂನಿಟ್‌ವರೆಗೂ ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ.

ಆದರೆ ಕೇರಳ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡು ಕಡಿಮೆ ಬಳಕೆಯ ಗ್ರಾಹಕರಿಗೆ ಅತೀ ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಪೂರೈಸುತ್ತಿವೆ. ಕರ್ನಾಟಕದಲ್ಲೂ 10 ಹೆಚ್‌ಪಿವರೆಗೆ ಕೃಷಿ ಪಂಪ್‌ಸೆಟ್ ಗಳಿಗೆ ಮತ್ತು 200 ಯೂನಿಟ್‌ವರೆಗೆ ಗೃಹಜ್ಯೋತಿ ಯೋಜನೆಯಡಿ ಉಚಿತ ವಿದ್ಯುತ್ ನೀಡಲಾಗುತ್ತಿದೆ.




ಕೆಲವು ವಲಯದ ಗ್ರಾಹಕರಿಗೆ ರಿಯಾಯಿತಿಯನ್ನು ನೀಡುತ್ತಿದೆ.

ರಾಜ್ಯದ ಐದು ವಿದ್ಯುತ್ ಸರಬರಾಜು ಕಂಪನಿಗಳ ಪೈಕಿ ಎರಡು ಕಂಪನಿಗಳ ವಿದ್ಯುತ್ ದರ ಹೆಚ್ಚಳಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ(ಕೆಇಆರ್‌ಸಿ) ಅನುಮೋದನೆ ನೀಡಿದ್ದು, ಮೂರು ಕಂಪನಿಗಳು ತಮ್ಮ ಗ್ರಾಹಕರಿಗೆ ಈಗಾಗಲೇ ಸಂಗ್ರಹಿಸಿರುವ ವಿದ್ಯುತ್ ಬಿಲ್ಲಿನ ಭಾಗಶಃ ಹಣವನ್ನು ಮರುಪಾವತಿಸಲು ಆದೇಶ ನೀಡಿದೆ.

### ಕೇರಳ

**ಕೇರಳ ರಾಜ್ಯದಲ್ಲಿ 5 ಹಂತದಲ್ಲಿ ವಿದ್ಯುತ್ ದರಗಳನ್ನು ನಿಗದಿಪಡಿಸಲಾಗಿದೆ.**

**3.35 ರಿಂದ 8.50 ರೂ.ವರೆಗೂ ವಿದ್ಯುತ್ ದರವನ್ನು ವಿಧಿಸಲಾಗುತ್ತಿದೆ. 50 ಯೂನಿಟ್ ವರೆಗೆ ಪ್ರತೀ ಯೂನಿಟ್‌ಗೆ 3.55 ರೂ., 51 ರಿಂದ 100 ಯೂನಿಟ್‌ಗೆ 4.25 ರೂ., 100 ರಿಂದ 150 ಯೂನಿಟ್‌ಗೆ 5.35 ರೂ., 150 ರಿಂದ 200 ಯೂನಿಟ್‌ಗೆ 7.20 ರೂ. ಹಾಗೂ 201 ರಿಂದ 250 ಯೂನಿಟ್‌ವರೆಗೂ ಪ್ರತೀ ಯೂನಿಟ್‌ಗೆ 8.50 ರೂ. ವಿಧಿಸಲಾಗುತ್ತಿದೆ.**

### ತಮಿಳುನಾಡು

**ನೆರೆಯ ತಮಿಳುನಾಡಿನಲ್ಲಿ ಗೃಹಬಳಕೆಗೆ 2.35 ರೂ.ಗಳಿಂದ 10.50 ರೂ.ಗಳವರೆಗೆ ಪ್ರತೀ ಯೂನಿಟ್‌ಗೆ ವಿಧಿಸಲಾಗುತ್ತಿದೆ. 100 ಯೂನಿಟ್‌ಗಳವರೆಗೂ ಉಚಿತ ವಿದ್ಯುತ್ ಪೂರೈಕೆ ಇದೆ. ಆರು ಹಂತದಲ್ಲಿ ವಿದ್ಯುತ್ ದರ ನಿಗದಿಪಡಿಸಲಾಗಿದೆ. 101 ರಿಂದ 200 ಯೂನಿಟ್‌ವರೆಗೆ 2.35 ರೂ.ಗಳಿಂದ 4.80 ರೂ. ಹಾಗೂ 201 ರಿಂದ 400 ಯೂನಿಟ್‌ವರೆಗೆ 4.70 ರೂ. ಪ್ರತಿ ಯೂನಿಟ್‌ಗೆ ವಿಧಿಸಲಾಗುತ್ತಿದೆ.401 ರಿಂದ 500 ಯೂನಿಟ್‌ವರೆಗೆ 6.30 ರೂ.ನಿಂದ 6.65 ರೂ. ವಿಧಿಸಲಾಗುತ್ತಿತ್ತು. 801 ರಿಂದ 1000 ಯೂನಿಟ್ ಗೆ 10.50 ರೂ. ಪ್ರತೀ ಯೂನಿಟ್‌ಗೆ ವಿಧಿಸಲಾಗುತ್ತಿದೆ.**

**100 ಯೂನಿಟ್‌ವರೆಗೂ ಉಚಿತ ವಿದ್ಯುತ್**

## ಅಂಬೇಡ್ಕರ್ ಜಯಂತಿ ಸಂಭ್ರಮ ಬಡವರಿಗೆ ದಿನಸಿ ಕಿಟ್ ವಿತರಣೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಓಕಳಿಪುರಂ ವಾರ್ಡ್‌ನಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯೋತ್ಸವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಬಡವರಿಗೆ ಉಚಿತ ದಿನಸಿ ಕಿಟ್‌ನ್ನು ಗೃಹ ಸಚಿವರಾದ ಜಿ ಪರಮೇಶ್ವರ್ ವಿತರಣೆ ಮಾಡಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಹಾಗೂ ಮನ್ಸೂರ್ ಅಲಿಖಾನ್ , ಧರ್ಮ ಸೇನಾ, ಬೆಂಗಳೂರು ನಗರ ಎಸ್ಸಿ ಜಿಲ್ಲಾಧ್ಯಕ್ಷರಾದ ಎಪಿಎಸ್ ರಾಜ್ ಕಾರ್ತಿಕ್, ಬ್ಲಾಕ್ ಅಧ್ಯಕ್ಷರಾದ ಸರವಣ ಹಾಗೂ ಮಾಜಿ ಬಿಬಿಎಂಪಿ ಸದಸ್ಯರು, ಬ್ಲಾಕ್ ಅಧ್ಯಕ್ಷರು, ವಾರ್ಡ್ ಅಧ್ಯಕ್ಷರು, ಹಾಗೂ ಅನೇಕ ಕಾಂಗ್ರೆಸ್ ಮುಖಂಡರು ಸ್ಥಳೀಯ ನಿವಾಸಿಗಳು ಇನ್ನಿತರರು ಉಪಸ್ಥಿತರಿದ್ದರು.

# ಅಂತರಾಳದಿಂದ... EDITORIAL

## ರಾಜಕೀಯ ಟೀಕೆಗೆ ರಾಷ್ಟ್ರೀಯ ವೇದಿಕೆ: ಅಧಿಕಾರ ದುರುಪಯೋಗದ ನಿದರ್ಶನ




ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷಗಳನ್ನು ಟೀಕಿಸುವುದಕ್ಕಾಗಿ, ಹುದ್ದೆಯ ಕಾರಣದಿಂದಾಗಿ ತಮಗೆ ದೊರೆತಿರುವ ರಾಷ್ಟ್ರೀಯ ವೇದಿಕೆಯನ್ನು ಬಳಸಿಕೊಂಡಿರುವುದು ದುರದೃಷ್ಟಕರ. ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾನೂನಿಗೆ ಸಾಂವಿಧಾನಿಕ ತಿದ್ದುಪಡಿ ಮಾಡುವ ಪ್ರಯತ್ನವು ವಿಫಲವಾದ ನಂತರ, ರಾಷ್ಟ್ರೀಯ ವೇದಿಕೆಯ ಮೂಲಕ ವಿರೋಧ ಪಕ್ಷಗಳ ವಿರುದ್ಧ ಪ್ರಧಾನಿ ಟೀಕಾಪ್ರಹಾರ ನಡೆಸಿದ್ದಾರೆ. ಕಳೆದ ಶುಕ್ರವಾರ (ಏಪ್ರಿಲ್ 17) ಸದನದಲ್ಲಿ ಮಸೂದೆ ಸೋಲು ಕಂಡಿತು; ಶನಿವಾರ ರಾತ್ರಿ, ದೇಶವನ್ನು ಉದ್ದೇಶಿಸಿ ಮಾತನಾಡಿದ ನರೇಂದ್ರ ಮೋದಿ ಅವರು, ಮಹಿಳಾ ಮೀಸಲಾತಿ ಪ್ರಕ್ರಿಯೆಯನ್ನು ಹತ್ತಿಕ್ಕಿದ್ದಕ್ಕಾಗಿ ವಿರೋಧ ಪಕ್ಷಗಳನ್ನು, ವಿಶೇಷವಾಗಿ ಕಾಂಗ್ರೆಸ್, ಡಿಎಂಕೆ ಹಾಗೂ ತೃಣಮೂಲ ಕಾಂಗ್ರೆಸ್‌ಗಳನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ್ದಾರೆ. ಎರಡು ಪ್ರಮುಖ ರಾಜ್ಯಗಳಾದ ತಮಿಳುನಾಡು ಮತ್ತು ಪಶ್ಚಿಮ ಬಂಗಾಳಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಧಾನಿ ತಮ್ಮ ರಾಜಕೀಯ ಭಾಷಣಕ್ಕಾಗಿ ರಾಷ್ಟ್ರೀಯ ವೇದಿಕೆಯನ್ನು ಬಳಸಿಕೊಂಡಿರುವುದು ಅನುಚಿತವಾದ ಹಾಗೂ ಚುನಾವಣೆ ಸಂದರ್ಭದಲ್ಲಿನ ಮಾದರಿ ನೀತಿಸಂಹಿತೆಯ ಉಲ್ಲಂಘನೆಯ ರೂಪದಲ್ಲಿ ನೋಡಬಹುದಾದ ನಡವಳಿಕೆಯಾಗಿದೆ. ರಾಷ್ಟ್ರೀಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅಥವಾ ರಾಷ್ಟ್ರೀಯ ಮಹತ್ವದ ವಿಷಯಗಳ ಬಗ್ಗೆ ಜನರ ಗಮನಸೆಳೆಯುವುದಕ್ಕಾಗಿ ಪ್ರಧಾನ ಮಂತ್ರಿ ದೇಶವನ್ನು ಉದ್ದೇಶಿಸಿ ಮಾತನಾಡುತ್ತಾರೆ. ಮಸೂದೆಯೊಂದು ಸದನದ ಅನುಮೋದನೆ ಪಡೆಯಲು ವಿಫಲವಾದ ಸಂದರ್ಭ ರಾಷ್ಟ್ರೀಯ ತುರ್ತು ಪರಿಸ್ಥಿತಿಯೂ ಅಲ್ಲ, ಜನರ ಗಮನವನ್ನು ತುರ್ತಾಗಿ ಸೆಳೆಯಬೇಕಾದ ಸಂಗತಿಯೂ ಆಗಿರಲಿಲ್ಲ. ಹಾಗಾಗಿ, ಅಧಿಕಾರ ದುರುಪಯೋಗದ ರೂಪದಲ್ಲಿ ಪ್ರಧಾನಿ ಅವರ ಭಾಷಣವನ್ನು ನೋಡಬಹುದಾಗಿದೆ.

> **ಪ್ರಧಾನಿ ಅವರ ದೂರದರ್ಶನ ಭಾಷಣವು ಕಠಿಣ ಶಬ್ದಗಳನ್ನು ಒಳಗೊಂಡಿತ್ತು ಹಾಗೂ ಕೆಲವೊಮ್ಮೆ ಸಭ್ಯತೆಯ ಎಲ್ಲೆ ಮೀರಿತ್ತು.**

ಚುನಾವಣೆಯ ಸಮಯದಲ್ಲಿ ಅಧಿಕೃತ ಸಮೂಹ ಮಾಧ್ಯಮವನ್ನು ರಾಜಕೀಯ ಸುದ್ದಿಗಳ ಪಕ್ಷಪಾತದ ವರದಿಗಾಗಿ ಹಾಗೂ ಅಧಿಕಾರದಲ್ಲಿ ಇರುವ ಪಕ್ಷದ ಹಿತಾಸಕ್ತಿಗೆ ಪೂರಕವಾಗಿ, ಸಾಧನೆಗಳ ಪ್ರಚಾರಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದನ್ನು ತಪ್ಪಿಸಬೇಕು ಎಂದು ಆಡಳಿತದಲ್ಲಿರುವ ಪಕ್ಷಕ್ಕೆ ಸಂಬಂಧಿಸಿದಂತೆ ಚುನಾವಣಾ ನೀತಿಸಂಹಿತೆ ಸ್ಪಷ್ಟವಾಗಿ ಹೇಳುತ್ತದೆ. ವಿರೋಧ ಪಕ್ಷಗಳ ಮೇಲೆ ರಾಜಕೀಯ ಟೀಕಾಪ್ರಹಾರ ನಡೆಸುತ್ತ, ಅವುಗಳಿಗೆ ಬುದ್ಧಿ ಕಲಿಸಬೇಕೆಂದು ಜನರಿಗೆ ಕರೆನೀಡಲು ದೂರದರ್ಶನವನ್ನು ಬಳಸಿಕೊಳ್ಳುವುದು ಚುನಾವಣಾ ನೀತಿಸಂಹಿತೆಗೆ ವಿರುದ್ಧವಾಗಿದೆ. ಪ್ರಧಾನಿ ಅವರ ಈ ದುರುಪಯೋಗವನ್ನು, 1975ರ ರಾಯ್ ಬರೇಲಿ ಚುನಾವಣೆ ಸಂದರ್ಭದಲ್ಲಿ ಇಂದಿರಾ ಗಾಂಧಿ ಅವರಿಂದಾದ ಮಾದರಿ ನೀತಿಸಂಹಿತೆಯ ಉಲ್ಲಂಘನೆಯೊಂದಿಗೆ ಹೋಲಿಸಲಾಗುತ್ತಿದೆ. ಪ್ರಸಕ್ತ ಉಲ್ಲಂಘನೆಯ ಬಗ್ಗೆ ವಿರೋಧ ಪಕ್ಷಗಳು ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿಐ) ದೂರು ನೀಡಿವೆ.

ಆದರೆ, ಅಷ್ಟೇನೂ ಗಂಭೀರವಲ್ಲದ ದೂರುಗಳ ಸಂದರ್ಭದಲ್ಲಿಯೇ ಕ್ರಮ ಕೈಗೊಳ್ಳದ ಆಯೋಗ, ಪ್ರಸ್ತುತ ಅತ್ಯಂತ ಗಂಭೀರವಾದ ದೂರಿನ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸಂದೇಹವಿದೆ. ಆಯೋಗ ಕ್ರಮ ಕೈಗೊಳ್ಳದೆ ಹೋದಲ್ಲಿ ನ್ಯಾಯಾಲಯಗಳು ಕ್ರಮ ಕೈಗೊಳ್ಳಬಹುದಾಗಿದೆ.

ಪ್ರಧಾನಿ ಅವರ ದೂರದರ್ಶನ ಭಾಷಣವು ಕಠಿಣ ಶಬ್ದಗಳನ್ನು ಒಳಗೊಂಡಿತ್ತು ಹಾಗೂ ಕೆಲವೊಮ್ಮೆ ಸಭ್ಯತೆಯ ಎಲ್ಲೆ ಮೀರಿತ್ತು. ಮಸೂದೆ ಕುರಿತಂತೆ ವಿರೋಧ ಪಕ್ಷಗಳ ನಿಲುವನ್ನು ವಿವರಿಸಲು 'ಭ್ರೂಣಹತ್ಯೆ' ಹಾಗೂ 'ಪಾಪ' ಎನ್ನುವಂತಹ ಭಾವನಾತ್ಮಕ ಹಾಗೂ ಧಾರ್ಮಿಕ ಅರ್ಥಗಳನ್ನು ಹೊಂದಿರುವ ಪರಿಭಾಷೆಯನ್ನು ಪ್ರಧಾನಿ ಬಳಸಿದ್ದು ನ್ಯಾಯಯುತವೆಂದು ಒಪ್ಪುವುದು ಸಾಧ್ಯವಿಲ್ಲ. ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ಯಾವುದೇ ಗಂಭೀರ ಸಮಾಲೋಚನೆ ನಡೆಸದೆಯೇ ಸರ್ಕಾರ ಸದನದಲ್ಲಿ ಮಸೂದೆ ಮಂಡಿಸಿತ್ತು. ಹಾಗಾಗಿ, ಮಸೂದೆಯ ಸೋಲಿನಲ್ಲಿ ವಿರೋಧ ಪಕ್ಷಗಳಂತೆ ಸರ್ಕಾರದ ಸಮಾನ ಪಾತ್ರವೂ ಇದೆ. ಅನುಮೋದನೆ ಪಡೆಯುವಲ್ಲಿ ವಿಫಲವಾಗುತ್ತದೆ ಎನ್ನುವುದನ್ನು ತಿಳಿದೂ ಸದನದ ಮುಂದೆ ಮಸೂದೆ ತಂದದ್ದನ್ನು ಗಮನಿಸಿದರೆ, ಸರ್ಕಾರದ ಪ್ರಯತ್ನದ ಹಿಂದೆ ರಾಜಕೀಯ ಉದ್ದೇಶಗಳಿದ್ದವು ಎಂದೇ ಅರ್ಥ. ಪ್ರಧಾನಿ ಅವರ ಭಾಷಣದಲ್ಲೂ ಆ ರಾಜಕೀಯ ಉದ್ದೇಶವೇ ಇತ್ತು. ಇಡೀ ಪ್ರಕರಣವು, ಮಹಿಳಾ ಮೀಸಲಾತಿ ವಿಷಯವು ರಾಜಕೀಯ ಪಕ್ಷಗಳಿಗೆ ಆಯುಧವಾಗಿದೆಯೇ ಹೊರತು, ಬದ್ಧತೆಯಾಗಿಲ್ಲ ಎನ್ನುವುದನ್ನು ಮತ್ತೊಮ್ಮೆ ಬಹಿರಂಗಪಡಿಸುವಂತಿದೆ.




## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

ಆಗ ಮಾರುತಿಯು ಮಹಾಧೈರ್ಯದಿಂದ, ''ದೇವಿಯೇ, ನೀನೆಂದ ಮಾತು ನಿಜ, ಒಪ್ಪಿದೆ; ಜೀವರುಗಳ ಹಸಿವನ್ನು ನೀಗಿಸುವುದಕ್ಕಿಂತ ಮಿಗಿಲಾದ ತಪಸಿಲ್ಲ, ಕೃತಕೃತ್ಯನಾದೆ; ಆದರೆ ಒಂದು ಮಾತು, ನಾನು ರಘುಪತಿಯ ಕಾರ್ಯಕ್ಕೆಂದು ಲಂಕೆಯತ್ತ ಹೋಗುತ್ತಿದ್ದೇನೆ, ಜಾನಕಿಯನ್ನು ಕಂಡು ಕಪಿವೀರರಿಗೆ ಆ ಸುದ್ದಿಯನ್ನು ಮುಟ್ಟಿಸಿ ಬಂದು ನಿನ್ನ ಬಾಯಿ ಹೊಗುತ್ತೇನೆ. ನಾನೆಂದೂ ಸುಳ್ಳಾಡುವವನಲ್ಲ, ಸತ್ಯವಾಗಿಯೂ. ನೀನು ಅಪ್ಪಣೆಯಿತ್ತರೆ ದೇವಕಾರ್ಯವನ್ನು ಮುಗಿಸಿ ಬೇಗ ಬರುತ್ತೇನೆ'' ಎಂದ. ಆಗ ಸುರಸೆಯು ಕ್ರುದ್ಧಳಾಗಿ, ''ಸಾಕ್ಷಾತ್ ಶಿವನೇ ಆಗಲಿ ನನ್ನ ಬಾಯಿನ ಮೂಲಕವಲ್ಲದೆ ಮುಂದೆ ಹೋಗಲಾರ, ಇದು ಬ್ರಹ್ಮನ ವರ. ನೀನು ನನ್ನ ಬಾಯನ್ನು ಹೊಕ್ಕು ಆಚೆ ಬಂದರೆ ನೀನು ಸ್ವಾಮಿಕಾರ್ಯನಿಷ್ಠನಾದ ಬಲಿಷ್ಠನೆಂದು ತಿಳಿದು ಬಿಡುತ್ತೇನೆ'' ಎಂದಳು. ಕಾಮರೂಪಿಯಾದ ಅವಳ ಮಾತನ್ನು ಕೇಳಿ ಅವನು, ''ಒಳ್ಳೆಯದು, ಆದರೆ ಈ ನನ್ನ ಮಹಾ ಶರೀರವು ಹಿಡಿಯುವಷ್ಟು ನಿನ್ನ ಬಾಯನ್ನು ಹಿಗ್ಗಲಿಸು'' ಎನ್ನಲು ಸುರಸೆಯು ಕೋಪದಿಂದ ಮಾರುತಿಯ ಹತ್ತು ಯೋಜನ ಅಗಲದ ದೇಹವು ಹೊಗುವಂತೆ ತನ್ನ ಪಾತಾಳದಂತಹ ಬಾಯನ್ನು ತೆರೆದಳು; ಆಗ ಮಾರುತಿಯು ಇಪ್ಪತ್ತು ಯೋಜನದಷ್ಟು ವಿಸ್ತಾರವಾಗಿ ತನ್ನ ದೇಹವನ್ನು ಬೆಳಸಿದ. ಆಗ ಅವಳು ಆಶ್ಚರ್ಯಗೊಂಡು ತನ್ನ ಬಾಯಿಯು ಮೂವತ್ತು ಯೋಜನದಗಲಕ್ಕೆ ವಿಸ್ತರಿಸಿದಳು; ಆಗ ಹನುಮ ನಲವತ್ತು ಯೋಜನದಷ್ಟು ದೊಡ್ಡದಾದ ಅವಳಾಗ ಐವತ್ತು ಯೋಜನದಗಲಕ್ಕೆ ಬಾಯಿ ತೆರೆದಳು; ಪವನಸುತ ಅರುವತ್ತು ಯೋಜನಕ್ಕೆ ತನ್ನ ದೇಹವನ್ನು ಹಿಗ್ಗಲಿಸಿದ; ಅದಕ್ಕೆ ಪ್ರತಿಯಾಗಿ ಅವಳ ಬಾಯಿ ಎಪ್ಪತ್ತು ಯೋಜನ ಅಗಲವಾಯಿತು; ಅವನ ದೇಹ ಎಂಬತ್ತು ಯೋಜನದಷ್ಟು ಅಗಲಿಸಿದ; ಅವಳ ಬಾಯಿ ತೊಂಬತ್ತು ಯೋಜನದಷ್ಟಾಯಿತು. ಮಾರುತಿಯ ನೂರು ಯೋಜನವಾಯಿತು. ಆಗ ಹನುಮನು, ಒಳ್ಳೆ ದೊಡ್ಡ ಅಡ್ಡಿಯೇ ಬಂದುಬಿಟ್ಟಿತಲ್ಲ, ಏನು ಮಾಡುವುದು!' ಎಂದು ತನ್ನಲ್ಲಿಯೇ ಆಲೋಚಿಸಿ, ''ಈಗ ನಿನ್ನ ಮಹಾ ವಿಸ್ತಾರವಾದ ಬಾಯಲ್ಲಿ ಬೆರಳು ಗಾತ್ರದಷ್ಟಾಗಿ ಹೊಕ್ಕು ಹೊರಬರುತ್ತೇನೆ'' ಎಂದು ಅವಳ ಬಾಯಲ್ಲಿ ದುಮುಕಿ ಹೊಟ್ಟೆಯನ್ನು ಸೀಳಿಕೊಂಡು ಮೋಡವನ್ನು ಸೀಳಿಕೊಂಡು ಹೊರಬರುವ ಸೂರ್ಯನಂತೆ ಹೊರಬಂದು ಸುರಸೆಯಲ್ಲಿ, ''ಸುಗುಣೆ, ನೀನು ಹೇಳಿದಂತೆಯೇ ನಾನು ನಿನ್ನ ಬಾಯನ್ನು ಹೊಕ್ಕು ಹೊರಬಂದಿದ್ದೇನೆ, ದಾಕ್ಷಾಯಣಿಯೇ ನಮೋಸ್ತು, ದಯವಿಟ್ಟು ನೋಡು. ವೈದೇಹಿಯಿರುವ ತಾಣಕ್ಕೆ ಹೋಗಿ ಬರುತ್ತೇನೆ'' ಎಂದು ಹೇಳಿದ. ಆಗ ಎಲ್ಲಾ ದೇವತೆಗಳೂ ಚಾರಣರೂ ಜಯಘೋಷ ಮಾಡಿ ಅವನ ಮೇಲೆ ಹೂಮಳೆಗರೆದರು. ಆಗ ಸುರಸೆಯು ನಗುತ್ತ, ''ನಾನು ನಾಗಮಾತೆಯಾದ ಸುರಸೆ, ನಿನ್ನ ಬಲಾಬಲವನ್ನು ತಿಳಿಯಲು ಸುರಪನು ಹೇಳಿದ್ದರಿಂದ ಈ ರೂಪದಲ್ಲಿ ಬಂದೆ, ನೀನು ದಕ್ಷ, ಶತ್ರುಗಳಿಗೆ ಹರ್ಯಕ್ಷ. ದಶಗಳನೂ ಸೇರಿದಂತೆ ರಕ್ಕಸರೆಲ್ಲ ನಿನಗೆ ಹುಲ್ಲುಕಡ್ಡಿಯಂತೆ, ರಾಮಕಾರ್ಯದ ವಿಷಯದಲ್ಲಿ ನೀನು ಸಾಕ್ಷಾತ್ ಶಿವನೇ ಸರಿ. ಸುಖವಾಗಿ ಹೋಗಿ ಬಾ'' ಎಂದು ಹರಸಿ ಬೀಳ್ಕೊಟ್ಟಳು.

ಮುಂದುವರಿಯುವುದು...

---

**ಇತ್ತೀಚಿನ ದಿನಗಳಲ್ಲಿ ಸರ್ಕಾರಿ ನೌಕರರ ಕೆಲಸದ ವಾತಾವರಣದಲ್ಲಿ ದೊಡ್ಡ ಬದಲಾವಣೆಗಳು ಕಂಡು ಬರುತ್ತಿವೆ. ಡಿಜಿಟಲ್ ಯುಗದ ಆಗಮನ, ಆಡಳಿತದ ವೇಗ, ಸಾರ್ವಜನಿಕರ ನಿರೀಕ್ಷೆಗಳ ಹೆಚ್ಚಳ ಇವುಗಳೆಲ್ಲವೂ ನೌಕರರ ಮೇಲಿನ ಒತ್ತಡವನ್ನು ಬಹಳಷ್ಟು ಹೆಚ್ಚಿಸಿವೆ. ಹೊರಗಿನಿಂದ ನೋಡಿದಾಗ ಸರ್ಕಾರಿ ಉದ್ಯೋಗವು ಸ್ಥಿರತೆ, ಭದ್ರತೆ ಮತ್ತು ಗೌರವದ ಪ್ರತೀಕವೆಂದು ಕಾಣಬಹುದು. ಆದರೆ ಆ ಸ್ಥಿರತೆಯ ಹಿಂದೆ ಎಷ್ಟೋ ಅಡಗಿದ ಕಷ್ಟಗಳು, ಆತಂಕಗಳು ಮತ್ತು ಅನಿರೀಕ್ಷಿತ ಒತ್ತಡಗಳು ಅಡಗಿವೆ ಎಂಬುದನ್ನು ನಾವು ಹೆಚ್ಚು ಗಮನಿಸುವುದಿಲ್ಲ.**





ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಸೆನ್ಸಸ್‌ನ ನೆರಳಲ್ಲಿ ನೌಕರರ ನೋವು

**ಒಳಗಿನ ಹೋರಾಟಗಳನ್ನು ಸಹ ಅರ್ಥಮಾಡಿಕೊಳ್ಳಬೇಕು.**

'ಸೆನ್ಸಸ್' ಅಥವಾ ಕಾರ್ಯಕ್ಷಮತೆಯನ್ನು ಅಳೆಯುವ ವಿವಿಧ ಕ್ರಮಗಳು ಈಗ ಸರ್ಕಾರಿ ವಲಯದಲ್ಲೂ ವ್ಯಾಪಕವಾಗಿವೆ. ಯೋಜನೆಗಳ ಯಶಸ್ಸು, ಗುರಿಗಳ ಸಾಧನೆ, ಸಮಯಕ್ಕೆ ಸರಿಯಾಗಿ ಸೇವೆಗಳ ಒದಗಿಕೆ ಇವೆಲ್ಲವನ್ನು ಅಳೆಯುವ ಈ ವ್ಯವಸ್ಥೆಗಳು ಒಂದೆಡೆ ಉತ್ತಮ ಆಡಳಿತಕ್ಕೆ ನೆರವಾಗುತ್ತವೆ.

ಆದರೆ ಮತ್ತೊಂದೆಡೆ, ನೌಕರರ ಮೇಲೆ ನಿರಂತರ ಒತ್ತಡವನ್ನು ಸೃಷ್ಟಿಸುತ್ತವೆ. ಗುರಿ ತಲುಪದಿದ್ದರೆ ಪ್ರಶ್ನೆ, ತಲುಪಿದರೆ ಇನ್ನಷ್ಟು ಗುರಿಗಳು ಈ ಚಕ್ರದಲ್ಲಿ ನೌಕರರು ವಿಶ್ರಾಂತಿ ಪಡೆಯಲು ಅವಕಾಶವೇ ಸಿಗದೆ ಹೋಗುತ್ತಿದೆ.

ಇನ್ನೊಂದು ಪ್ರಮುಖ ಸಮಸ್ಯೆ ಕೆಲಸದ ಪ್ರಮಾಣ. ಕಡಿಮೆ ಸಿಬ್ಬಂದಿಯೊಂದಿಗೆ ಹೆಚ್ಚು ಕೆಲಸ ಮಾಡುವ ಪರಿಸ್ಥಿತಿ ಸಾಮಾನ್ಯವಾಗಿದೆ. ಫೈಲ್‌ಗಳ ಹೊರೆ, ಸಾರ್ವಜನಿಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕಾದ ಅಗತ್ಯ, ಮೇಲಾಧಿಕಾರಿಗಳ ನಿರೀಕ್ಷೆಗಳು ಇವುಗಳ ನಡುವೆ ನೌಕರರು ಮಾನಸಿಕವಾಗಿ ಕುಗ್ಗುವ ಪರಿಸ್ಥಿತಿ ಉಂಟಾಗುತ್ತದೆ.

ಕೆಲಸದ ಸಮಯಗಳು ನಿಗದಿತವಾಗಿದ್ದರೂ, ವಾಸ್ತವದಲ್ಲಿ ಹೆಚ್ಚುವರಿ ಸಮಯ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ.

ಡಿಜಿಟಲ್ ವ್ಯವಸ್ಥೆಗಳ ಪರಿಚಯವು ಕೆಲಸವನ್ನು ಸುಲಭಗೊಳಿಸಬೇಕಾಗಿದ್ದರೂ, ಹಲವೊಮ್ಮೆ ಹೊಸ ಸಮಸ್ಯೆಗಳನ್ನು ಉಂಟು ಮಾಡುತ್ತಿದೆ. ತಾಂತ್ರಿಕ ದೋಷಗಳು, ನಿರಂತರ ಅಪ್‌ಡೇಟ್‌ಗಳು, ತರಬೇತಿ ಕೊರತೆಇವುಗಳು ನೌಕರರಿಗೆ ಮತ್ತಷ್ಟು ತೊಂದರೆ ನೀಡುತ್ತವೆ. ಜೊತೆಗೆ, ಸಾರ್ವಜನಿಕರಿಂದ ಬರುವ ಒತ್ತಡ ಮತ್ತು ಕೆಲವೊಮ್ಮೆ ಅಸಮಾಧಾನ ವ್ಯಕ್ತಪಡಿಸುವ ವರ್ತನೆ ಕೂಡ ನೌಕರರ ಮನಸ್ಸಿಗೆ ಹೊರೆ ಆಗುತ್ತದೆ.

ಮಾನಸಿಕ ಆರೋಗ್ಯದ ವಿಷಯ ಇಲ್ಲಿ ಅತ್ಯಂತ ಮುಖ್ಯ. ನಿರಂತರ ಒತ್ತಡ, ಸಮಯದ ಕೊರತೆ, ಕುಟುಂಬಕ್ಕೆ ಕೊಡಬೇಕಾದ ಸಮಯದ ಅಭಾವ ಇವುಗಳಿಂದ ನೌಕರರು ಮಾನಸಿಕವಾಗಿ ದಣಿವನ್ನು ಅನುಭವಿಸುತ್ತಿದ್ದಾರೆ. ಕೆಲಸ ಮತ್ತು ವೈಯಕ್ತಿಕ ಜೀವನದ ಸಮತೋಲನ ಕಳೆದುಹೋಗುವುದು ಸಾಮಾನ್ಯವಾಗಿದೆ. ಇದರಿಂದಾಗಿ ಅವರ ಆರೋಗ್ಯ, ಸಂತೋಷ ಮತ್ತು ಉತ್ಪಾದಕತೆ ಎಲ್ಲವೂ ಪ್ರಭಾವಿತರಾಗುತ್ತಿವೆ.

ಆದರೆ ಈ ಸಮಸ್ಯೆಗಳಿಗೆ ಪರಿಹಾರಗಳೂ ಇವೆ. ಮೊದಲಿಗೆ, ಸಿಬ್ಬಂದಿ ಕೊರತೆಯನ್ನು ಸರಿಪಡಿಸುವುದು ಅತ್ಯಾವಶ್ಯಕ. ಕೆಲಸದ ಹೊರೆ ಸಮವಾಗಿ ಹಂಚಿಕೆ ಮಾಡುವುದು, ನೌಕರರಿಗೆ ಸರಿಯಾದ ತರಬೇತಿ ನೀಡುವುದು, ಮತ್ತು ತಾಂತ್ರಿಕ ವ್ಯವಸ್ಥೆಗಳನ್ನು ಸುಧಾರಿಸುವುದು ಮುಖ್ಯ.

ಇದೆಲ್ಲದರ ಜೊತೆಗೆ, ನೌಕರರ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹರಿಸಿ, ಸಲಹಾ ಸೇವೆಗಳು ಮತ್ತು ವಿಶ್ರಾಂತಿ ಅವಕಾಶಗಳನ್ನು ಒದಗಿಸುವುದು ಅಗತ್ಯ.

ಸರ್ಕಾರಿ ವ್ಯವಸ್ಥೆಯ ಯಶಸ್ಸು ನೌಕರರ ಪರಿಶ್ರಮದ ಮೇಲೆ ನಿಂತಿದೆ. ಅವರ ನೋವುಗಳನ್ನು ಅರಿತು, ಅವರಿಗೆ ಸೂಕ್ತ ಬೆಂಬಲ ನೀಡಿದಾಗ ಮಾತ್ರ ನಿಜವಾದ ''ಸೆನ್ಸಸ್'' ಸಾಧ್ಯವಾಗುತ್ತದೆ. ಸೆನ್ಸಸ್ ಎಂದರೆ ಕೇವಲ ಗುರಿ ಸಾಧನೆ ಅಲ್ಲ; ನೌಕರರ ಸಂತೋಷ, ಆರೋಗ್ಯ ಮತ್ತು ಸಮತೋಲನಯುತ ಜೀವನವೂ ಅದರಲ್ಲಿ ಸೇರಬೇಕು.

ಒಟ್ಟಿನಲ್ಲಿ, ಸರ್ಕಾರಿ ನೌಕರರ ಜೀವನವನ್ನು ನಾವು ಹೊರಗಿನಿಂದ ಮಾತ್ರ ನೋಡದೆ, ಅವರ ಒಳಗಿನ ಹೋರಾಟಗಳನ್ನು ಸಹ ಅರ್ಥಮಾಡಿಕೊಳ್ಳಬೇಕು. ಅವರ ಶ್ರಮಕ್ಕೆ ಗೌರವ ನೀಡಿ, ಅವರಿಗೆ ಸಹಾನುಭೂತಿ ತೋರಿಸಿದಾಗ ಮಾತ್ರ, ನಮ್ಮ ಸಮಾಜವು ಇನ್ನಷ್ಟು ಸದೃಢ, ನ್ಯಾಯಯುತವಾಗಿಯೂ ಸಮತೋಲನಯುತ ಮತ್ತು ಮಾನವೀಯವಾಗುತ್ತದೆ.

---

# ಡ್ರಿಂಕ್ಸ್ ಮಾಡದವರಲ್ಲೂ ಫ್ಯಾಟಿ ಲಿವರ್ ಸಮಸ್ಯೆ

ಎಂದಿಗೂ ಮದ್ಯಪಾನ ಮಾಡದವರಲ್ಲಿ ಯಕೃತ್ತಿನ ಕಾಯಿಲೆಯ ಹರಡುವಿಕೆಯನ್ನು ಮೆಟಬಾಲಿಕ್ ಅಪಸಾಮಾನ್ಯ ಕ್ರಿಯೆ-ಸಂಬಂಧಿತ ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆ ಎಂದು ಕರೆಯಲಾಗುತ್ತದೆ. MAFLD ಈಗ ಭಾರತದಲ್ಲಿ ಯಕೃತ್ತಿನ ಸಾಮಾನ್ಯ ಕಾಯಿಲೆಗಳಲ್ಲಿ ಒಂದಾಗಿದೆ, ಸರಿಸುಮಾರು ಪ್ರತಿ 5 ಜನರಲ್ಲಿ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ.

MAFLD ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ ಇದಲ್ಲದೆ, MAFLD ಆರಂಭದಲ್ಲಿ ಯಾವುದೇ ಲಕ್ಷಣಗಳನ್ನು ತೋರಿಸದೇ ಇರಬಹುದು.

ಸಾಮಾನ್ಯ ವೈದ್ಯಕೀಯ ಭೇಟಿಗಳು ಅಥವಾ ಇಮೇಜಿಂಗ್ ಪರೀಕ್ಷೆಯ ಸಮಯದಲ್ಲಿ ಯಕೃತ್ತಿನಲ್ಲಿ ಕೊಬ್ಬಿನ ನಿಕ್ಷೇಪಗಳು ಅನಿರೀಕ್ಷಿತವಾಗಿ ಕಂಡುಬಂದಾಗ, ಸಾಮಾನ್ಯವಾಗಿ, ಇದನ್ನು ಹೆಚ್ಚಾಗಿ ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆ ಎಂದು ನಿರ್ಣಯಿಸಲಾಗುತ್ತದೆ.

ಆದಾಗ್ಯೂ, ಬಳಲಿಕೆ, ಹೊಟ್ಟೆಯ ಮೇಲ್ಭಾಗದ ನೋವು ಅಥವಾ ಅಸ್ವಸ್ಥತೆ ಮತ್ತು ವಿವರಿಸಲಾಗದ ತೂಕದ ಏರಿಳಿತಗಳಂತಹ ಲಕ್ಷಣಗಳು ಕಾಣಿಸಿಕೊಳ್ಳಲು ಪ್ರಾರಂಭಿಸುವ ಹೊತ್ತಿಗೆ ಯಕೃತ್ತಿನ ಕಾಯಿಲೆಯು ಹೆಚ್ಚು ಮುಂದುವರಿದ ಹಂತಕ್ಕೆ ಮುಂದುವರೆದಿರುವ ಸಾಧ್ಯತೆಯಿದೆ. ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯಲ್ಲಿ ಹೆಚ್ಚಳ ಕಂಡುಬಂದಿದೆ ಮತ್ತು ಅದರಲ್ಲಿ ಹೆಚ್ಚಿನವು ನಮ್ಮ ಜೀವನಶೈಲಿಯ ಅಭ್ಯಾಸಗಳಿಗೆ ಸಂಬಂಧಿಸಿರಬಹುದು ಎಂದು ಗ್ಯಾಸ್ಟ್ರೋಎಂಟರಾಲಜಿಸ್ಟ್ ಹೇಳುತ್ತಾರೆ. ನಮ್ಮ ಜಡ ಜೀವನಶೈಲಿಯ ಆಯ್ಕೆಗಳು, ದೀರ್ಘ ಕೆಲಸದ ಸಮಯ, ಹೆಚ್ಚು ಸಂಸ್ಕರಿಸಿದ ಆಹಾರಗಳ ಸೇವನೆ ಹೆಚ್ಚಾಗುವುದು ಬೊಜ್ಜು ಮತ್ತು ಮಧುಮೇಹದ ಹೆಚ್ಚುತ್ತಿರುವ ದರಗಳು ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯ ಕೆಲವು ಪ್ರಮುಖ ಅಂಶಗಳಾಗಿವೆ.

ಜನರು ಅಧಿಕ ತೂಕ ಅಥವಾ ಬೊಜ್ಜು ಹೊಂದಿಲ್ಲದಿದ್ದರೆ ಅವರಿಗೆ ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆ ಬರುವುದಿಲ್ಲ ಎಂದು ಬಹಳಷ್ಟು ಜನರು ಸಾಮಾನ್ಯವಾಗಿ ನಂಬುತ್ತಾರೆ.

ಆದಾಗ್ಯೂ, ಚಯಾಪಚಯ ಕ್ರಿಯೆಯು ಅಷ್ಟೇ ಮುಖ್ಯವಾದ ಕಾರಣ, ಸಾಮಾನ್ಯ ದೇಹದ ತೂಕವನ್ನು ಹೊಂದಿರುವುದು ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯ ಲಕ್ಷಣಗಳಿಗೆ ಸಂಪೂರ್ಣವಾಗಿ ರೋಗನಿರೋಧಕವಾಗಿದೆ. ಇನ್ಸುಲಿನ್ ಪ್ರತಿರೋಧ, ಅಧಿಕ ರಕ್ತದೊತ್ತಡ ಅಥವಾ ಅಧಿಕ ಕೊಲೆಸ್ಟ್ರಾಲ್‌ನಂತಹ ಕಳಪೆ ಚಯಾಪಚಯ ಆರೋಗ್ಯ ಹೊಂದಿರುವವರು ಯಕೃತ್ತಿನ ಕೊಬ್ಬನ್ನು ಬೆಳೆಸಿಕೊಳ್ಳುವ ಸಾಧ್ಯತೆ ಹೆಚ್ಚು. ಯಕೃತ್ತಿನ ಕೋಶಗಳಲ್ಲಿ ಅತಿಯಾದ ಕೊಬ್ಬಿನ ಶೇಖರಣೆಯಿಂದ ಉಂಟಾಗುವ ಉರಿಯೂತವು ಅಂತಿಮವಾಗಿ ಚಯಾಪಚಯ ಅಪಸಾಮಾನ್ಯ ಕ್ರಿಯೆ-ಸಂಬಂಧಿತ ಸ್ಟೀಟೋಹೆಪಟೈಟಿಸ್ ಗೆ ಕಾರಣವಾಗಬಹುದು, ಇದು ಸ್ಥಿತಿಯ ಹೆಚ್ಚು ತೀವ್ರ ರೂಪವಾಗಿದೆ. ಚಿಕಿತ್ಸೆ ನೀಡದಿದ್ದರೆ, MASH ಸಿರೋಸಿಸ್, ಫೈಬ್ರೋಸಿಸ್ ಮತ್ತು ಕೆಲವು ಸಂದರ್ಭಗಳಲ್ಲಿ ಯಕೃತ್ತಿನ ಕ್ಯಾನ್ಸರ್ ಆಗಿ ಬೆಳೆಯಬಹುದು.

**ಆರಂಭಿಕ ಪತ್ತೆಯ ಪ್ರಾಮುಖ್ಯತೆ**

ಸ್ಥಿತಿ ಬೆಳೆದಂತೆ ಮತ್ತಷ್ಟು ಹಾನಿಯನ್ನು ತಡೆಗಟ್ಟಲು ಆರಂಭಿಕ ಪತ್ತೆ ಅತ್ಯಗತ್ಯ. ಯಕೃತ್ತಿನ ಸ್ಥಿತಿಯ ವ್ಯಾಪ್ತಿಯನ್ನು ನಿರ್ಧರಿಸಲು, ರಕ್ತ ವಿಶ್ಲೇಷಣೆ, ಅಲ್ಟ್ರಾಸೌಂಡ್ ಇಮೇಜಿಂಗ್ ಮತ್ತು ಕೆಲವೊಮ್ಮೆ ಅತ್ಯಾಧುನಿಕ ಇಮೇಜಿಂಗ್ ವಿಧಾನಗಳು ಅಥವಾ ಯಕೃತ್ತಿನ ಬಯಾಪ್ಸಿ ಸೇರಿದಂತೆ ಪರೀಕ್ಷೆಗಳನ್ನು ಬಳಸಲಾಗುತ್ತದೆ. ಕೊಬ್ಬಿನ ಪಿತ್ತಜನಕಾಂಗಕ್ಕಾಗಿ ನಿಯಮಿತ ಸ್ಕ್ರೀನಿಂಗ್ ಸಹ ಮುಖ್ಯ, ಬೊಜ್ಜು, ಮಧುಮೇಹ ಪೂರ್ವ ಅಥವಾ ಚಯಾಪಚಯ ಅಸ್ವಸ್ಥತೆಗಳ ಕುಟುಂಬದ ಇತಿಹಾಸ ಹೊಂದಿರುವವರಿಗೆ ಇದನ್ನು ಶಿಫಾರಸು ಮಾಡಲಾಗುತ್ತದೆ.



---

# ಬಂಗಾರದ ಮನುಷ್ಯ ಗಾನ ಜೀವನ ಯಾನ ಅಪೂರ್ವ ಗಾನಸುಧೆ



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಕನ್ನಡ ಚಿತ್ರರಂಗದ ದಿಗ್ಗಜ ನಟ ಅಭಿನಯ ಸಾರ್ವಭೌಮ ಡಾ. ರಾಜಕುಮಾರ್ ಅವರು ಎಲ್ಲರ ಮನದಲ್ಲೂ ಸದಾ ಹಸಿರು ನೆನಪು. ಸಾಂಸ್ಕೃತಿಕ ಲೋಕಕ್ಕೆ ಈ ಬಂಗಾರದ ಮನುಷ್ಯನ ಕೊಡುಗೆ ಅನನ್ಯ. ಅವರ ಬಹುಮುಖ ಪ್ರತಿಭೆಯ ಪ್ರಜ್ವಲತೆ, ಕಾಲಾಂತರದಲ್ಲೂ ಚಿರಸ್ಥಾಯಿಯಾಗಿ ಉಳಿದುಕೊಂಡು ಬರುವಂಥ ಅನರ್ಘ್ಯ ಭಂಡಾರವದು. ಇಂಥದೊಂದು ಅವರ ಚಿರಸ್ಮರಣೀಯ ನೆನಪನ್ನು ಹೃದಯಸ್ಪರ್ಶಿಯಾಗಿಸುವ ಇನಿಸಂಜೆ 'ಬಂಗಾರದ ಮನುಷ್ಯ' ಗಾನ ಜೀವನಯಾನ' ಎಂಬ ಅರ್ಥಪೂರ್ಣ ಶೀರ್ಷಿಕೆಯಲ್ಲಿ ಮೂಡಿಬರಲಿದೆ.



ಇದನ್ನು ರೂಪಿಸಿರುವವರು ಸಂಗೀತ ಲೋಕದ ಪ್ರಖ್ಯಾತ ಗಾಯಕಿ, ಸಂಘಟಕಿ, ಪೋಷಕಿಯಾದ 'ಸಂಗೀತ ಸಂಭ್ರಮ'ದ ಡಾ. ಪುಸ್ತಕಂ ರಮಾ, ಸುರಾಘವಿ ಫೌಂಡೇಶನ್‌ನ ರಘುನಂದನ್ ಮತ್ತು ಬಾಬು ಸ್ಕೂಲ್ ಆಫ್ ರಿದಮ್ಸ್‌ನ ಅರುಣ್ ಕುಮಾರ್ ಅವರ ಸಹಯೋಗದೊಂದಿಗೆ ಏಪ್ರಿಲ್ 23 ಗುರುವಾರ ಸಂಜೆ 6 ಗಂಟೆಗೆ ನಗರದ ಮಲ್ಲೇಶ್ವರದ ಚೌಡಯ್ಯ ಮೆಮೋರಿಯಲ್ ಹಾಲಿನಲ್ಲಿ 'ಡಾ. ರಾಜಕುಮಾರ್ ಗಾನ ಜೀವನಯಾನ' ಎಂಬ ಹೃದಯಸ್ಪರ್ಶಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಡಾ. ರಾಜಕುಮಾರ್ ಸಿರಿಕಂಠದಲ್ಲಿ ಹಾಡಿರುವ ಗಾನಸುಧೆಯನ್ನು ನಾಡಿನ ಪ್ರಖ್ಯಾತ ಗಾಯಕರಾದ ರಾಧಾಕೃಷ್ಣ ಮೋಹನ್, ಸುಪ್ರಿಯ ರಘುನಂದನ್, ಶ್ರೀಹರ್ಷ, ಲಕ್ಷ್ಮೀ ವಿಜಯ್ ಮತ್ತು ಕು. ಸಾಕ್ಷಿ ಜಗದೀಶ್ ಅವರು ಹಾಡಿ ಕಲಾರಸಿಕರಿಗೆ ಶ್ರವ್ಯಾನಂದವನ್ನು ನೀಡಲಿದ್ದಾರೆ. ಅವರಿಗೆ ಹಿನ್ನೆಲೆಯಲ್ಲಿ ಅನೇಕ ಖ್ಯಾತ ವಾದ್ಯಗಾರರು ಸಾಂಗತ್ಯ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ – ಶ್ರೀ ಅಶ್ವತ್ಥನಾರಾಯಣ್ ಶಾಸಕರು, ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ಮತ್ತು ಮುಖ್ಯ ಅತಿಥಿಗಳಾಗಿ ಶ್ರೀ ಪ್ರಕಾಶ್ ರಾಜ್ ಅನೇಕ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳ ವಿಜೇತ ನಟ ಭಾಗವಹಿಸುತ್ತಾರೆ.

ಈ ಸಮಾರಂಭದಲ್ಲಿ – ಡಾ. ಜಯಮಾಲ ಅಧ್ಯಕ್ಷರು ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿ, ಖ್ಯಾತ ನಟರುಗಳಾದ ಡಾ. ಮುಖ್ಯಮಂತ್ರಿ ಚಂದ್ರು, ಎಂ. ಕೆ. ಸುಂದರ್ ರಾಜ್, ಡಾ. ಟಿ. ಎಸ್. ನಾಗಾಭರಣ ಖ್ಯಾತ ನಿರ್ದೇಶಕರು ಮತ್ತು ಡಾ. ಗಿರಿಜಾ ಲೋಕೇಶ್ ನುಡಿ ನಮನಗಳನ್ನು ಸಲ್ಲಿಸಲಿದ್ದಾರೆ. ಕಾರ್ಯಕ್ರಮದ ನಿರೂಪಣೆಯನ್ನು ನಗೆ ಸಾರ್ವಭೌಮ ಶ್ರೀ ಗಂಗಾವತಿ ಪ್ರಾಣೇಶ್ ನಡೆಸಿಕೊಡಲಿದ್ದಾರೆ. ಈ ಕಾರ್ಯಕ್ರಮದ ಆಯೋಜಕರು ಡಾ. ಪುಸ್ತಕಂ ರಮಾ, ( ಕಾರ್ಯ ಆಯೋಜಕರು ಮತ್ತು ಸಂಘಟಕಿ ) ಪರಿಕಲ್ಪನೆ ಮತ್ತು ವಾದ್ಯಗೋಷ್ಠಿ ನಿರ್ವಹಣೆ ರಘುನಂದನ್ ಮತ್ತು ಅರುಣ್ ಕುಮಾರ್. ಕಾರ್ಯಕ್ರಮಕ್ಕೆ ಪ್ರವೇಶ– 'ಬುಕ್ ಮೈ ಷೋ' ಮೂಲಕ ಎಂದು ಪ್ರಕಟಣೆ ತಿಳಿಸಿದೆ.

---

# ಪೈಲ್ವಾನರ ಲಂಗೋಟಿ ಶುಚಿತ್ವ ಮತ್ತು ಪಾವಿತ್ರ್ಯತೆ

**ಭಾರತೀಯ ಮಣ್ಣಿನ ಕುಸ್ತಿ ಅಥವಾ ಗರಡಿ ಸಂಸ್ಕೃತಿಯಲ್ಲಿ ಲಂಗೋಟಿ ಎನ್ನುವುದು ಕೇವಲ ಶರೀರವನ್ನು ಮುಚ್ಚುವ ಅಲ್ಪವಸ್ತ್ರವಲ್ಲ; ಅದು ಒಬ್ಬ ಪೈಲ್ವಾನನ ಆತ್ಮಗೌರವ, ಕಠೋರ ಶಿಸ್ತು ಮತ್ತು ಅಖಾಡದ ಮೇಲಿರುವ ಅಚಲ ಭಕ್ತಿಯ ಸಂಕೇತ. ಲಂಗೋಟಿ ಬಲ ಎನ್ನುವ ಜನಪ್ರಿಯ ನಾಣ್ಣುಡಿಯ ಹಿಂದೆ ಕೇವಲ ದೈಹಿಕ ಶಕ್ತಿಯಷ್ಟೇ ಅಲ್ಲ, ದಶಕಗಳ ಕಾಲದ ಸಂಯಮ ಮತ್ತು ಪಾವಿತ್ರ್ಯತೆಯ ಇತಿಹಾಸವಿದೆ. ಗರಡಿ ಮನೆಯ ಅಂಗಳದಲ್ಲಿ ಲಂಗೋಟಿಯ ಶುಚಿತ್ವವು ಪೈಲ್ವಾನನ ಚಾರಿತ್ರ್ಯವನ್ನು ಪ್ರತಿಬಿಂಬಿಸುವ ಕನ್ನಡಿಯೂ ಹೌದು.**

ಕುಸ್ತಿ ಪಟುವಿನ ಪಾಲಿಗೆ ಲಂಗೋಟಿ ಧರಿಸುವುದು ಒಂದು ಪವಿತ್ರ ಸಂಸ್ಕಾರ. ಇದನ್ನು ಹನುಮಂತನ ದೀಕ್ಷೆ ಎಂದೇ ಶ್ರದ್ಧೆಯಿಂದ ಪರಿಗಣಿಸಲಾಗುತ್ತದೆ. ಅಖಾಡಕ್ಕೆ ಇಳಿಯುವ ಮುನ್ನ ಲಂಗೋಟಿಯನ್ನು ಬಿಗಿದು ಕಟ್ಟಿ, ಮಣ್ಣಿಗೆ ನಮಸ್ಕರಿಸುವ ಕ್ರಿಯೆಯು ಅಹಂಕಾರವನ್ನು ಮಣ್ಣಾಗಿಸಿ, ದೈವಿಕ ಶಕ್ತಿಯನ್ನು ಆವಾಹಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಇದು ಕೇವಲ ಕ್ರೀಡೆಯಲ್ಲ, ಬದಲಿಗೆ ಇಂದ್ರಿಯ ನಿಗ್ರಹದ ಮೂಲಕ ಮನಸ್ಸನ್ನು ಏಕಾಗ್ರತೆಯತ್ತ ಸದಾ ಕೊಂಡೊಯ್ಯುವ ಆಧ್ಯಾತ್ಮಿಕ ಪಯಣ. ಲಂಗೋಟಿ ಎಷ್ಟು ಬಿಗಿಯಾಗಿರುತ್ತದೆಯೋ ಪೈಲ್ವಾನನ ಸಂಕಲ್ಪ ಶಕ್ತಿಯೂ ಅಷ್ಟೇ ದೃಢವಾಗಿರುತ್ತದೆ ಎಂಬುದು ಹಿರಿಯ ಉಸ್ತಾದರ ಅಚಲ ನಂಬಿಕೆಯಾಗಿದೆ.




ಲಂಗೋಟಿಯ ವಿನ್ಯಾಸವು ಅತ್ಯಂತ ವೈಜ್ಞಾನಿಕ ಹಾಗೂ ತಾರ್ಕಿಕವಾಗಿದೆ. ಕಠಿಣ ದೈಹಿಕ ಶ್ರಮದ ವೇಳೆ ದೇಹದ ಕೆಳಭಾಗದ ಸ್ನಾಯುಗಳ ಮೇಲೆ ಅತಿಯಾದ ಒತ್ತಡ ಬೀಳುತ್ತದೆ. ಲಂಗೋಟಿಯನ್ನು ಬಿಗಿಯಾಗಿ ಕಟ್ಟುವುದು ಸ್ನಾಯುಗಳಿಗೆ ದೃಢವಾದ ಆಸರೆ ನೀಡಿ, ಒಳಾಂಗಗಳು ಸ್ಥಳಾಂತರಗೊಳ್ಳದಂತೆ ತಡೆಯುತ್ತದೆ. ವಿಶೇಷವಾಗಿ, ಭಾರ ಎತ್ತುವಾಗ ಅಥವಾ ಕುಸ್ತಿಯ ಪಟ್ಟುಗಳನ್ನು ಹಾಕುವಾಗ ಎದುರಾಗುವ ಹರ್ನಿಯಾದಂತಹ ಗಂಭೀರ ವೈದ್ಯಕೀಯ ಸಮಸ್ಯೆಗಳಿಗೆ ಇದು ನೈಸರ್ಗಿಕ ತಡೆಗೋಡೆಯಾಗಿ ಕೆಲಸ ಮಾಡುತ್ತದೆ. ಬೆನ್ನುಮೂಳೆಯ ಕೆಳಭಾಗಕ್ಕೆ ಲಂಗೋಟಿ ನೀಡುವ ಬಿಗಿಬಂಧವು ಕಸರತ್ತಿನ ವೇಳೆ ಶರೀರಕ್ಕೆ ಸ್ಥಿರತೆಯನ್ನು ಒದಗಿಸುತ್ತದೆ.



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ವೈಜ್ಞಾನಿಕ ದೃಷ್ಟಿಕೋನದಿಂದ ನೋಡುವುದಾದರೆ, ಪೈಲ್ವಾನರು ಕಡ್ಡಾಯವಾಗಿ ದಪ್ಪನೆಯ ಹತ್ತಿ ಬಟ್ಟೆಯ ಲಂಗೋಟಿಗಳನ್ನೇ ಬಳಸುತ್ತಾರೆ. ಮಣ್ಣಿನಲ್ಲಿ ಉರುಳಾಡುವಾಗ ದೇಹದಿಂದ ಸುರಿಯುವ ಹೇರಳವಾದ ಬೆವರನ್ನು ಹೀರಿಕೊಳ್ಳಲು ಹತ್ತಿ ಬಟ್ಟೆ ಅತ್ಯಂತ ಸೂಕ್ತ. ಇದು ಚರ್ಮಕ್ಕೆ ಗಾಳಿಯಾಡಲು ಅವಕಾಶ ಮಾಡಿಕೊಡುವ ಮೂಲಕ ದೇಹದ ಉಷ್ಣತೆಯನ್ನು ಸಮತೋಲನದಲ್ಲಿಡುತ್ತದೆ. ಕೃತಕ ಎಳೆಗಳ ಬಟ್ಟೆಗಳು ಚರ್ಮದ ಉರಿಯೂತ ಅಥವಾ ಅಲರ್ಜಿಯನ್ನು ಉಂಟುಮಾಡಬಹುದು, ಆದರೆ ಹತ್ತಿ ಬಟ್ಟೆಯು ಶರೀರಕ್ಕೆ ನೈಸರ್ಗಿಕ ರಕ್ಷಣೆ ನೀಡುತ್ತದೆ.

ಗರಡಿ ಮನೆಯಲ್ಲಿ ಲಂಗೋಟಿಯ ಶುಚಿತ್ವಕ್ಕೆ ಮೊದಲ ಆದ್ಯತೆ ನೀಡಲಾಗುತ್ತದೆ. ಮಣ್ಣು ಮತ್ತು ಬೆವರಿನ ಮಿಶ್ರಣವು ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರಗಳ ತಾಣವಾಗದಂತೆ ತಡೆಯುವುದು ಅತಿಮುಖ್ಯ. ಈ ನಿಟ್ಟಿನಲ್ಲಿ ಪ್ರತಿಬಾರಿ ಅಭ್ಯಾಸ ಮುಗಿದ ತಕ್ಷಣ ಲಂಗೋಟಿಯನ್ನು ಬಿಸಿ ನೀರಿನಲ್ಲಿ ಅಥವಾ ನೈಸರ್ಗಿಕ ಕ್ರಿಮಿನಾಶಕಗಳನ್ನು ಬಳಸಿ ಒಗೆಯುವುದು ಕಡ್ಡಾಯವಾಗಿದೆ. ಒಗೆದ ಲಂಗೋಟಿಯನ್ನು ನೇರ ಸೂರ್ಯನ ಬೆಳಕಿನಲ್ಲಿಯೇ ಒಣಗಿಸಬೇಕು; ಏಕೆಂದರೆ ಸೂರ್ಯನ ಅತಿನೇರಳೆ ಕಿರಣಗಳು ನೈಸರ್ಗಿಕವಾಗಿ ಸೂಕ್ಷ್ಮಾಣುಜೀವಿಗಳನ್ನು ನಾಶಪಡಿಸುತ್ತವೆ. ಇದು ಕೇವಲ ಸ್ವಚ್ಛತೆಯಲ್ಲ, ಬದಲಿಗೆ ಶರೀರವನ್ನೇ ದೇವಸ್ಥಾನವೆಂದು ಭಾವಿಸುವ ಪವಿತ್ರ ಭಾವನೆಯಾಗಿದೆ.

ಲಂಗೋಟಿಯ ಪಾವಿತ್ರ್ಯತೆ ಮತ್ತು ಶುಚಿತ್ವವು ಪೈಲ್ವಾನನ ವೃತ್ತಿಪರತೆಯನ್ನು ಅಳೆಯುವ ಪ್ರಮುಖ ಮಾನದಂಡ. ಕೊಳಕು ಲಂಗೋಟಿ ಧರಿಸುವವನು ತನ್ನ ಕಲೆ ಮತ್ತು ಶರೀರಕ್ಕೆ ಅಪಚಾರ ಎಸಗುತ್ತಾನೆ ಎಂಬ ಅಲಿಖಿತ ನಿಯಮ ಗರಡಿ ಮನೆಗಳಲ್ಲಿದೆ.

ಆಧುನಿಕ ಜಿಮ್ ಸಂಸ್ಕೃತಿಯ ಅಬ್ಬರದ ನಡುವೆಯೂ, ನಮ್ಮ ಮಣ್ಣಿನ ಈ ಲಂಗೋಟಿ ಸಂಸ್ಕೃತಿ ತನ್ನ ವೈಜ್ಞಾನಿಕ ಘನತೆ ಮತ್ತು ಸಾಂಪ್ರದಾಯಿಕ ಶಿಸ್ತಿನಿಂದಾಗಿ ಇಂದಿಗೂ ಪ್ರಸ್ತುತವಾಗಿದೆ. ಯಾರು ಲಂಗೋಟಿಯ ಪಾವಿತ್ರ್ಯತೆಯನ್ನು ಕಾಪಾಡುತ್ತಾರೋ, ಅವರಿಗೆ ಅಖಾಡದ ಮಣ್ಣು ಯಶಸ್ಸನ್ನು ಕರುಣಿಸುತ್ತದೆ ಎಂಬುದು ಸತ್ಯ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ , ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ವೃಷಭ** ಮಾನಸಿಕ ಶಾಂತಿಗಾಗಿ ಕೆಲವು ದಾನ ಧರ್ಮಗಳಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಿ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

**ಮಿಥುನ** ಒಬ್ಬ ಆಧ್ಯಾತ್ಮಿಕ ವ್ಯಕ್ತಿ ಆಶೀರ್ವಾದ ಮಾಡುತ್ತಾರೆ ಮತ್ತು ಮನಸ್ಸಿನ ಶಾಂತಿ ತರುತ್ತಾರೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು.

**ಕರ್ಕಾಟಕ** ನಿಮ್ಮ ಸಂಜೆ ವಿಭಿನ್ನ ಪ್ರತಿಕ್ರಿಯೆಗಳಿಂದ ಗುರುತಿಸಲ್ಪಡುತ್ತದೆ , ಇದು ನಿಮ್ಮನ್ನು ಉದ್ವಿಗ್ನವಾಗಿರಿಸಬಹುದು. ಆದರೆ ಹೆಚ್ಚು ಚಿಂತಿಸುವ ಅಗತ್ಯವಿಲ್ಲ – ನಿಮ್ಮ ಸಂತೋಷ ನಿಮಗೆ ನಿರಾಸೆಗಿಂತ ಹೆಚ್ಚು ಆನಂದ ನೀಡುತ್ತದೆ.

**ಸಿಂಹ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

**ಕನ್ಯಾ** ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ, ಇಂದು ನೀವು ಈ ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು.

**ತುಲಾ** ಈ ರಾಶಿಚಕ್ರದ ಜನರು ಇಂದು ಜನರನ್ನು ಭೇಟಿಯಾಗುವುದಕ್ಕಿಂತ ಒಂಟಿಯಾಗಿ ಸಮಯವನ್ನು ಕಳೆಯಲು ಇಷ್ಟಪಡುತ್ತಾರೆ. ನಿಮ್ಮ ಉಚಿತ ಸಮಯ ಮನೆಯನ್ನು ಸ್ವಚ್ಛಗೊಳಿಸುವಲ್ಲಿ ಕಳೆಯಬಹುದು.

**ವೃಶ್ಚಿಕ** ಒಬ್ಬ ದೂರದ ಸಂಬಂಧಿಯಿಂದ ಅನಿರೀಕ್ಷಿತ ಸುದ್ದಿ ನಿಮ್ಮ ಇಡೀ ದಿನವನ್ನು ಉಜ್ವಲಗೊಳಿಸುತ್ತದೆ. ನಿಮ್ಮ ಪ್ರೇಮ ಜೀವನವಾಗಿ ಮದುವೆಯ ಪ್ರಸ್ತಾಪ ಜೀವನಪೂರ್ಣದ ಬಂಧದಲ್ಲಿ ಬದಲಾಗಬಹುದು.

**ಧನಸ್ಸು** ದುರ್ಬಲ ಆರ್ಥಿಕಸ್ಥಿತಿಯಿಂದ ಕೆಲವು ಪ್ರಮುಖ ಕೆಲಸಗಳು ಸ್ಥಗಿತಗೊಳ್ಳುತ್ತವೆ. ಈ ಅವಧಿ ನಿಮ್ಮ ಹೊಸ ಯೋಜನೆಗಳು , ಆಲೋಚನೆಗಳ ಬಗ್ಗೆ ನಿಮ್ಮ ಪೋಷಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಒಳ್ಳೆಯದಾಗಿದೆ.

**ಮಕರ** ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ತಾಯಿಯ ಬದಿಯಿಂದ ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ.ನಿಮ್ಮ ಮಾಮ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ಕುಂಭ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

**ಮೀನ** ಇತರರಿಗೆ ಮುಜುಗರ ಉಂಟುಮಾಡಬೇಡಿ ಮತ್ತು ನಿಮ್ಮ ಕುಟುಂಬದ ಅವಶ್ಯಕತೆಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸಿ. ಯಾರಾದರೂ ನಿಮಗೆ ಪ್ರೇಮ ನಿವೇದನೆ ಮಾಡುವ ಸಾಧ್ಯತೆಗಳಿವೆ.

### ಔರಾದ್ ನಲ್ಲಿ ಅಕ್ರಮ ಮರಳು ವ್ಯಾಪಾರ ರಾಜಾರೋಷ। ಫುಟ್‌ಪಾತ್ ವ್ಯಾಪಾರ, ಪಾದಚಾರಿಗಳಿಗೆ ಸಂಚಕಾರ

# ಫುಟ್ ಪಾತ್‌ಗಳ ಅತಿಕ್ರಮಣ: ಪಾದಚಾರಿಗಳ ಗೋಳು ಕೇಳೋರಿಲ್ಲ!

• ಪರಮೇಶ.ಡಿ.ವಿಳಸಪೂರೆ

• ಉದಯವಾಹಿನಿ ಔರಾದ್


ಉದಯವಾಹಿನಿ ಚಿತ್ರ


ಉದಯವಾಹಿನಿ ಚಿತ್ರ

ಫುಟ್‌ಪಾತ್‌ನಲ್ಲಿ ಮರಳು ವ್ಯಾಪಾರ ನಡೆಸುತ್ತಿರುವುದು ನಗರದ ಸೌಂದರ್ಯಕ್ಕೂ ಧಕ್ಕೆಯಾಗುತ್ತಿದೆ. ಫುಟ್‌ಪಾತ್ ವ್ಯಾಪಾರದಿಂದಾಗಿ ಸುಗಮ ಸಂಚಾರ, ಪಾರ್ಕಿಂಗ್ ಸಮಸ್ಯೆ, ರಸ್ತೆಯ ಅಲ್ಲಲ್ಲಿ ತ್ಯಾಜ್ಯಗಳೂ ಕಂಡು ಬರುತ್ತಿದೆ. ಜೊತೆಗೆ ಇಲ್ಲಿ ಓಡಾಡಲು ಪಾದಚಾರಿಗಳಿಗೂ ತೊಂದರೆಯಾಗುತ್ತಿದೆ.

ತಾಲ್ಲೂಕಿನಲ್ಲಿ ಮರಳು ಮಾರಾಟ ಎಂದರೆ ತರಕಾರಿ ಖರೀದಿ ಮಾಡಿದಂತಾಗಿದೆ. ಎಲ್ಲಿ ಬೇಕೆಂದರಲ್ಲಿ ಮರಳು ಮಾರಾಟ ಮಾಡಬಹುದು ಎನ್ನುವಂತಿದೆ ತಾಲ್ಲೂಕಿನ ವ್ಯವಸ್ಥೆ. ಇಂತಹ ಅವ್ಯವಸ್ಥೆ ಸಾಮಾನ್ಯ ಜನರಿಗೆ ಪೆಟ್ಟು ನೀಡುವುದರ ಜತೆಗೆ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಳಕ್ಕೂ ಕಾರಣವಾಗಿದೆ.

ಔರಾದ್ ಪಟ್ಟಣದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಹತ್ತಿರದ ಎಡ ಮತ್ತು ಬಲ ಭಾಗದಲ್ಲಿ ಫುಟ್ ಪಾತ್ ಗಳ ಮೇಲೆ ಜನರಿಗೆ ನಡೆದುಕೊಂಡು ಹೋಗಲು ಸ್ಥಳ ವಿರುವುದಿಲ್ಲ, ಬೀದಿಬದಿ ವ್ಯಾಪಾರಿಗಳು ಆಕ್ರಮಣ ಮಾಡಿಕೊಂಡು ಬಿಟ್ಟಿದ್ದಾರೆ ಎಂಬ ಕೂಗು ಸಾಕಷ್ಟು ಕೇಳಿಬರುತ್ತಿದೆ.

ವಸತಿ ಪ್ರದೇಶಗಳಲ್ಲಿ, ಫುಟ್‌ಪಾತ್‌ಗಳು ಜನರ ಓಡಾಡಕ್ಕೆ ಮಾತ್ರ ಬಳಕೆಯಾಗಬೇಕೆಂಬುದು ಕೇವಲ ಸರ್ಕಾರದ ನಿಯಮದಲ್ಲಿ ಮಾತ್ರವಿದೆ. ಬಹುಪಾಲು ಫುಟ್‌ಪಾತ್‌ಗಳು ವ್ಯಾಪಾರದ ಸ್ಥಳಗಳಾಗಿ ಕಾರುಗಳು, ದ್ವಿಚಕ್ರ ವಾಹನಗಳು ಮತ್ತು ಆಟೋಗಳಿಗೆ ಶಾಶ್ವತ ಪಾರ್ಕಿಂಗ್ ಸ್ಥಳಗಳಾಗಿ ಮಾರ್ಪಟ್ಟಿವೆ. ಫುಟ್‌ಪಾತ್‌ಗಳಲ್ಲಿ ವೃದ್ಧರು ಸೇರಿದಂತೆ ಅನಾರೋಗ್ಯ ಸಮಸ್ಯೆ ಇರುವವರಿಗೆ ನಡೆದುಕೊಂಡು ಸುಲಭವಾಗಿ ಹೋಗಲು ಯೋಗ್ಯವಾಗಿರಬೇಕು. ಇದಕ್ಕಾಗಿ, ಫುಟ್‌ಪಾತ್‌ಗಳು ಸಮತಟ್ಟಾಗಿರಬೇಕು, ಕಟ್ಟಡ ಸಾಮಗ್ರಿಗಳನ್ನು ಅವುಗಳ ಮೇಲೆ ರಾಶಿ ಮಾಡಬಾರದು ಮತ್ತು ವಾಹನಗಳನ್ನು ನಿಲ್ಲಿಸಬಾರದು ಎಂಬುದು ಸಾರ್ವಜನಿಕರ ಅಳಲು ತೋಡಿಕೊಂಡರು.

- ಫುಟ್‌ಪಾತ್ ವ್ಯಾಪಾರದಿಂದ ಪಾದಚಾರಿಗಳಿಗೆ ತೊಂದರೆ
- ಔರಾದ್ ಪಟ್ಟಣದ ಸೌಂದರಕ್ಕೆ ಧಕ್ಕೆ
- ಬೀದಿ ವ್ಯಾಪಾರಕ್ಕೆ ಬೇಕು ಅಚ್ಚುಕಟ್ಟಾದ ವ್ಯವಸ್ಥೆ
- ನಿಯಮ ಮೀರಿ ಎಲ್ಲೆಂದರಲ್ಲಿ ಮರಳು ಮಾರಾಟ

ವಾಣಿಜ್ಯ ಸಂಸ್ಥೆಗಳು ಫುಟ್ ಪಾತ್ ಗಳನ್ನು ಅತಿಕ್ರಮಿಸಿದರೆ, ತರಕಾರಿ ಮಾರಾಟಗಾರರು, ಪಾನಿ ಪುರಿ ಅಂಗಡಿಗಳು, ಇತರ ತಿನಿಸು ಕೇಂದ್ರಗಳು, ಪಾನ್ ಬೀಡಾ ಅಂಗಡಿಗಳು ಮತ್ತು ನಂದಿನಿ ಬೂತ್‌ಗಳು ಫುಟ್ ಪಾತ್ ಗಳನ್ನು ಅತಿಕ್ರಮಿಸಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲು ಮುಂದಾಗುತ್ತಿವೆ ಆದರೂ ಕಂಡು ಕಾಣದಂತೆ ಪೋಲಿಸ್ ಹಾಗೂ ಪುರಸಭೆ ಅಧಿಕಾರಿಗಳು ಸುಮ್ಮನೆ ಕುಳಿತಿರುವುದು ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಈ ದಾರಿಯಲ್ಲಿ ಸಂಚರಿಸುವ ಜನ ಇದನ್ನು ಪ್ರಶ್ನೆ ಮಾಡಿದರೆ ಅಂಗಡಿ ಮಾಲೀಕರು ಮಾತ್ರ ತಲೆ ಕೆಡಿಸಿಕೊಂಡಿಲ್ಲ. ಡೋಂಟ್ ಕೇರ್ ಅನ್ನೋ ರೀತಿ ವರ್ತಿಸುತ್ತಿದ್ದಾರೆ. ಇನ್ನೂ ಅಂಗಡಿ ಮಾಲೀಕ ಇಷ್ಟು ರಾಜಾರೋಷವಾಗಿ ಫುಟ್ ಪಾತ್ ಅನ್ನು ಅತಿಕ್ರಮಿಸಿಕೊಂಡಿದ್ದರು ಕೂಡ ಸ್ಥಳೀಯ ಪುರಸಭೆ ಅಧಿಕಾರಿಗಳು ಹಾಗೂ ಪೋಲಿಸ್ ಅಧಿಕಾರಿಗಳು ಇತ್ತ ತಿರುಗಿ ನೋಡದೆ ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ. ಬಸ್ ನಿಲ್ದಾಣ ಪ್ರದೇಶದಲ್ಲಿ ಸದಾ ಜನ ಮತ್ತು ವಾಹನ ದಟ್ಟಣೆಯಿರುತ್ತದೆ. ಹಲವು ಬಾರಿ ಬಸ್‌ಗಳು ನಿಲ್ದಾಣದ ಒಳ ಹೋಗಲು ಮತ್ತು ಹೊರಬರಲೂ ಆಗದಷ್ಟು ಸಮಸ್ಯೆಯಿದೆ. ತಾಲ್ಲೂಕು ಕೇಂದ್ರಗಳಲ್ಲಿ ದಟ್ಟಣೆ ಹೆಚ್ಚುತ್ತಿದೆ. ಆದರೆ, ಅದಕ್ಕೆ ತಕ್ಕಂತೆ ಪಟ್ಟಣದ ವ್ಯವಸ್ಥೆ ಅಭಿವೃದ್ಧಿಯಾಗುತ್ತಿಲ್ಲ' ಎಂದು ನಿವೃತ್ತ ಶಿಕ್ಷಕರೊಬ್ಬರು ಅಭಿಪ್ರಾಯಪಟ್ಟರು.

ಪಟ್ಟಣದ ಸೌಂದರೀಕರಣಕ್ಕೆ ಒತ್ತು ನೀಡಬೇಕಾದ ಪುರಸಭೆ ಅಧಿಕಾರಿಗಳು ಫುಟ್‌ಪಾತ್ ಆಕ್ರಮಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳದೆ ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ಪಾದಚಾರಿಗಳು ವಾಹನಗಳ ಮಧ್ಯೆ ರಸ್ತೆಯಲ್ಲಿ ತಿರುಗಾಡಬೇಕಾಗಿದೆ. ಶೀಘ್ರ ಅಧಿಕಾರಿಗಳು, ಸಂಬಂಧಿಸಿವರು ಇತ್ತ ಗಮನಹರಿಸಲಿ' ಎನ್ನುತ್ತಾರೆ ನಾಗರಿಕರು.

**ಗಣಿ ಮತ್ತು ಭೂವಿಜ್ಞಾನ ಇಲಾಖೆ ನಿಯಮಕ್ಕೆ ಕವಡೆಕಾಸಿನ ಕಿಮ್ಮತ್ತಿಲ್ಲ**

ಮರಳು ಖರೀದಿಗೆ ನೀಡುವ ಪರ್ಮಿಟ್ ಪ್ರಕಾರ, ಕಂಡಲ್ಲೆ ನಿಂತು ಮರಳು ಮಾರಾಟಕ್ಕೆ ಅವಕಾಶವೇ ಇಲ್ಲ. ಆದರೆ, ತಾಲ್ಲೂಕಿನಲ್ಲಿ ಈ ನಿಯಮಕ್ಕೆ ಕವಡೆಕಾಸಿನ ಕಿಮ್ಮತ್ತೂ ಸಿಗುತ್ತಿಲ್ಲ. ರಸ್ತೆ ಬದಿ ಕುಳಿತು ತರಕಾರಿ ಮಾರಾಟ ಮಾಡುವ ಮಾದರಿಯಲ್ಲಿಯೇ ಜಿಲ್ಲೆಯಲ್ಲಿ ಮರಳು ಮಾರಾಟ ನಡೆಯುತ್ತಿದೆ. ಅದರಲ್ಲೂ ಔರಾದ್ ನಗರದಲ್ಲಿ ಮರಳು ಮಾರಾಟ ವ್ಯವಸ್ಥೆಗೆ ಚೌಕಟ್ಟೇ ಇಲ್ಲದ ಕಾರಣದಿಂದ 'ಕಂಡಲ್ಲೆ ಮರಳು ಮಾರಾಟ' ಎನ್ನುವಂತಾಗಿದೆ.

> ಫುಟ್‌ಪಾತ್‌ನಲ್ಲಿ ವ್ಯಾಪಾರದಿಂದ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗುತ್ತಿದೆ. ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆ ಹತ್ತಿರದ ಮರಳು ವ್ಯಾಪಾರ ಅಂಗಡಿಗಳು ರಾಜಾರೋಷವಾಗಿ ಮರಳು ವ್ಯಾಪಾರ ಮಾಡುತ್ತಿದ್ದು ಅಧಿಕಾರಿಗಳು ಜಾಣ ಕುರುಡರಂತೆ ವರ್ತಿಸುತ್ತಿದ್ದಾರೆ ಶಿಘ್ರವೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಪರುಸಭೆ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು. -ಸುಭಾಷ ಲಾಧ,
> ದಲಿತ ಸಂಘರ್ಷ ಸಮಿತಿ ತಾಲ್ಲೂಕ ಸಂಚಾಲಕ

## ಕಾಳಗಿಯಲ್ಲಿ ಗ್ಯಾಸ್ ಟ್ರಬಲ್ : ಬಡಜನರ ಪರದಾಟ

• ಉದಯವಾಹಿನಿ ಕಾಳಗಿ



ಉದಯವಾಹಿನಿ ಚಿತ್ರ

ಪಟ್ಟಣ ಹಾಗೂ ತಾಲೂಕು ವ್ಯಾಪ್ತಿಯಲ್ಲಿ ಅಡುಗೆ ಅನಿಲದ ಕೊರತೆ ತೀವ್ರವಾಗಿದ್ದು, ವಿಶೇಷವಾಗಿ ಬಡ ಹಾಗೂ ಮಧ್ಯಮ ವರ್ಗದ ಜನರು ಭಾರೀ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಳೆದ ಕೆಲವು ದಿನಗಳಿಂದ ಗ್ಯಾಸ್ ಸಿಲಿಂಡರ್‌ಗಳ ಸರಬರಾಜು ಸಮರ್ಪಕವಾಗಿಲ್ಲದ ಕಾರಣ ಮನೆ-ಮನೆಗಳಲ್ಲಿ ಅಡುಗೆ ಕಾರ್ಯವೇ ಕುಂಠಿತವಾಗುತ್ತಿದೆ.

ಸ್ಥಳೀಯ ಗ್ಯಾಸ್ ಏಜೆನ್ಸಿಗಳಲ್ಲಿ ಸಿಲಿಂಡರ್‌ಗಾಗಿ ಜನರು ಬೆಳಗ್ಗೆಯಿಂದಲೇ ಸಾಲಿನಲ್ಲಿ ನಿಂತು ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವಾರು ದಿನಗಳಾದರೂ ಸಿಲಿಂಡರ್ ದೊರೆಯದೇ ಜನರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.ವಿಶೇಷವಾಗಿ ದಿನಗೂಲಿ ಕಾರ್ಮಿಕರು, ಬಡ ಕುಟುಂಬಗಳು ಮರದ ಕಟ್ಟಿಗೆ ಮೊರೆ ಹೋಗುವಂತಾಗಿದೆ.

ಇದರಿಂದ ಮಹಿಳೆಯರು ಹಾಗೂ ವೃದ್ಧರು ಹೆಚ್ಚಿನ ತೊಂದರೆ ಅನುಭವಿಸುತ್ತಿದ್ದು, ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಕಲಬುರಗಿ ಜಿಲ್ಲಾಡಳಿತ ಅಡುಗೆ ಅನಿಲ ಸಮಸ್ಯೆ ಇಲ್ಲ ಎಂದು ಹೆಳುತ್ತದೆ.

ಕಾಳಗಿ ಪಟ್ಟಣದ ಎಚ್.ಪಿ ಗ್ಯಾಸ್ ಕೇಂದ್ರದ ಹತ್ತಿರ ಬಂದು ನೋಡಿದರೆ ಗೊತ್ತಾಗುತ್ತದೆ ಗ್ಯಾಸ್ ಟ್ರಬಲ್ ಎಷ್ಟೆಂದು. ಮನೆ-ಮನೆಗಳಿಗೆ ಎಚ್.ಪಿ.ಗ್ಯಾಸ್ ವಿತರಣೆ ಮಾಡುವ ವ್ಯಕ್ತಿಗಳು ಬಡವರ ಗ್ಯಾಸ್ ಪುಸ್ತಕಗಳನ್ನು ತಮ್ಮ ಹತ್ತಿರವೇ ಇಟ್ಟುಕೊಂಡು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ.

ಶ್ರೀಮಂತ ವರ್ಗಗಳಿಗೆ ಗ್ಯಾಸ್ ಸರಳವಾಗಿ ಸಪ್ಲೈ ಆಗುತ್ತದೆ ಆದರೇ ಬಡವರಿಗೆ ಓಟಿಪಿ ಹೇಳಿ, ಇಕೆವೈಸಿ ಮಾಡಿಸಿ, ಫೋನ್ ಚೈಂಚ್ ಮಾಡಿಕೊಳ್ಳಿ, ಕಸ್ಟಮರ್ ಕಾಲ್ ಸೆಂಟರ್ ಗೆ ಕರೆ ಮಾಡಿ ಎಂಬ ಸಬೂಬುಗಳನ್ನು ಹೆಳುತ್ತಾ ಕಾಲ ಕಳೆಯುತ್ತಿರುವುದರಿಂದ ಬಡಜನ ಸೌದೆ ಮೊರೆಹೋಗಿ ಪರಿಸ್ಥಿತಿ ನಿರ್ಮಾಣವಾಗಿದೆ.

ಗ್ಯಾಸ್ ತುಟ್ಟಿಯಾಗಿದೆ ಎಂದು ಹೇಳುತ್ತಾರೆ, ಜಾಸ್ತಿ ಹಣ ಕೊಟ್ಟರೆ ಗ್ಯಾಸ್ ಹೆಗೆ ಸಿಗುತ್ತಿದೆ ಎಂಬುವುದೆ ತಿಳಿಯುತ್ತಿಲ್ಲ. ಎಂದು ಸಾರ್ವಜನಿಕರು ಗ್ಯಾಸ್ ಮಾಲಿಕರಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಗ್ಯಾಸ್ ಸರಬರಾಜು ವ್ಯವಸ್ಥೆಯಲ್ಲಿ ಸುಧಾರಣೆ ಮಾಡದೇ ಇದ್ದರೆ ಸಮಸ್ಯೆ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಸಮರ್ಪಕ ಪ್ರಮಾಣದಲ್ಲಿ ಅಡುಗೆ ಅನಿಲವನ್ನು ಪೂರೈಸುವಂತೆ ಕ್ರಮ ಕೈಗೊಳ್ಳಬೇಕು ಇಲ್ಲವಾದರೆ ಹೋರಾಟ ಹಾದಿ ಹಿಡಿಯಬೇಕಾಗುತ್ತದೆ ಎಂದು ಸಾರ್ವಜನಿಕರು ಎಚ್ಚರಿಸಿದ್ದಾರೆ.

## ಮಹಿಳಾ ಮೀಸಲಾತಿ ವಿರೋಧಿಸಿದ ಕಾಂಗ್ರೇಸ್ ವಿರುದ್ಧ ಜೆಡಿಎಸ್ ಪ್ರತಿಭಟನೆ


• ಉದಯವಾಹಿನಿ ಬಳ್ಳಾರಿ


ಉದಯವಾಹಿನಿ ಚಿತ್ರ

ಕೇಂದ್ರ ಸರ್ಕಾರ ಸಂಸತ್ ಮತ್ತು ಶಾಸನ ಸಭೆಗಳಲ್ಲಿ ಜಾರಿಗೆ ತರಲು ಮುಂದಾದ ಶೇ 33 ರಷ್ಟು ಮಹಿಳಾ ಮೀಸಲಾತಿಯ ಮಸೂದೆ ವಿರೋಧಿಸಿದ ಕಾಂಗ್ರೆಸ್ ವಿರುದ್ಧ ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿ ನಗರದಲ್ಲಿ ಇಂದು ಪ್ರತಿಭಟನೆ ನಡೆಸಿತು.

ಪಕ್ಷದ ಜಿಲ್ಲಾ ಅಧ್ಯಕ್ಷ ಮೀನಳ್ಳಿ ತಾಯಣ್ಣ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಪಕ್ಷದ ಕಚೇರಿಯಿಂದ ಗಡಿಗಿ ಚೆನ್ನಪ್ಪ ಸರ್ಕಲ್ ಗೆ ಬಂದು ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿದರು. ಮಹಿಳೆಯರಿಗೆ ಶೇ. 33 ರಷ್ಟು ರಾಜಕೀಯ ಮೀಸಲಾತಿ ನೀಡುವ ಮಸೂದೆ ತಿದ್ದುಪಡಿಗೆ ವಿರೋಧ ವ್ಯಕ್ತಪಡಿಸುವ ಮೂಲಕ ಕಾಂಗ್ರೆಸ್ ಮಹಿಳಾ ವಿರೋಧಿ ಧೋರಣೆ ತೋರಿದೆ ಎಂದು ಆರೋಪಿಸಿದರು. ಈ ವೇಳೆ ಮಾತನಾಡಿದ ಜೆಡಿಎಸ್ ಮುಖಂಡರು, ಮಹಿಳೆಯರ ರಾಜಕೀಯ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಜೆಡಿಎಸ್ ಮಹಿಳಾ ಘಟಕದ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

ಶಿವಮೊಗ್ಗದ ಬಿಬಿ ರಸ್ತೆ ಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಡೆದ 121ನೇ ವರ್ಷದ ಅದ್ದೂರಿ ಶ್ರೀ ಶಂಕರ ಜಯಂತೋತ್ಸವ ಕಾರ್ಯಕ್ರಮದಲ್ಲಿ ಕಲಿಯುಗದ ಶ್ರವಣಕುಮಾರ ಕೃಷ್ಣಕುಮಾರ್ ಹಾಗೂ ಮಾತೃಶ್ರೀಯವರನ್ನು ದೇವಸ್ಥಾನದ ಆಡಳಿತ ಮಂಡಳಿ, ಶ್ರೀ ಶಂಕರ ಜಯಂತಿ ಸಭಾ (ರಿ)ಹಾಗೂ ಹಲವು ಸಂಘಟನೆಗಳ ಪರವಾಗಿ ಅಭಿನಂದಿಸಲಾಯಿತು.

## ಸಿಇಒ ಹೆಸರಲ್ಲಿ ವಂಚನೆಗೆ ಯತ್ನ: ದೂರು ದಾಖಲು

• ಉದಯವಾಹಿನಿ ಶಿವಮೊಗ್ಗ

ಇಲ್ಲಿನ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಎನ್.ಹೇಮಂತ್ ಅವರ ಹೆಸರು ಮತ್ತು ಭಾವಚಿತ್ರ ಬಳಸಿಕೊಂಡು ಸೈಬರ್ ವಂಚಕರು ನಕಲಿ ವಾಟ್ಸ್ ಆ?ಯಪ್ ಖಾತೆ ಸೃಷ್ಟಿಸಿದ್ದಾರೆ. ಈ ಸಂಬಂಧ ಐಎಎಸ್ ಅಧಿಕಾರಿಯೂ ಆದ ಹೇಮಂತ್ ನಗರದ ಸಿಇಎನ್ (ಸೈಬರ್, ಆರ್ಥಿಕ ಮತ್ತು ಮಾದಕವಸ್ತು ಅಪರಾಧಗಳ) ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಂಚಕರು ವಿದೇಶದಲ್ಲಿ ನೋಂದಣಿಯಾದ ಮೊಬೈಲ್ ಸಂಖ್ಯೆ ಬಳಸಿಕೊಂಡು ನಕಲಿ ವಾಟ್ಸ್ ಆ?ಯಪ್ ಖಾತೆ ತೆರೆದಿದ್ದಾರೆ. ಅದಕ್ಕೆ ಸಿಇಒ ಅವರ ಭಾವಚಿತ್ರವನ್ನು ಡಿಪಿ ಆಗಿ ಬಳಸಿದ್ದು, ಈ ನಕಲಿ ಖಾತೆಯ ಮೂಲಕ ವಿವಿಧ ಅಧಿಕಾರಿಗಳಿಗೆ ಸಂದೇಶಗಳ ಕಳುಹಿಸಿ ವಂಚಿಸಲು ಯತ್ನಿಸಿದ್ದಾರೆ. ಅದು ಗಮನಕ್ಕೆ ಬರುತ್ತಿದ್ದಂತೆಯೇ ಹೇಮಂತ್ ಪೊಲೀಸರಿಗೆ ದೂರು ನೀಡಿದ್ದಾರೆ ಎಂದು ತಿಳಿದು ಬಂದಿದೆ.

## ದಾರ್ಶನಿಕರ ಹೆಸರಲ್ಲೇ ಜಾತಿ ಸೃಷ್ಟಿ

• ಉದಯವಾಹಿನಿ ಕುಂದಾಪುರ

ಜಾತ್ಯತೀತ ಸಮಾಜ ಕಟ್ಟಲು ಮುಂದಾದ ದಾರ್ಶನಿಕರ ಹೆಸರಲ್ಲೇ ಜಾತಿ ಸೃಷ್ಟಿಯಾಗುತ್ತಿರುವುದು ವ್ಯವಸ್ಥೆಯ ದುರಂತ' ಎಂದು ಮುಖಂಡ ಕೆ. ಜಯಪ್ರಕಾಶ್ ಹೆಗ್ಡೆ ಹೇಳಿದರು. ಜಿಲ್ಲಾ ಹಾಗೂ ತಾಲ್ಲೂಕು ಮುಸ್ಲಿಂ ಒಕ್ಕೂಟದ ಆಶ್ರಯದಲ್ಲಿ ಹಂಗಳೂರಿನಲ್ಲಿ ಆಯೋಜಿಸಿದ್ದ ಈದ್ ಸೌಹಾರ್ದ ಸಮ್ಮಿಲನದಲ್ಲಿ ಅವರು ಮಾತನಾಡಿದರು. ಸಾಮಾಜಿಕ ಮಾಧ್ಯಮಗಳ ದುರ್ಬಳಕೆಗೆ ಪ್ರಚೋದನೆ ತೋರಿದವರಿಗೆ ಅದೇ ತಿರುಗುಬಾಣವಾಗುತ್ತಿದೆ. ಕಷ್ಟದಲ್ಲಿ ಇದ್ದವರಿಗೆ ನೆರವಾಗುವುದೇ ದೊಡ್ಡ ಧರ್ಮ ಕಾರ್ಯ. ದೇಹ ಅಂಗಾಂಗ ದಾನದ ಚಿಂತನೆಗಳು ಹೆಚ್ಚಾಗಬೇಕು' ಎಂದರು. ಕಾರ್ಯಕ್ರಮ ಉದ್ಘಾಟಿಸಿದ ಸಹಬಾಳ್ವೆ ಸಂಘಟನೆಯ ಜಿಲ್ಲಾ ಅಧ್ಯಕ್ಷ ಪ್ರೊ. ಫಣಿರಾಜ್, 'ಎಲ್ಲಾ ಜಾತಿ ಮತಗಳಲ್ಲಿ ಒಳ್ಳೆಯವರು-ಕೆಟ್ಟವರು ಇರುತ್ತಾರೆ. ಸಮಾಜವನ್ನು ಕಟ್ಟುವ ಸೌಹಾರ್ದ ಕಾರ್ಯದಲ್ಲಿ ಎಲ್ಲರೂ ಜೊತೆಯಾಗಬೇಕು' ಎಂದರು. ಚಿಂತಕ, ಸಾಮಾಜಿಕ ಕಾರ್ಯಕರ್ತ ಅಕ್ಟರ್ ಅಲಿ ಉಡುಪಿ ಮಾತನಾಡಿ, ಕುರಾನ್, ಧರ್ಮ, ಪ್ರವಾದಿ ಒಂದು ಸಮುದಾಯಕ್ಕೆ ಸೀಮಿತವಲ್ಲ. ದೇವರನ್ನು ಭಕ್ತರನ್ನು ಜೋಡಿಸುವ ಕೆಲಸವನ್ನು ಧರ್ಮಗ್ರಂಥಗಳು ಮಾಡುತ್ತವೆ. ಯಾವುದೇ ಧರ್ಮ ಸಂಘರ್ಷ, ಒಡೆಯುವುದನ್ನು ಕಲಿಸುವುದಿಲ್ಲ. ಎಂದು ಹೇಳಿದರು.

## ಇಂದಿನ ಕೇಡುಗಾಲಕ್ಕೆ ಸಹಬಾಳ್ವೆ ಶಾಂತಿಯ ಅಗತ್ಯ

• ಉದಯವಾಹಿನಿ ಬಳ್ಳಾರಿ


ಉದಯವಾಹಿನಿ ಚಿತ್ರ

ಪರಸ್ಪರ ಸ್ನೇಹ, ಸಹಬಾಳ್ವೆ, ಸೌಜನ್ಯ ಸೌಹಾರ್ದತೆ, ಶಾಂತಿಯಿಂದ ನಾವೆಲ್ಲರೂ ಬದುಕಿ ಭಾರತದ ನೆಲದಲ್ಲಿ ಬಹುತ್ವವನ್ನು ಎತ್ತಿ ಹಿಡಿಯಬೇಕಾದ ಅಗತ್ಯ ಇಂದಿನ ಕೇಡುಗಾಲಕ್ಕಿದೆ ಎಂದು ಪ್ರಾಧ್ಯಾಪಕ ದಸ್ತಗೀರಸಾಬ್ ದಿನ್ನಿ ಅಭಿಪ್ರಾಯಪಟ್ಟರು.

ತಾಲೂಕಿನ ದಮ್ಮೂರು ಗ್ರಾಮದ ವೆಂಕಾವಧೂತ ಮಠದಲ್ಲಿ ಸರಳಾದೇವಿ ಸರಕಾರಿ ಪ್ರಥಮ ದರ್ಜೆ (ಸ್ವಾಯತ್ತ ) ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ವತಿಯಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರದಲ್ಲಿ 'ಹೊಸ ತಲೆಮಾರು ಮತ್ತು ಸೌಹಾರ್ದತೆ' ವಿಷಯದ ಕುರಿತು ಮಾತನಾಡಿದರು. ನಮ್ಮ ಸುತ್ತಲಿನ ಸಮಾಜದಲ್ಲಿ ಮೋಸ, ವಂಚನೆ, ಶೋಷಣೆ, ಅತ್ಯಾಚಾರ, ದೌರ್ಜನ್ಯ, ಮರ್ಯಾದೆಗೇಡು ಹತ್ಯೆ ,ಜಾತಿ ತಾರತಮ್ಯ ಕೃತ್ಯಗಳು ಢಾಳಾಗಿ ಗೋಚರಿಸುತ್ತಿವೆ. ಇವುಗಳ ಸಂಕಟದ ಮಗ್ಗಲು ಕಲಕಬೇಕಿದೆ. ಹೊಸ ತಲೆಮಾರು ಗಂಭೀರವಾಗಿ ಆಲೋಚಿಸಿ, ಮಾನವ ಸಂಬಂಧಗಳನ್ನು ಗಟ್ಟಿಗೊಳಿಸಿ ನವ ಸಮಾಜಕ್ಕೆ ಕೈಜೋಡಿಸಬೇಕಿದೆ ಎಂದು ವಿಶ್ಲೇಷಿಸಿದರು. ಸಹಾಯಕ ಪ್ರಾಧ್ಯಾಪಕ ದೊಡ್ಡ ಬಸವರಾಜ್ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿರುವ ವರ್ತಮಾನಕ್ಕೆ ಸೌಹಾರ್ದತ ಮೌಲ್ಯಗಳು ಬದುಕಿನ ಗುರಿಯಾಗಲಿ ಎಂದು ಆಶಿಸಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕಾರ್ಯಕ್ರಮಾಧಿಕಾರಿ ಕೆ. ಬಸಪ್ಪ ಸಕರಾತ್ಮಕ ಮಾನವ ಮೌಲ್ಯಗಳು ಮತ್ತು ನೈತಿಕ ತತ್ವಗಳನ್ನು ಬೆಳೆಸಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನಾ ಘಟಕವು ಸಹಕಾರಿಯಾಗಲಿದೆ. ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಸಾಹಿತ್ಯವು ಸೌಹಾರ್ದತೆಯ ವಿಚಾರಗಳನ್ನೇ ಪ್ರಧಾನ ಆಶಯವಾಗಿಸಿಕೊಂಡಿದೆ ಎಂದರು.

## ಮಹಿಳೆಯರಲ್ಲಿ ಉದ್ಯೋಗಶೀಲತೆ ಹೆಚ್ಚಿಸಲು 'ದಿಶಾ' ಕಾರ್ಯಕ್ರಮ

• ಉದಯವಾಹಿನಿ ಕಲಬುರಗಿ


ಉದಯವಾಹಿನಿ ಚಿತ್ರ

ಗೋದ್ರೇಜ್ ಅಗ್ರೊವೆಟ್ ಲಿಮಿಟೆಡ್ (ಗೋದ್ರೇಜ್ ಅಗ್ರೊವೆಟ್), ತನ್ನ ಕೃಷಿಯಲ್ಲಿ ಮಹಿಳೆಯರು ಶೃಂಗಸಭೆಯ ಮೂರನೇ ಆವೃತ್ತಿಯಲ್ಲಿ ಮಹಿಳಾ ವೃತ್ತಿ ವೇಗವರ್ಧಕ ಕಾರ್ಯಕ್ರಮವಾಗಿರುವ ದಿಶಾ' ಆರಂಭಿಸಿರುವುದಾಗಿ ಪ್ರಕಟಿಸಿದೆ. ಗೋದ್ರೇಜ್ ಅಗ್ರೊವೆಟ್ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಉಪಕ್ರಮವಾಗಿರುವದಿಶಾ' ಕಾರ್ಯಕ್ರಮವನ್ನು ಬಿ.ಎಸ್‌ಸಿ ಕೃಷಿ ಮತ್ತು ಸಂಬಂಧಿತ ವಿಷಯಗಳಲ್ಲಿ ಕಲಿಯುವ ವಿದ್ಯಾರ್ಥಿನಿಯರಲ್ಲಿ ಉದ್ಯೋಗಶೀಲತೆ ಬಲಪಡಿಸಲು ನೆರವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಇದು ಮಾರಾಟ, ಸಂವಹನ ಮತ್ತು ವೃತ್ತಿಪರ ಸಿದ್ಧತೆಯಲ್ಲಿ ಉದ್ಯಮ-ಸಂಬಂಧಿತ ಕೌಶಲಗಳನ್ನು ಬೆಳೆಸುವುದಕ್ಕೆ ಗಮನ ಕೇಂದ್ರೀಕರಿಸಿ ವಿದ್ಯಾರ್ಥಿನಿಯರು ವೃತ್ತಿ ಬದುಕಿಗೆ ಸುಗಮವಾಗಿ ಪರಿವರ್ತನೆಗೊಳ್ಳುವುದನ್ನು ಕಾರ್ಯಗತಗೊಳಿಸಲಿದೆ.

1ಎಂ1ಬಿ ಫೌಂಡೇಷನ್ ಮತ್ತು ಇಕ್ಕಾ ಲರ್ನಿಂಗ್ ಫೌಂಡೇಷನ್‌ನ ಸಹಭಾಗಿತ್ವದಲ್ಲಿ ಜಾರಿಗೆ ತರಲಾಗಿರುವ ಈ ಕಾರ್ಯಕ್ರಮವು ಈಗಾಗಲೇ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಾದ್ಯಂತ 276ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ನೆರವಾಗಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅನೇಕರು ಪ್ರಮುಖ ಸಂಸ್ಥೆಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ದಿಶಾ' ಕಾರ್ಯಕ್ರಮದ ಬಗ್ಗೆ ಪ್ರತಿಕ್ರಿಯಿಸಿರುವ ಗೋದ್ರೇಜ್ ಅಗ್ರೊವೆಟ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸುನಿಲ್ ಕಟಾರಿಯಾ,ಭಾರತದ ಕೃಷಿ ಮತ್ತು ಸಂಬಂಧಿತ ವಲಯಗಳು ಸುಸ್ಥಿರ ಬೆಳವಣಿಗೆ, ಉತ್ಪಾದಕತೆ ಮತ್ತು ಗ್ರಾಮೀಣ ಸಮೃದ್ಧಿ ಹೆಚ್ಚಿಸುವ ಮಹತ್ವಾಕಾಂಕ್ಷೆಗಳೊಂದಿಗೆ ಬದಲಾವಣೆಯ ಹಂತದಲ್ಲಿವೆ. ಈ ಅವಕಾಶಗಳ ಸದ್ಬಳಕೆ ಮಾಡಿಕೊಳ್ಳಲು ಉದ್ಯಮಗಳಲ್ಲಿ ದುಡಿಯಲು ಅಗತ್ಯವಾದ ಕೌಶಲಗಳೊಂದಿಗೆ ಸನ್ನದ್ಧವಾಗಿರುವ ಪ್ರತಿಭೆಗಳನ್ನು ಪೊ?ಷಿಸುವುದು ಮಹತ್ವದ್ದಾಗಿದೆ.

## ಕಾನೂನು ವಿದ್ಯಾರ್ಥಿಗಳು ನ್ಯಾಯ ಸ್ಥಾಪನೆಗೆ ಪ್ರೇರಕರಾಗಿ: ನ್ಯಾ. ಎಚ್.ಪಿ.ಸಂದೇಶ್

• ಉದಯವಾಹಿನಿ ಮೂಡುಬಿದಿರೆ



ಉದಯವಾಹಿನಿ ಚಿತ್ರ

ಕಾನೂನು ವಿದ್ಯಾರ್ಥಿಗಳು ಸಮಾಜದಲ್ಲಿ ನ್ಯಾಯ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಬೇಕು ಎಂದು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಚ್. ಪಿ. ಸಂದೇಶ್ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ಆಳ್ವಾಸ್‌ನ ಕೃಷಿಸಿರಿ ವೇದಿಕೆಯಲ್ಲಿ ಆಯೋಜಿಸಿದ್ದ ಸಾಮಾಜಿಕ ನ್ಯಾಯಕ್ಕಾಗಿ ಕಾನೂನು ವಿದ್ಯಾರ್ಥಿಗಳು ವಿಷಯದ ಕುರಿತಾದ ದ್ವಿತೀಯ ವಲಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಜಯಕರ ಶೆಟ್ಟಿ ಎಂ ಮಾತನಾಡಿ, ಬದುಕನ್ನು ಸಮರ್ಪಕವಾಗಿ ಸಾಗಿಸಲು ಕಾನೂನಿನ ಜ್ಞಾನ ಅತ್ಯಗತ್ಯ. ಹೀಗಾಗಿ, ಕಾನೂನು ಓದುವುದನ್ನು ಕೇವಲ ವೃತ್ತಿಯಾಗಿ ಪರಿಗಣಿಸದೆ, ಜೀವನಜ್ಞಾನದ ಭಾಗವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾನೂನು ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸೈನಿಕರಂತೆ ಕಾರ್ಯನಿರ್ವಹಿಸಬೇಕು. ಕೇವಲ ಪಾಠ್ಯ ಜ್ಞಾನವಷ್ಟೇ ಅಲ್ಲದೆ, ಇತಿಹಾಸದ ಅರಿವು, ವಿಮರ್ಶಾತ್ಮಕ ಚಿಂತನೆ ಹಾಗೂ ವಿಷಯಗಳ ಆಳವಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕು ಎಂದರು. ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಡಾ. ಸಿ. ಬಸವರಾಜು, ಮಧುಕರ್ ಪಿ. ಭಾಗವತ್, ಪ್ರಾಚಾರ್ಯ ಡಾ. ಮಹಾಂತೇಶ್ ಜಿ. ಎಸ್.ಇದ್ದರು.

# ಯುವಜನರಲ್ಲಿ ಶ್ರಮಸಂಸ್ಕೃತಿ ಅಭಿವದ್ಧಿಪಡಿಸಬೇಕಾದ ಅನಿವಾರ್ಯತೆ ಇದೆ

### ಜಗತ್ತಿನ ಬಹುತೇಕ ರಾಷ್ಟ್ರಗಳು ಅನುಭವ ಮಂಟಪದ ಮಾದರಿಯ ಪ್ರಜಾಪ್ರಭುತ್ವ ಕಲ್ಪನೆಯನ್ನು ಅನುಸರಿಸುತ್ತಿವೆ:ಖಂಡ್ರೆ

• ಉದಯವಾಹಿನಿ ಬೀದರ್


ಉದಯವಾಹಿನಿ ಚಿತ್ರ

ಯುವಜನರು ಇಂದು ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ಸಾಮಾಜಿಕ ಮಾಧ್ಯಮಗಳಲ್ಲಿ ಹಾಗೂ ದುಶ್ಚಟಗಳಲ್ಲಿ ಹೆಚ್ಚು ಶ್ರಮ ಹಾಕುತ್ತಿದ್ದು, ಇದರಿಂದ ಭಾರತೀಯ ಸಂಸ್ಕೃತಿ ವಿನಾಶದ ಅಂಚಿಗೆ ತಳ್ಳಲ್ಪಡುತ್ತಿದ್ದು, ಯುವಕರಲ್ಲಿ ಅಣ್ಣ ಬಸವಣ್ಣನವರ ಕಾಯಕ ಸಂಸ್ಕೃತಿ ಅಭಿವೃದ್ಧಿಪಡಿಸಬೇಕಾದ ಅನಿವಾರ್ಯತೆ ಇದೆ ಎಂದು ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ ಖಂಡ್ರೆ ತಿಳಿಸಿದರು.

ನಗರದ ಬಸವೇಶ್ವರ ವೃತ್ತದಲ್ಲಿ ಬಸವ ಜಯಂತಿ ಉತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಭವ್ಯ ಮೆರವಣಿಗೆ ಹಾಗೂ ಬಚನ ಸಾಹಿತ್ಯದ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿರುವ ಅವರು, ಇಂದು ಜಗತ್ತಿನಲ್ಲಿ ಯುದ್ದ, ಕೊಲೆ, ಸುಲಿಗೆ, ಅತ್ಯಾಚಾರ, ಶೋಷಣೆ, ದಬ್ಬಾಳಿಕೆ, ಅಂಧಾಚಾರ, ಭ್ರಷ್ಟಾಚಾರ ತಾಂಡವಾಡುತ್ತಿದ್ದು, ಇಂತಹ ಸಂದರ್ಭದಲ್ಲಿ ಜಾಗತಿಕ ವಾತಾವರಣ ತಿಳಿಗೊಳಿಸಲು ವಿಶ್ವಗುರು ಬಸವಣ್ಣನವರ ತತ್ವಗಳು ಅನಿವಾರ್ಯವಾಗಿದ್ದು, ಈ ಕಾರ್ಯ ಬಸವಣ್ಣನವರ ಕರ್ಮಭುಮಿ ಬಸವಕಲ್ಯಾಣದಿಂದಲೇ ಆರಂಭವಾಗಿದೆ. ಜಗತ್ತಿನ ಬಹುತೇಕ ರಾಷ್ಟ್ರಗಳು ಅನುಭವ ಮಂಟಪದ ಮಾದರಿಯ ಪ್ರಜಾಪ್ರಭುತ್ವ ಕಲ್ಪನೆಯನ್ನು ಅನುಸರಿಸುತ್ತಿವೆ. ಇದನ್ನು ಇನ್ನಷ್ಟು ಪರಿಣಾಮಕಾರಿ ರೀತಿಯಲ್ಲಿ ಪ್ರಚಾರ ಹಾಗೂ ಪ್ರಸಾರ ಮಾಡುವ ಅನಿವಾರ್ಯತೆ ಎಂದು ಹೇಳಿದರು.

> ಅಪ್ಪ ಬಸವಣ್ಣನವರು ಇಷ್ಟಲಿಂಗ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸಿದ್ದರ ಪರಿಣಾಮ ಇಂದು ಜಾಗತಿಕ ವಾತಾವರಣ ಲಿಂಗಮಯವಾಗಲು ಸಾಧ್ಯವಾಗುತ್ತಿದೆ. ಮುಂದಿನ ವರ್ಷ ಅನುಭವ ಮಂಟಪ ಉದ್ಘಾಟನೆ ಸಂಸರ್ಭದಲ್ಲಿ ಕನಿಷ್ಟ 21 ಸಾವಿರ ಶರಣ, ಶರಣೆಯರು ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡುವ ಮೂಲಕ ಹೊಸ ಇತಿಹಾಸ ನಿರ್ಮಿಸಬೇಕಿದೆ.
> -ರಾಜೇಶ್ವರ ಶಿವಾಚಾರ್ಯರು

ಬಸವಕಲ್ಯಾಧಲ್ಲಿ ನೂತನ ಅನುಭವ ಮಂಟಪದ ಕಾಮಗಾರಿ ವೇಗದಿಂದ ನಡೆಯುತ್ತಿದ್ದು, ಮುಂದಿನ ವರ್ಷ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆಗೊಳ್ಳಲಿದೆ. ಒಟ್ಟಿನಲ್ಲಿ ಬಸವಣ್ಣನವರ ಆಚಾರ, ವಿಚಾರಗಳು ಯುವಜನರ ಮನ ಮುಟ್ಟುವಂತಾಗಬೇಕಿದೆ ಎಂದು ಅಭಿಪ್ರಾಯ ಪಟ್ಟರು. ತಡೋಳಾ, ಮೇಹಕರ ಹಾಗೂ ಡೋಣಗಾಪುರ ಶ್ರೀಮಠಗಳ ಪೂಜ್ಯ, ರಾಜೇಶ್ವರ ಶಿವಾಚಾರ್ಯರು ಮಾತನಾಡಿ, ಜಗಜ್ಯೋತಿ ಬಸವಣ್ಣನವರು ಜೀವನ ಸಂಸ್ಕೃತಿ ಹಾಗೂ ಕಾಯಕ ಮತ್ತು ದಾಸೋಹದ ಸಂಸ್ಕೃತಿ ಪ್ರತಿಪಾದಿಸಿದರು. ಒಂದು ಲಕ್ಷದ ತೊಂಬತ್ತಾರು ಸಾವಿರ ಜಂಗಮರಿಗೆ ನಿತ್ಯ ದಾಸೋಹಗೈದು ದಾನ, ಧರ್ಮದ ದಾರಿ ತೋರಿದರು. ಇದೆ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಮ ಪ್ರಭುದೇವರ ವಚನವಾದ ಶಿವ ಗುರುವೆಂದು ಬಲ್ಲಾತನೆ ಗುರು ಎಂಬ ವಚನ ಪಠಣ ಮಾಡಿದರು. ಪೌರಾಡಳಿತ ಹಾಗೂ ಹಜ್ ಸಚಿವ ರಹಿಮ್ ಖಾನ್, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿ.ಪಂ ಸಿಇಒ ಗಿರೀಶ ಬದೋಲೆ, ಎಸ್.ಪಿ ಪ್ರದೀಪ ಗುಂಟಿ, ಬಸವ ಸೇವಾ ಪ್ರತಿ?ಾ?ಟನದ ಪೂಜ್ಯ ಡಾ.ಅಕ್ಕ ಗಂಗಾಂಬಿಕೆ, ಪ್ರಭುದೇವರು, ಬಸವ ಜಯಂತಿ ಮೆರವಣಿಗೆಯಲ್ಲಿ ಭಾಗವಹಿಸಿದರು.

**ಬಸವ ಜಯಂತಿ ಉತ್ಸವ**

> ಬಸವಣ್ಣನವರು ಬರೀ ಲಿಂಗಾಯತರ ಸ್ವತ್ತಲ್ಲ. ಎಲ್ಲ ಸಮಾಜದ ಉದ್ದಾರಕ. ಹಾಗಾಗಿ ನಾವೆಲ್ಲರು ಸೇರಿ ಬಸವ ಜಯಂತಿಯನ್ನು ಸಾಮೂಹಿಕವಾಗಿ ಆಚರಿಸುತ್ತಲಿದ್ದೇವೆ. ಈ ವರ್ಷದ ಉತ್ಸವದಲ್ಲಿ ವಿಶೇಷವಾಗಿ ವಚನ ಗಾಯನ, ವಚನ ನೃತ್ಯ ಸ್ಪರ್ಧೆಗಳನ್ನು ಇಡಲಾಗಿತ್ತು. ಇದರಲ್ಲಿ 40 ತಂಡಗಳು ಭಾಗವಹಿಸಿದವು. ವಿಜೇತ ತಂಡಗಳಿಗೆ ಬಹುಮಾನ ಹಾಗೂ ಪ್ರಶಸ್ತಿ ನೀಡಿ ಗೌರವಿಸುವ ಮೂಲಕ ವಚನ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಪ್ರಯತ್ನ ಮಾಡಲಾಗಿದೆ.
> -ಡಾ.ರಜನೀಶ ವಾಲಿ

ಉದಯ ವಾಹಿನಿ
ದೇಶ/ವಿದೇಶ
ಬುಧವಾರ 22 ಏಪ್ರಿಲ್ 2026


## ಪ.ಬಂಗಾಳದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸುತ್ತೇವೆ ; ಸಿಇಸಿ ಜ್ಞಾನೇಶ್



**ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆಸುತ್ತೇವೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪ್ರತಿಪಾದಿಸಿದ್ದಾರೆ.ಚುನಾವಣೆ ಸಂದರ್ಭದಲ್ಲಿ ಯಾವುದೇ ದುಷ್ಕೃತ್ಯಗಳನ್ನು ನಿಗ್ರಹಿಸಲು ಮತ್ತು ಮತದಾರರ ವಿಶ್ವಾಸವನ್ನು ತುಂಬಲು ವಿವರವಾದ ಚೌಕಟ್ಟನ್ನು ರೂಪಿಸಲಾಗಿದೆ ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಚುನಾವಣೆಗಳನ್ನು ನಿರ್ವಹಿಸುವ ಅಧಿಕಾರಿಗಳಿಗೆ ಸಂದೇಶವೊಂದರಲ್ಲಿ, ಚುನಾವಣಾ ಆಯೋಗವು ಭಯ, ಹಿಂಸೆ, ಬೆದರಿಕೆ ಮತ್ತು ಪ್ರಚೋದನೆಗಳಿಂದ ಮುಕ್ತ ಚುನಾವಣೆಗಳನ್ನು ನಡೆಸಲು ಬದ್ಧವಾಗಿದೆ ಎಂದು ಕುಮಾರ್ ಹೇಳಿದ್ದಾರೆ, ಇದು ಚುನಾವಣಾ ದುಷ್ಕೃತ್ಯಗಳ ಬಗ್ಗೆ ಶೂನ್ಯ ಸಹಿಷ್ಣುತೆಯ ವಿಧಾನವನ್ನು ಒತ್ತಿಹೇಳುತ್ತದೆ.

ಯಾವುದೇ ಸರ್ಕಾರಿ ಕಾರ್ಯನಿರ್ವಾಹಕರು ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಬಾರದು ಎಂದು ಸಿಇಸಿ ಒತ್ತಿ ಹೇಳಿದರು.ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆಗಳು ಅಥವಾ ಸ್ವಾಯತ್ತ ಸಂಸ್ಥೆಗಳ ಯಾವುದೇ ಉದ್ಯೋಗಿ ಚುನಾವಣಾ ಪ್ರಕ್ರಿಯೆಯ ಮೇಲೆ ಯಾವುದೇ ರೀತಿಯಲ್ಲಿ ಪ್ರಭಾವ ಬೀರಲು ಅವಕಾಶ ನೀಡಲಾಗುವುದಿಲ್ಲ ಎಂದು ಕುಮಾರ್ ಹೇಳಿದರು.

ಮತದಾರರು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡುತ್ತಾ, ರಾಜ್ಯದ ಪ್ರತಿಯೊಬ್ಬ ಮತದಾರರು ಭಯವಿಲ್ಲದೆ ತಮ್ಮ ಮತ ಚಲಾಯಿಸುವಂತೆ ಒತ್ತಾಯಿಸಿದರು.ಪಶ್ಚಿಮ ಬಂಗಾಳದ ಪ್ರತಿಯೊಬ್ಬ ಮತದಾರರು ತಮ್ಮ ಮತವನ್ನು ನಿರ್ಭಯವಾಗಿ ಚಲಾಯಿಸಬೇಕು ಎಂದು ಅವರು ಹೇಳಿದರು.

ವಿಶಾಲವಾದ ಪ್ರಜಾಪ್ರಭುತ್ವ ಮನೋಭಾವವನ್ನು ಪ್ರಚೋದಿಸುತ್ತಾ, ಕುಮಾರ್ ಚುನಾವಣೆಗಳನ್ನು ಪ್ರಜಾಪ್ರಭುತ್ವದ ಆಚರಣೆ ಎಂದು ಬಣ್ಣಿಸಿದರು.ಚುನಾವ್ ಕಾ ಪರ್ವ್, ಪಶ್ಚಿಮ ಬಂಗಾಳ ಕಾ ಗರ್ವ್, ಎಂದು ಅವರು ತಿಳಿಸಿದರು. 294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಏ. 23 ಮತ್ತು 29 ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಮೇ 4 ರಂದು ಮತಗಳ ಎಣಿಕೆ ನಡೆಯಲಿದೆ.

### ಭದ್ರತೆ ವಿಚಾರವಾಗಿ ಮೊಜ್ತಬಾ ಅಲಿ ಖಮೇನಿ ಅವರನ್ನು ಹೊರಜಗತ್ತಿಗೆ ಕರೆತರಲು, ಇರಾನ್ ಚಿಂತಿಸುತ್ತಿದೆ

## ನೆರವೇರದ ಆಯತೊಲ್ಲಾ ಅಲಿ ಖಮೇನಿ ಅಂತ್ಯಸಂಸ್ಕಾರ



- ಹತ್ಯೆಯಾಗಿ ಏಳು ವಾರ ಕಳೆದರೂ ಮಣ್ಣಾಗದ ಆಯತೊಲ್ಲಾ ಅಲಿ ಖಮೇನಿ.
- ಆಯತೊಲ್ಲಾ ಅಂತ್ಯಸಂಸ್ಕಾರ ನೆರವೇರಿಸಲು ಇರಾನ್‌ಗೆ ಕಾಡುತ್ತಿರುವ ಭಯ ಏನು?
- ಸಂಪ್ರದಾಯ ಮೀರಿ ಆಯತೊಲ್ಲಾ ಖಮೇನಿ ಅಂತ್ಯಸಂಸ್ಕಾರ ನೆರವೇರಿಸದಿರಲು ಇಲ್ಲಿದೆ ಕಾರಣ.
- ಹತ್ಯೆಯಾಗಿ 7 ವಾರ ಕಳೆದರೂ ನಡೆದಿಲ್ಲ ಖಮೇನಿ ಅಂತ್ಯಸಂಸ್ಕಾರ, ಇರಾನ್‌ಗೆ ಕಾಡ್ತಿದೆ ಅತಿದೊಡ್ಡ ಭೀತಿ!

**ಇರಾನ್‌ಗೆ ಯಾವ ಭಯ? ಶವ ಎಲ್ಲಿದೆ?**

**ಟೆಹ್ರಾನ್:** ಇರಾನ್ ದೇಶದ ನ್ಯಾಷನಲ್ ಹೀರೋ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯಾಗಿ ಬರೋಬ್ಬರಿ ಏಳು ವಾರಗಳು ಕಳೆದಿವೆ. ಕಳೆದ ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಯಲ್ಲಿ, ಆಯತೊಲ್ಲಾ ಅಲಿ ಖಮೇನಿ ಹತ್ಯೆಗೀಡಾಗಿದ್ದರು. ತನ್ನ ರಾಷ್ಟ್ರೀಯ ನಾಯಕನನ್ನು ಕಳೆದುಕೊಂಡರೂ, ಇರಾನ್ ಹೋರಾಟವನ್ನು ಮುಂದುವರೆಸಿದೆ. ಆದರೆ ಹತ್ಯೆಯಾಗಿ ಏಳು ವಾರ ಕಳೆದರೂ ಇರಾನ್ ಇದುವರೆಗೂ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಸಂಸ್ಕಾರ ನೆರವೇರಿಸದಿರುವುದು ಸಾಕಷ್ಟು ಊಹಾಪೋಹಗಳಿಗೆ ಎಡೆ ಮಾಡಿಕೊಟ್ಟಿದೆ.

ಹೌದು, ಆಯತೊಲ್ಲಾ ಅಲಿ ಖಮೇನಿ ಹತ್ಯೆ ಬಳಿಕ ಇರಾನ್ ತನ್ನ ರಾಷ್ಟ್ರೀಯ ನಾಯಕನನ್ನು ಕಳೆದುಕೊಂಡು ಅನಾಥವಾಗಿದೆ. ಆದಾಗ್ಯೂ, ಅದು ನೂತನ ಸರ್ವೋಚ್ಚ ನಾಯಕ ಮೊಜ್ತಾಬಾ ಅಲಿ ಖಮೇನಿ ನಾಯಕತ್ವದಲ್ಲಿ ಅಮೆರಿಕ ಮತ್ತು ಇಸ್ರೇಲ್ ವಿರುದ್ಧದ ಹೋರಾಟವನ್ನು ಮುಂದುವರೆಸಿದೆ. ಆದರೆ. ಏಳು ವಾರ ಕಳೆದರೂ ಆಯತೊಲ್ಲಾ ಅಲಿ ಖಮೇನಿ ಅವರನ್ನು ಸಂಪ್ರದಾಯದಂತೆ ಬೀಳ್ಕೊಡಲು ಇರಾನ್ ಮುಂದಾಗದಿರುವುದು ಹಲವು ಅನುಮಾನಗಳನ್ನು ಮೂಡಿಸಿದೆ. ಅಷ್ಟಕ್ಕೂ ಇರಾನ್ ಇದುವರೆಗೂ ಆಯತೊಲ್ಲಾ ಅವರಿಗೆ ವಿದಾಯ ಏಕೆ ಹೇಳಿಲ್ಲ?

ಮುಸ್ಲಿಂ ಸಂಪ್ರದಾಯದಂತೆ ಆಯತೊಲ್ಲಾ ಅಲಿ ಖಮೇನಿ ಇಷ್ಟೊತ್ತಿಗೆ ಮಣ್ಣಾಗಿ 50 ದಿನಗಳೇ ಕಳೆದಿರಬೇಕಿತ್ತು. ಆದರೆ ಇರಾನ್ ಇದುವರೆಗೂ ಸಂಪ್ರದಾಯಂತೆ ಆಯತೊಲ್ಲಾ ಖಮೇನಿ ಅವರ ಅಂತ್ಯಸಂಸ್ಕಾರ ನೆರವೇರಿಸಿಲ್ಲ. ಇದಕ್ಕೆ ತಜ್ಞರು ಭಯದ ಕಾರಣ ನೀಡಿದ್ದಾರೆ. ಹೌದು, ಆಯತೊಲ್ಲಾ ಅಂತ್ಯಸಂಸ್ಕಾರದ ವಿಧಿವಿಧಾನಗಳನ್ನು ನೆರವೇರಿಸಲು, ಅವರ ಮಗ ಮೊಜ್ತಬಾ ಅಲಿ ಖಮೇನಿ ಸೇರಿದಂತೆ, ಇಡೀ ಇರಾನ್ ಆಡಳಿತ ಹೊರಗೆ ಬಹಿರಂಗವಾಗಿ ಕಾಣಿಸಿಕೊಳ್ಳಬೇಕು. ಇದು ಅಮೆರಿಕ ಮತ್ತು ಇಸ್ರೇಲ್‌ಗೆ ತಮ್ಮ ಗುರಿಗಳನ್ನು ಹೊಡೆಯಲು ಅವಕಾಶ ಮಾಡಿ ಕೊಡತ್ತದೆ. ಈ ಭಯವೇ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಸಂಸ್ಕಾರವನ್ನು ಮುಂದೂಡಲು ಕಾರಣ ಎನ್ನಲಾಗಿದೆ.

**ಆಯತೊಲ್ಲಾ ಖಮೇನಿ ಹತ್ಯೆ:** ಅದು ಫೆ.28, ಶನಿವಾರ ಇರಾನ್ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಮತ್ತು ಅವರ ಕುಟುಂಬದ ಆಪ್ತ ಸದಸ್ಯರು ಮತ್ತು ಉನ್ನತ ಮಿಲಿಟರಿ ಅಧಿಕಾರಿಗಳಿದ್ದ ಕಟ್ಟಡದ ಮೇಲೆ ಅಮೆರಿಕ ಮತ್ತು ಇಸ್ರೇಲ್ ಜಂಟಿ ವಾಯುದಾಳಿ ನಡೆಸಿತ್ತು. ಈ ದಾಳಿಯಲ್ಲಿ ಕಟ್ಟಡದ ಒಳಗಿದ್ದ ಯಾರೂ ಬದುಕುಳಿದಿರಲಿಲ್ಲ. ಇರಾನ್ ಕ್ಷಣಾರ್ಧದಲ್ಲಿ ತನ್ನ ಸರ್ವೋಚ್ಚ ನಾಯಕನನ್ನು ಕಳೆದುಕೊಂಡು ಅನಾಥವಾಗಿತ್ತು. ಅಮೆರಿಕ ಮತ್ತು ಇಸ್ರೇಲ್‌ನ ಘಾತಕ ಶಸ್ತ್ರ ಆಗಸದಿಂದ ಬಂದ ನೀಲಿ ಗುಬ್ಬಚ್ಚಿ ಆಯತೊಲ್ಲಾ ಖಮೇನಿ ಹತ್ಯೆ ಮಾಡಿತ್ತು.ದಾಳಿಯ ವೇಳೆ ಇದೇ ಕಟ್ಟಡದಲ್ಲಿದ್ದ ಆಯತೊಲ್ಲಾ ಪುತ್ರ, ಮೊಜ್ತಬಾ ಅಲಿ ಖಮೇನಿ ಸಣ್ಣಪುಟ್ಟ ಗಾಯಗಳಿಂದ ಬದುಕುಳಿದಿದ್ದು, ಈಗ ಇರಾನ್ ಮುನ್ನಡೆಸುತ್ತಿದ್ದಾರೆ.

ಆದರೆ ತಂದೆಯ ಅಂತ್ಯಕ್ರಿಯೆ ನೆರವೇರಿಸಲು ಮೊಜ್ತಬಾ ಅಲಿ ಖಮೇನಿ ಅವರಿಗೆ ಭಯ ಕಾಡ್ತಿದೆ. ಇಸ್ಲಾಮಿಕ್ ಸಂಪ್ರದಾಯದಂತೆ ಮತ್ತು ಸರ್ಕಾರಿ ಗೌರವದಂತೆ ಆಯತೊಲ್ಲಾ ಅಲಿ ಖಮೇನಿ ಅವರನ್ನು ಮಣ್ಣು ಮಾಡಲು, ಮೊಜ್ತಬಾ ಅಲಿ ಖಮೇನಿಯೂ ಸೇರಿದಂತೆ ಇಡೀ ಇರಾನ್ ಆಡಳಿತ ಹೊರಗೆ ಬರಬೇಕು. ಸದ್ಯ ಅಮೆರಿಕ ಮತ್ತು ಇಸ್ರೇಲ್ ದಾಳಿಯ ಭೀತಿಯ ಹಿನ್ನೆಲೆಯಲ್ಲಿ, ಮೊಜ್ತಬಾ ಅಲಿ ಖಮೇನಿ ಇದುವರೆಗೂ ಒಮ್ಮೆಯೂ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ಒಬ್ಬ ಸರ್ವೋಚ್ಚ ನಾಯಕನನ್ನು ಕಳೆದುಕೊಂಡಿರುವ ಇರಾನ್, ಮತ್ತೋರ್ವ ಸರ್ವೋಚ್ಚ ನಾಯಕನನ್ನು ಕಳೆದುಕೊಳ್ಳಲು ಸುತರಾಂ ತಯಾರಿಲ್ಲ.

ಅಮೆರಿಕ ಮತ್ತು ಇಸ್ರೇಲ್ ಮೊಜ್ತಬಾ ಅಲಿ ಖಮೇನಿ ಅವರನ್ನೂ ಒಳಗೊಂಡಂತೆ, ಇರಾನ್‌ನ ಹೊಸ ಆಡಳಿತವನ್ನು ಟಾರ್ಗೆಟ್ ಮಾಡಿದೆ. ಈಗಾಗಲೇ ಇರಾನ್ ಮಿಲಿಟರಿಯ ಅನೇಕ ಉನ್ನತ ಸೇನಾಧಿಕಾರಿಗಳು ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಗುಪ್ತ ಕಾರ್ಯಾಚರಣೆಗಳಲ್ಲಿ ಹತರಾಗಿದ್ದಾರೆ. ಇರಾನ್ ಮಿಲಿಟರಿಯ ಉನ್ನತ ನಾಯಕತ್ವದಲ್ಲಿ ಒಂದು ರೀತಿಯ ನಿರ್ವಾತ ಕಂಡುಬರುತ್ತಿದೆ.

**ಶವ ಎಲ್ಲಿದೆ? ಎಲ್ಲಿ ಅಂತ್ಯಕ್ರಿಯೆ?**

**ಇರಾನ್ ಸರ್ಕಾರ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ಮಶಾದ್ ನಗರ ಆಯ್ಕೆ ಮಾಡಿಕೊಂಡಿದೆ. ದೇಶದ ಈಶಾನ್ಯ ಭಾಗದಲ್ಲಿರುವ ಈ ನಗರ ಆಯತೊಲ್ಲಾ ಅವರ ಹುಟ್ಟೂರಾಗಿದೆ. ಅಲ್ಲದೇ ಈ ನಗರ ತುರ್ಕಮೆನಿಸ್ತಾನ್ ಗಡಿಯಲ್ಲಿದ್ದು, ಇಸ್ರೇಲ್‌ನಿಂದ ದೂರದಲ್ಲಿದೆ. ಹೀಗಾಗಿ ಆಯತೊಲ್ಲಾ ಅಂತ್ಯಸಂಸ್ಕಾರದ ವೇಳೆ ಮೊಜ್ತಬಾ ಅಲಿ ಖಮೇನಿ ಅವರ ಮೇಲೆ ದಾಳಿ ಮಾಡುವ ಇಸ್ರೇಲ್ ಯೋಜನೆಗಳು ಅಷ್ಟು ಸುಲಭವಾಗಿ ಕೈಗೂಡದು. ಇದೇ ಕಾರಣಕ್ಕೆ ಇರಾನ್ ಆಡಳಿತ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ಮಶಾದ್ ನಗರ ಆಯ್ಕೆ ಮಾಡಿಕೊಂಡಿದ್ದರೂ, ಅಂತ್ಯಕ್ರಿಯೆ ಯಾವ ದಿನ ನಡೆಯಲಿದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ.**

## ಒಪ್ಪಂದಕ್ಕೆ ಬನ್ನಿ ಇಲ್ಲವೇ ದಾಳಿ ಎದುರಿಸಿ: ಟ್ರಂಪ್ ಎಚ್ಚರಿಕೆ





**ವಾಷಿಂಗ್ಟನ್:** ಅಮೆರಿಕಾ ಮತ್ತು ಇರಾನ್ ನಡುವೆ ನಡೆಯಬೇಕಿದ್ದ ದ್ವಿತೀಯ ಹಂತದ ಶಾಂತಿ ಮಾತುಕತೆಗಳು ಅನಿಶ್ಚಿತತೆಯಲ್ಲಿರುವ ನಡುವೆಯೇ, ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ. ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರು, ಕದನ ವಿರಾಮ ವಿಫಲವಾದರೆ ''ಬಹಳಷ್ಟು ಬಾಂಬ್‌ಗಳು ಸಿಡಿಯುತ್ತವೆ ಎಂದು ಗಂಭೀರ ಎಚ್ಚರಿಕೆ ನೀಡಿದ್ದಾರೆ.

ಇದಕ್ಕೆ ಪ್ರತಿಯಾಗಿ ಇರಾನ್,ಬೆದರಿಕೆಗಳ ನೆರಳಿನಲ್ಲಿ ಮಾತುಕತೆಗಳನ್ನು ನಾವು ಒಪ್ಪುವುದಿಲ್ಲ'' ಎಂದು ಕಟುವಾಗಿ ಪ್ರತಿಕ್ರಿಯಿಸಿದೆ. ಇರಾನ್ ಸಂಸತ್ ಅಧ್ಯಕ್ಷ ಮಹಮದ್ ಬಗೇರ್ ಗಾಲೀಬಾಫ್ ಅವರು, ಯುದ್ಧ ಮತ್ತೆ ಪ್ರಾರಂಭವಾದರೆ ತಾವು ಹೊಸ ಕಾರ್ಡ್‌ಗಳನ್ನು ಪ್ರದರ್ಶಿಸಲು ಸಿದ್ಧವಿದ್ದೇವೆ ಎಂದು ಹೇಳಿದ್ದಾರೆ. ಅಮೆರಿಕಾ ಇರಾನ್ ಹಡಗನ್ನು ವಶಪಡಿಸಿಕೊಂಡ ಘಟನೆ ಉದ್ವಿಗ್ನತೆಯನ್ನು ಮತ್ತಷ್ಟು ತೀವ್ರಗೊಳಿಸಿದೆ. ಈ ಪ್ರದೇಶ ಜಾಗತಿಕ ತೈಲ ಸಾಗಣೆಗೆ ಅತ್ಯಂತ ಪ್ರಮುಖ ಮಾರ್ಗವಾಗಿದ್ದು, ಎರಡೂ ದೇಶಗಳ ನಡುವಿನ ಸಂಘರ್ಷದ ಕೇಂದ್ರವಾಗಿದೆ. ಅಮೆರಿಕಾ ತಂಡವನ್ನು ಉಪಾಧ್ಯಕ್ಷ ನೇತೃತ್ವವಹಿಸಲಿದ್ದು, ವಿಶೇಷ ದೂತ ಸ್ಟೀವ್ ವಿಟ್‌ಕಾಫ್ ಮತ್ತು ಟ್ರಂಪ್ ಅವರ ಅಳಿಯ ಜಾರೆಟ್ ಕುಶಾನರ್ ಕೂಡ ಭಾಗಿಯಾಗಲಿದ್ದಾರೆ.

ಇರಾನ್ ಅಧಿಕಾರಿಗಳ ಪ್ರಕಾರ, ಟ್ರಂಪ್ ಅವರ ಕಠಿಣ ಹೇಳಿಕೆಗಳು ಮತ್ತು ಅಮೆರಿಕಾ ವಿಧಿಸಿರುವ ನಿರ್ಬಂಧಗಳು ಮಾತುಕತೆಗಳಿಗೆ ಅಡ್ಡಿಯಾಗುತ್ತಿವೆ. ಒಪ್ಪಂದದ ಮೂಲ ಅಂಶಗಳಲ್ಲಿ ಕೆಲವು ಒಪ್ಪಿಗೆ ಇದ್ದರೂ, ಸಾರ್ವಜನಿಕವಾಗಿ ನೀಡಲಾಗುತ್ತಿರುವ ತೀವ್ರ ಹೇಳಿಕೆಗಳು ರಾಜತಾಂತ್ರಿಕ ಪ್ರಗತಿಯನ್ನು ಹಾಳುಮಾಡುವ ಅಪಾಯವಿದೆ ಎಂದು ಹೇಳಲಾಗಿದೆ.

ಪಾಕಿಸ್ತಾನದ ಮಧ್ಯವರ್ತಿಗಳು, ವಿನ್-ವಿನ್ ಪರಿಹಾರವಾಗಿ ಮಾತುಕತೆಗಳನ್ನು ರೂಪಿಸುವಂತೆ ಅಮೆರಿಕಾಗೆ ಸಲಹೆ ನೀಡಿದ್ದು, ಉಗ್ರ ಭಾಷಣಗಳಿಂದ ದೂರವಿರಲು ಸೂಚಿಸಿದ್ದಾರೆ.ಒಟ್ಟಿನಲ್ಲಿ, ಕದನವಿರಾಮ ಮುಕ್ತಾಯದ ಗಡುವು ಸಮೀಪಿಸುತ್ತಿರುವ ಹಿನ್ನೆಲೆ, ಅಮೆರಿಕಾ-ಇರಾನ್ ನಡುವಿನ ಪರಿಸ್ಥಿತಿ ಅತ್ಯಂತ ಸೂಕ್ಷ್ಮ ಹಂತಕ್ಕೆ ತಲುಪಿದ್ದು, ಶಾಂತಿ ಅಥವಾ ಸಂಘರ್ಷ ಎಂಬ ಎರಡರ ನಡುವೆ ನಿರ್ಣಾಯಕ ಕ್ಷಣ ಎದುರಾಗಿದೆ. ಈ ನಡೆವೇ ಇರಾನ್ ಜೊತೆ ಒಪ್ಪಂದ ಮಾಡಿಕೊಳ್ಳುವವರೆಗೆ, ಇರಾನ್ ಬಂದರುಗಳ ಮೇಲಿನ ದಿಗ್ಬಂಧನ ತೆಗೆದುಹಾಕುವುದಿಲ್ಲ ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುಡುಗಿದ್ದಾರೆ.

ಯುದ್ಧವನ್ನು ಕೊನೆಗೊಳಿಸಲು ಹೊಸ ಮಾತುಕತೆಗಳು ನಡೆಯುತ್ತವೆಯೇ ಎಂಬ ಬಗ್ಗೆ ಅನಿಶ್ಚಿತತೆ ಮುಂದುವರಿದಿರುವ ನಡುವೆ ಡೊನಾಲ್ಡ್ ಟ್ರಂಪ್ ಹೇಳಿಕೆ ಮಹತ್ವ ಪಡೆದುಕೊಂಡಿದೆ

**ಮಾತುಕತೆಗಳ ಭವಿಷ್ಯ ಅನುಮಾನ**

**ಪಾಕಿಸ್ತಾನದಲ್ಲಿ ನಡೆಯಬೇಕಿದ್ದ ಶಾಂತಿ ಮಾತುಕತೆಗಳಿಗೆ ಅಮೆರಿಕಾ ಪ್ರತಿನಿಧಿ ತಂಡ ಹಾಜರಾಗುವುದಾಗಿ ತಿಳಿಸಿದರೂ, ಇರಾನ್ ಭಾಗವಹಿಸುವುದರ ಬಗ್ಗೆ ಅನುಮಾನ ವ್ಯಕ್ತವಾಗಿದೆ. ಗಡುವು ಮುಕ್ತಾಯವಾಗಲಿದ್ದು, ಅದರ ವಿಸ್ತರಣೆ ಸಾಧ್ಯತೆ ಕಡಿಮೆ ಎಂದು ವರದಿಗಳು ಸೂಚಿಸುತ್ತಿವೆ.**

## ಅರವಿಂದ ಕೇಜ್ರಿವಾಲ್ ಅರ್ಜಿ ವಜಾ



**ನವದೆಹಲಿ:** ರಾಷ್ಟ್ರ ರಾಜಧಾನಿ ಅಬಕಾರಿ ನೀತಿ ಅನುಷ್ಠಾನ ಪ್ರಕರಣ ಸಂಬಂಧ ದೆಹಲಿ ಹೈಕೋರ್ಟ್ ನ್ಯಾಯಾಧೀಶೆ ಸ್ವರ್ಣ ಕಾಂತ ಶರ್ಮಾ ಅವರನ್ನು ವಿಚಾರಣೆಯಿಂದ ಹಿಂದೆ ಸರಿಯುವಂತೆ ಕೋರಿ ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದೆ.

ಅರವಿಂದ್ ಕೇಜ್ರಿವಾಲ್ ಅವರು ಎತ್ತಿರುವ ಹಕ್ಕುಗಳು ಸಾಕ್ಷ್ಯಗಳಿಂದ ಬೆಂಬಲಿತವಾಗಿಲ್ಲ ಮತ್ತು ಅವರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸುವ ಆರೋಪ ಮಾತ್ರ ಆಧರಿಸಿವೆ ಎಂದು ಹೇಳಿದ ಹೈಕೋರ್ಟ್ ಅರ್ಜಿಯನ್ನು ತಿರಸ್ಕರಿಸಿದೆ. ಪ್ರಕರಣದಿಂದ ಹಿಂದೆ ಸರಿಯುವುದು ಆರೋಪಗಳಿಗೆ ಅರ್ಹತೆ ಇದೆ ಎಂದು ಸೂಚಿಸುತ್ತದೆ ಮತ್ತು ಪ್ರಕರಣವನ್ನು ಮುಂದುವರಿಸುವುದು ಟೀಕೆಗೆ ಕಾರಣವಾಗಬಹುದು ಎಂದು ನ್ಯಾಯಾಲಯ ಹೇಳಿದೆ. ಪಕ್ಷಪಾತದ ಆರೋಪಗಳನ್ನು ಕೇವಲ ಅನುಮಾನಗಳಲ್ಲದೆ, ಘನ ಪುರಾವೆಗಳಿಂದ ಬೆಂಬಲಿಸಬೇಕು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.ಒಬ್ಬ ದಾವೆದಾರನ ಸಾಮಾನ್ಯ ಅಸಮಾಧಾನ ಅಥವಾ ಈ ನ್ಯಾಯಾಲಯ ಆತನಿಗೆ ಪರಿಹಾರ ನೀಡದಿರಬಹುದು ಎಂದು ತಿಳಿಸಿದೆ,

ನಿರ್ಧಾರ, ಗ್ರಹಿಕೆಗಳು ಅಥವಾ ಊಹೆಗಳಿಂದ ಪ್ರಭಾವಿತವಾಗಲು ಸಾಧ್ಯವಿಲ್ಲ ಮತ್ತು ಕಾನೂನು ಮತ್ತು ಸತ್ಯಗಳನ್ನು ಕಟ್ಟುನಿಟ್ಟಾಗಿ ಆಧರಿಸಿರಬೇಕು ಎಂದು ನ್ಯಾಯಪೀಠ ಹೇಳಿದೆ. ಅರ್ಜಿಯಲ್ಲಿ ಎತ್ತಲಾದ ಪ್ರಮುಖ ವಿಷಯವೆಂದರೆ ನ್ಯಾಯಾಧೀಶರ ಮಕ್ಕಳ ವೃತ್ತಿಪರ ಪಾತ್ರಗಳಿಗೆ ಸಂಬಂಧಿಸಿದೆ. ದೃಢವಾಗಿ ಪ್ರತಿಕ್ರಿಯಿಸಿದ ನ್ಯಾಯಾಲಯ, ಅವರ ಕುಟುಂಬ ಸದಸ್ಯರು ಮತ್ತು ಪ್ರಕರಣದ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಹೇಳಿದೆ.

ರಾಜಕಾರಣಿಯ ಪತ್ನಿ ರಾಜಕಾರಣಿಯಾಗಲು ಸಾಧ್ಯವಾದರೆ, ರಾಜಕಾರಣಿಯ ಮಕ್ಕಳು ರಾಜಕಾರಣಿಗಳಾಗಲು ಸಾಧ್ಯವಾದರೆ. ನ್ಯಾಯಾಧೀಶರ ಮಕ್ಕಳು ಕಾನೂನು ವೃತ್ತಿಯನ್ನು ಪ್ರವೇಶಿಸಲು ಸಾಧ್ಯವಿಲ್ಲ ಎಂದು ಹೇಗೆ ಹೇಳಬಹುದು ಎಂದು ನ್ಯಾಯಾಲಯ ಹೇಳಿದೆ.

## ಮುಂಬೈ ಮೂಲದ ಉದ್ಯಮಿಗೆ 3.25 ಕೋಟಿ ವಂಚನೆ




**ಅಂತರರಾಜ್ಯ ಗ್ಯಾಂಗ್‌ನ 9 ಮಂದಿಯ ವಿರುದ್ಧ ಪ್ರಕರಣ**

**ಮುಂಬೈ:** ಹೆಚ್ಚಿನ ಲಾಭದ ಭರವಸೆ ನೀಡಿ ಮುಂಬೈ ಮೂಲದ ಉದ್ಯಮಿಯೊಬ್ಬರಿಗೆ 3.25 ಕೋಟಿ ವಂಚನೆ ಮಾಡಿದ ಜೊತೆಗೆ ಹಲ್ಲೆ ನಡೆಸಿ ಬೆದರಿಕೆ ಹಾಕಿದ ಆರೋಪದಲ್ಲಿ ಅಂತರರಾಜ್ಯ ಗ್ಯಾಂಗ್‌ನ ಒಂಬತ್ತು ಮಂದಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಆರೋಪಿಗಳಲ್ಲಿ ಇಬ್ಬರು ಮಹಿಳೆಯರು ಸೇರಿದ್ದು, ಅವರು ಮುಂಬೈ, ಒಡಿಶಾ, ಬಿಹಾರ ಮತ್ತು ಜಾರ್ಖಂಡ್ ರಾಜ್ಯಗಳ ನಿವಾಸಿಗಳಾಗಿದ್ದಾರೆ ಎಂದು ವಿಲೆ ಪಾರ್ಲೆ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ

ಖಾಸಗಿ ಸಂಸ್ಥೆ ನಡೆಸುತ್ತಿರುವ ದೂರುದಾರರು 2025ರ ಜುಲೈನಲ್ಲಿ ನಾಲ್ವರು ಆರೋಪಿಗಳ ಸಂಪರ್ಕಕ್ಕೆ ಬಂದಿದ್ದು, ಅವರು ತಮ್ಮನ್ನು ಬ್ರೋಕರ್‌ಗಳೆಂದು ಪರಿಚಯಿಸಿಕೊಂಡಿದ್ದರು. ಆರ್ಕ್‌ಶಿಪ್ ಗ್ರೂಪ್ ಎಂಬ ಕಂಪನಿಯಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಸಿಗುತ್ತದೆ ಎಂದು ಅವರು ನಂಬಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ. ಅವರ ಮಾತಿಗೆ ಮರುಳಾದ ಉದ್ಯಮಿ ಆನ್‌ಲೈನ್ ಮೂಲಕ 1 ಕೋಟಿ ವರ್ಗಾಯಿಸಿದರು. ಆದರೆ ನಂತರ ಆ ಹಣ ಮಾನವ ಧರ್ಮಯೋಗ ಎಂಬ ಎನ್‌ಜಿಒ ಖಾತೆಗೆ ವರ್ಗಾಯಿಸಿರುವುದು ತಿಳಿದುಬಂದಿತು.

ಈ ಬಗ್ಗೆ ಪ್ರಶ್ನಿಸಿದಾಗ, ಆರೋಪಿಗಳು ವಿಲೆ ಪಾರ್ಲೆಯ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೆದ್ದಾರಿ ಸಮೀಪದ ಒಂದು ಹೋಟೆಲ್‌ಗೆ ಸಭೆಗೆ ಕರೆಯಿದರು. ಉದ್ಯಮಿ ಮತ್ತು ಅವರ ಕಂಪನಿಯ ಜನರಲ್ ಮ್ಯಾನೇಜರ್ ಅಲ್ಲಿ ಹೋದಾಗ, ಗ್ಯಾಂಗ್ ಸದಸ್ಯರು ಇಬ್ಬರ ಮೇಲೂ ಹಲ್ಲೆ ನಡೆಸಿ ಬಂದೂಕು ತೋರಿಸಿ ಬೆದರಿಕೆ ಹಾಕಿದರು ಎಂದು ಪೊಲೀಸರು ತಿಳಿಸಿದ್ದಾರೆ. ನಂತರ ಗ್ಯಾಂಗ್ 3 ಕೋಟಿ ಪರಿಹಾರ ಹಣವನ್ನು ಬೇಡಿಕೆ ಇಟ್ಟು, ಕೊಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿತು. ಜೀವಭಯದಿಂದ ಉದ್ಯಮಿ ಆರೋಪಿಗಳು ನೀಡಿದ ಬ್ಯಾಂಕ್ ಖಾತೆಗಳಿಗೆ ಸುಮಾರು 2.25 ಕೋಟಿ ಆನ್‌ಲೈನ್ ಮೂಲಕ ವರ್ಗಾಯಿಸಿದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಹಣ ಪಡೆದ ನಂತರ ಆರೋಪಿಗಳು ಅವರನ್ನು ಬಿಡುಗಡೆ ಮಾಡಿದರು, ಆದರೆ ಪೊಲೀಸರಿಗೆ ದೂರು ನೀಡಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಆದರೆ ಕುಟುಂಬ ಮತ್ತು ಸ್ನೇಹಿತರ ಸಲಹೆಯ ಮೇರೆಗೆ ಉದ್ಯಮಿ ನಂತರ ಪೊಲೀಸರನ್ನು ಸಂಪರ್ಕಿಸಿ ದೂರು ದಾಖಲಿಸಿದರು.ದೂರು ಪರಿಶೀಲಿಸಿದ ಬಳಿಕ, ವಂಚನೆ, ನಂಬಿಕೆ ಭಂಗ, ವಸೂಲಿ, ಗಂಭೀರ ಹಾನಿ ಮಾಡುವುದು ಮತ್ತು ಜೀವ ಬೆದರಿಕೆ ಸೇರಿದಂತೆ ಹಲವು ಆರೋಪಗಳಡಿ ಒಂಬತ್ತು ಮಂದಿಯ ವಿರುದ್ಧ ಎಫ್‌ಐರ್‌ಆ ದಾಖಲಿಸಲಾಗಿದೆ. ಈ ಪ್ರಕರಣವನ್ನು ಮುಂದಿನ ತನಿಖೆಗಾಗಿ ಮುಂಬೈ ಕ್ರೈಂ ಬ್ರಾಂಚ್‌ಗೆ ಹಸ್ತಾಂತರಿಸಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ, ಆರೋಪಿಗಳು ದೊಡ್ಡ ಅಂತರರಾಜ್ಯ ಜಾಲದ ಭಾಗವಾಗಿರಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಹಿಂದೂ ವಿರೋಧಿ ಲೆನ್ಸ್‌ಕಾರ್ಟ್ ಸಂಸ್ಥೆ ಸಿಬ್ಬಂದಿಗಳಿಗೆ ತಿಲಕ



**ತನಿಖೆ ನಡೆಸಲು ಒತ್ತಾಯ**

**ಮುಂಬೈ:** ಕನ್ನಡಕ ಚಿಲ್ಲರೆ ವ್ಯಾಪಾರಿ ಲೆನ್ಸ್ ಕಾರ್ಟ್ ಸಂಸ್ಥೆಯ ಉದ್ಯೋಗಿಗಳ ಹಣೆಗೆ ಬಿಜೆಪಿ ಅಲ್ಪಸಂಖ್ಯಾತ ಘಟಕದ ನಾಯಕಿ ನಾಜಿಯಾ ಇಲಾಹಿ ಅವರು ಬಿಂದಿ ಹಾಗೂ ತಿಲಕ ಇಟ್ಟಿರುವ ಘಟನೆ ನಡೆದಿದೆ. ಲೆನ್ಸ್ ಕಾರ್ಟ್ ಉದ್ಯೋಗಿಗಳು ಕೆಲಸದ ಸ್ಥಳದಲ್ಲಿ ಬಿಂದಿ ಮತ್ತು ತಿಲಕ ಧರಿಸುವುದನ್ನು ವಿರೋಧಿಸಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮುಸ್ಲಿಂ ಬಿಜೆಪಿ ನಾಯಕಿ ಇಲಾಹಿ ನೇತೃತ್ವದಲ್ಲಿ ಹಿಂದೂ ಸಂಘಟನೆಗಳ ಸದಸ್ಯರು ಮುಂಬೈನ ಶೋ ರೂಂಗೆ ನುಗ್ಗಿ, ಉದ್ಯೋಗಿಗಳಿಗೆ ತಿಲಕ ಹಚ್ಚಿ, ಅವರ ಮಣಿಕಟ್ಟಿಗೆ ಪವಿತ್ರ ದಾರಗಳನ್ನು (ಕಲಾವ) ಕಟ್ಟಿಕೊಂಡು ಘೋಷಣೆಗಳನ್ನು ಕೂಗಿದ್ದಾರೆ.

ಅಂಗಡಿಯ ಹೊರಗೆ ಮಾತನಾಡಿದ ಇಲಾಹಿ ಅವರು, ಆಡಳಿತ ಮಂಡಳಿಯು ಒಂದು ಧರ್ಮವನ್ನು ಇನ್ನೊಂದಕ್ಕಿಂತ ಹೆಚ್ಚಾಗಿ ಪ್ರಚಾರ ಮಾಡುತ್ತಿದೆ ಎಂದು ಆರೋಪಿಸಿದರು. ಇದು ಹಿಂದೂ ರಾಷ್ಟ್ರ ಲೆನ್ಸ್‌ಕಾರ್ಟ್ ಅನ್ನು ಬಹಿಷ್ಕರಿಸಲಾಗುವುದು ಅಥವಾ ಮಾಲೀಕರು ಕ್ಷಮೆಯಾಚಿಸದ ಹೊರತು ಅದರ ಎಲ್ಲಾ ಮಳಿಗೆಗಳನ್ನು ಮುಚ್ಚಲಾಗುವುದು ಎಂದು ಅವರು ಹೇಳಿದರು.

ಖಾನ್ ಹಿಂದೂ ಉದ್ಯೋಗಿಗಳನ್ನು ಮುಂದೆ ಕರೆದು ಅವರ ಹಣೆಯ ಮೇಲೆ ತಿಲಕ ಹಚ್ಚಿದಾಗ, ಧಾರ್ಮಿಕ ಗುರುತನ್ನು ವ್ಯಕ್ತಪಡಿಸುವಲ್ಲಿ ಯಾವುದೇ ನಾಚಿಕೆ ಇರಬಾರದು ಎಂದು ಹೇಳಿದಾಗ ಪರಿಸ್ಥಿತಿ ಉಲ್ಬಣಗೊಂಡಿತು.

ಏತನ್ಮಧ್ಯೆ, ಕಂಪನಿಯ ತರಬೇತಿಯ ಸಮಯದಲ್ಲಿ, ತಿಲಕ ಮತ್ತು ಪವಿತ್ರ ದಾರ ಧರಿಸುವುದನ್ನು ನಿಷೇಧಿಸಲಾಗಿದೆ ಎಂದು ಸಿಬ್ಬಂದಿಗೆ ತಿಳಿಸಲಾಯಿತು ಎಂದು ಶೋರೂಮ್ ಉದ್ಯೋಗಿಯೊಬ್ಬರು ಹೇಳಿಕೊಂಡರು. ಮಹಿಳಾ ಉದ್ಯೋಗಿಗಳು, ವಿವಾಹಿತರಾಗಿದ್ದರೂ ಸಹ, ಮಂಗಳಸೂತ್ರ ಧರಿಸಲು ಅವಕಾಶವಿಲ್ಲ ಎಂದು ಅವರು ಆರೋಪಿಸಿದರು. ಈ ಹೇಳಿಕೆಗಳು ಅಲ್ಲಿದ್ದವರಲ್ಲಿ ಆಕ್ರೋಶವನ್ನು ಹುಟ್ಟುಹಾಕಿದವು, ಶೋರೂಮ್ ವ್ಯವಸ್ಥಾಪಕರಿಂದ ವಿವರಣೆಗಾಗಿ ಬೇಡಿಕೆಗಳು ಬಂದವು. ಹಿಂದೂ ಕಾರ್ಯಕರ್ತರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದರು ಮತ್ತು ಔಟ್ಲೆಟ್ ಅನ್ನು ತಕ್ಷಣವೇ ಮುಚ್ಚಬೇಕೆಂದು ಒತ್ತಾಯಿಸಿದರು, ಅದನ್ನು ಕಾರ್ಯನಿರ್ವಹಿಸಲು ಅನುಮತಿಸುವ ಮೊದಲು ಸಂಪೂರ್ಣ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಲೆನ್ಸ್ ಕಾರ್ಟ್ ತನ್ನ ಆಂತರಿಕ ದಾಖಲೆಯು ಉದ್ಯೋಗಿಗಳಿಗೆ ಹಿಜಾಬ್ ಧರಿಸಲು ಅವಕಾಶ ನೀಡಿದೆ ಆದರೆ, ಬಿಂದಿ ಮತ್ತು ತಿಲಕಗಳಂತಹ ಗೋಚರ ಧಾರ್ಮಿಕ ಚಿಹ್ನೆಗಳನ್ನು ನಿರ್ಬಂಧಿಸಿದೆ ಎಂಬ ಆರೋಪಗಳು ಹೊರಹೊಮ್ಮಿದ ನಂತರ ಬಿರುಗಾಳಿಯ ಕೇಂದ್ರಬಿಂದುವಾಗಿದೆ.

ವಿವಾದ ಉಲ್ಬಣಗೊಳ್ಳುತ್ತಿದ್ದಂತೆ, ಕಂಪನಿಯು ಕ್ಷಮೆಯಾಚಿಸಿತು ಮತ್ತು ಸಿಇಒ ಪೆಯೂಷ್ ಬನ್ಸಾಲ್ ಪ್ರಶ್ನೆಯಲ್ಲಿರುವ ನೀತಿ ದಾಖಲೆಯು ತಪ್ಪಾಗಿದೆ ಮತ್ತು ಕಂಪನಿಯ ಪ್ರಸ್ತುತ ಮಾರ್ಗಸೂಚಿಗಳನ್ನು ಪ್ರತಿಬಿಂಬಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ವೈರಲ್ ಆಗಿರುವ ದಾಖಲೆಯು ಹಳತಾದ ತರಬೇತಿ ಟಿಪ್ಪಣಿಯಾಗಿದ್ದು, ಕಂಪನಿಯ ಮಾನವ ಸಂಪನ್ಮೂಲ ನೀತಿಯ ಭಾಗವಲ್ಲ ಎಂದು ಅವರು ಹೇಳಿದರು, ಬಿಂದಿ ಮತ್ತು ತಿಲಕ್‌ನ ಉಲ್ಲೇಖಗಳನ್ನು ನಂತರ ತೆಗೆದುಹಾಕಲಾಗಿದೆ ಎಂದು ಹೇಳಿದರು.

## ಮಿನಿ ನ್ಯೂಸ್

### ತಿರಸ್ಕೃತವಾಗುವುದೇ ಜೋಸೆಫ್ ವಿಜಯ್ ನಾಮಪತ್ರ..?

**ಚೆನ್ನೈ:** ಚಿತ್ರರಂಗ ತೊರೆದು ರಾಜಕೀಯಕ್ಕೆ ಎಂಟ್ರಿ ಪಡೆದು ತಮಿಳುನಾಡಿನಲ್ಲಿ ಸಂಚಲನ ಸೃಷ್ಟಿಸಿರುವ ದಳಪತಿ ವಿಜಯ್ ಅವರ ನಾಮಪತ್ರ ತಿರಸ್ಕೃತಗೊಳ್ಳುವ ಸಾಧ್ಯತೆಗಳು ಹೆಚ್ಚಾಗಿವೆ. ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ 100 ಕೋಟಿ ರೂ.ಗಳ ಆಸ್ತಿ ಮುಚ್ಚಿಟ್ಟಿದಾರೆ ಎಂಬ ಆರೋಪಕ್ಕೆ ಗುರಿಯಾಗಿರುವ ತಮಿಳಿಗ ವೆಟ್ರಿ ಕಳಗಂ ಪಕ್ಷದ ಸಂಸ್ಥಾಪಕ ವಿಜಯ್‌ಗೆ ಅವರ ನಾಮಪತ್ರ ತಿರಸ್ಕೃತಗೊಳ್ಳುವ ಆತಂಕ ಹೆಚ್ಚಾಗಿದೆ.

ವಿಜಯ್ ಅವರು ಪೆರಂಬೂರ್ ಮತ್ತು ತಿರುಚ್ಚಿ ಪೂರ್ವದಲ್ಲಿ ಸಲ್ಲಿಸಿರುವ ಆಸ್ತಿ ವಿವರಗಳಲ್ಲಿ ಸುಮಾರು 105 ಕೋಟಿ ರೂಪಾಯಿಗಳ ವ್ಯತ್ಯಾಸ ಇರುವುದನ್ನು ಮದ್ರಾಸ್ ಹೈಕೋರ್ಟ್ ಅಕ್ರಮ ಎಂದು ಮೌಖಿಕವಾಗಿ ಅಭಿಪ್ರಾಯಪಟ್ಟಿದೆ. ಅಫಿಡವಿಟ್‌ನಲ್ಲಿರುವ ವ್ಯತ್ಯಾಸ ಮತ್ತು ಕ್ರಿಮಿನಲ್ ಪ್ರಕರಣಗಳ ಮಾಹಿತಿಯನ್ನು ವಿಜಯ್ ಮರೆಮಾಚಿರುವ ಆರೋಪದ ಹಿನ್ನೆಲೆಯಲ್ಲಿ ಹೈಕೋರ್ಟ್ ಚುನಾವಣಾ ಆಯೋಗ ಮತ್ತು ಆದಾಯ ತೆರಿಗೆ ಇಲಾಖೆಗೆ ನೋಟಿಸ್ ಜಾರಿ ಮಾಡಿದೆ.

### ಗುರುದ್ವಾರದಲ್ಲಿ 2 ಗುಂಪುಗಳ ನಡುವೆ ಘರ್ಷಣೆ

**ಬರ್ಲಿನ್:** ಜರ್ಮನಿಯ ಗುರುದ್ವಾರದಲ್ಲಿ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆಯಲ್ಲಿ 11 ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ. ಜರ್ಮನಿಯ ಮೋರ್ಸ್ ನಗರದ ಡ್ಯೂಸ್‌ಬರ್ಗ್ ಪ್ರದೇಶದ ಗುರುದ್ವಾರದಲ್ಲಿ ಹಿಂಸಾತ್ಮಕ ಘರ್ಷಣೆ ಭುಗಿಲೆದ್ದ ನಂತರ ಕನಿಷ್ಠ 11 ಜನರು ಗಾಯಗೊಂಡಿದ್ದಾರೆ. ಧಾರ್ಮಿಕ ಆವರಣದೊಳಗೆ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿರುವ ದೃಶ್ಯದ ವಿಡಿಯೋಗಳು ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿವೆ.

ಗಲಾಟೆಯಲ್ಲಿ ಚಾಕುಗಳು ಮತ್ತು ಕಿರ್ಪಾನ್‌ಗಳು ಸೇರಿದಂತೆ ಚೂಪಾದ ವಸ್ತುಗಳು ಝಳಪಿಸಿವೆ. ಈ ಘರ್ಷಣೆಯಲ್ಲಿ ಸುಮಾರು 40 ಜನರು ಭಾಗಿಯಾಗಿದ್ದರು ಎನ್ನಲಾಗಿದೆ.ಧಾರ್ಮಿಕ ಆವರಣದಲ್ಲಿ ಬ್ಲೇಡ್ ಜೊತೆಗೆ ಆಯುಧಗಳು, ಪೆಪ್ಪರ್ ಸ್ಪ್ರೇ ಮತ್ತು ಬಂದೂಕನ್ನು ಸಹ ಬಳಸಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ವರದಿ ಮಾಡಿದ್ದಾರೆ.

ರಕ್ತಸಿಕ್ತ ಘರ್ಷಣೆಗೆ ಕಾರಣ ಏನೆಂಬ ಬಗ್ಗೆ ತನಿಖೆ ನಡೆಯುತ್ತಿದೆ. ಹೊಸ ನಿರ್ದೇಶಕರ ಮಂಡಳಿಯ ಚುನಾವಣೆಯಿಂದ ಘರ್ಷಣೆ ಉಂಟಾಗಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ವಿವಾದಗಳು ಗುರುದ್ವಾರ ನಿಧಿಗಳನ್ನು ಸಹ ಒಳಗೊಂಡಿವೆ ಎಂದು ವರದಿಯಾಗಿದೆ. ಘರ್ಷಣೆ ಪ್ರಕರಣದಲ್ಲಿ ಓರ್ವ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

### ಫುಜ್ವಾ-ಎ-ಹಿಂದ್ ಸಂಚು ಪ್ರಕರಣದಲ್ಲಿ ಇಬ್ಬರ ಬಂಧನ

**ಅಹಮದಾಬಾದ್:** ದೇಶ ವಿರೋಧಿ ಚಟುವಟಿಕೆಗಳನ್ನು ನಡೆಸಲು ಸಂಚು ರೂಪಿಸಿದ್ದಕ್ಕಾಗಿ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಜನರನ್ನು ಮೂಲಭೂತವಾದಿಗಳನ್ನಾಗಿ ಮಾಡುವ ಮೂಲಕ ದೇಶದ ವಿರುದ್ಧ ಯುದ್ಧ ಸಾರಲು ಯತ್ನಿಸಿದ ಆರೋಪದ ಮೇಲೆ ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಇಬ್ಬರನ್ನು ಬಂಧಿಸಿದೆ.

ಎಟಿಎಸ್ ಪ್ರಕಾರ, ಆರೋಪಿಗಳು ಫುಜ್ವಾ-ಎ-ಹಿಂದ್ ಎಂಬ ಭಯೋತ್ಪಾದಕ ಜಾಲವನ್ನು ರಚಿಸಲು ಯೋಜಿಸುತ್ತಿದ್ದರು. ಅವರು ಆರ್‌ಡಿಎಕ್ಸ್ ಸ್ಫೋಟಕಗಳನ್ನು ಬಳಸಲು, ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಸಂಬಂಧಿಸಿದ ರಾಜಕೀಯ ನಾಯಕರನ್ನು ಗುರಿಯಾಗಿಸಲು ಸಂಚು ರೂಪಿಸಿದ್ದರು, ತಮ್ಮ ಉದ್ದೇಶಗಳನ್ನು ಪೂರೈಸಲು ಆನ್‌ಲೈನ್‌ನಲ್ಲಿ ಯುವಕರನ್ನು ನೇಮಿಸಿಕೊಳ್ಳಲು ಚಿಂತಿಸಿದ್ದರು ಎಂದು ಆರೋಪಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪಠಾಣ್ ಜಿಲ್ಲೆಯ ಸಿದ್ಧಾಪುರದ ನಿವಾಸಿ ಇರ್ಫಾನ್ ಕಲೇಖಾನ್ ಪಠಾಣ್ (22) ಬಗ್ಗೆ ನಿರ್ದಿಷ್ಟ ಮಾಹಿತಿ ದೊರೆತಿದ್ದು, ಈತ ತೀವ್ರವಾದಿ ಇಸ್ಲಾಮಿಕ್ ಸಿದ್ಧಾಂತದಿಂದ ಪ್ರಭಾವಿತನಾಗಿದ್ದನೆಂದು ಹೇಳಲಾಗಿದೆ. ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿದ ಎಟಿಎಸ್ ಅಧಿಕಾರಿಗಳು ಪಠಾಣ್ ಅನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

### ತ್ರಿಶೂರ್‌ನಲ್ಲಿ ಪಟಾಕಿಗಳ ಸ್ಫೋಟ: 10 ಜನ ಸಾವು, ಹಲವರಿಗೆ ಗಾಯ

**ತ್ರಿಶೂರ್:** ಕೇರಳದ ತ್ರಿಶೂರ್ ಜಿಲ್ಲೆಯ ಮುಂಡತ್ತಿಕೋಡ್‌ನಲ್ಲಿ ಸಂಭವಿಸಿದ ಪಟಾಕಿಗಳ ಸ್ಫೋಟದಲ್ಲಿ 10 ಜನರು ಸಾವನ್ನಪ್ಪಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ. ಈ ಸ್ಫೋಟ ಸಂಭವಿಸಿದ ತಿರುವಾಂಬಾಡಿ ದೇವಸ್ಥಾನದ ಬಳಿ ಪಟಾಕಿಗಳನ್ನು ಸಂಗ್ರಹಿಸಿ ಇಡಲಾಗಿತ್ತು. ಇದರಿಂದ ಸ್ಫೋಟ ಉಂಟಾಗಿ ಸುತ್ತಲೂ ಬೆಂಕಿ ಆವರಿಸಿದೆ. ಬೆಂಕಿ ಹೊತ್ತಿಕೊಂಡ ಕೂಡಲೆ ಸಾಲುಸಾಲಾಗಿ ಪಟಾಕಿಗಳು ಸ್ಫೋಟಗೊಳ್ಳುವ ಸದ್ದು ಇಡೀ ಊರನ್ನು ಆವರಿಸಿತು.

ಇಲ್ಲಿಯವರೆಗೆ ಸುಮಾರು 13 ಜನರನ್ನು ರಕ್ಷಿಸಲಾಗಿದೆ. ಗಾಯಾಳುಗಳಲ್ಲಿ 8 ಜನ ಗಂಭೀರ ಸ್ಥಿತಿಯಲ್ಲಿದ್ದಾರೆ. ಕನಿಷ್ಠ 40 ಜನರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ನ್ಯೂಸ್ 18 ವರದಿ ಮಾಡಿದೆ. ಪೂರಂಗಾಗಿ ಸಿದ್ಧತೆ ನಡೆಸುತ್ತಿದ್ದಾಗ ಈ ಅಪಘಾತ ಸಂಭವಿಸಿದೆ. ಪೂರಂಗಾಗಿ ಪಟಾಕಿ ಸಾಮಗ್ರಿಗಳನ್ನು ಅಲ್ಲಿ ಸಂಗ್ರಹಿಸಲಾಗಿತ್ತು. ಸ್ಥಳಕ್ಕೆ ತುರ್ತು ಸೇವೆಗಳನ್ನು ನಿಯೋಜಿಸಲಾಗಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸ್ಫೋಟದ ನಿಖರವಾದ ಕಾರಣವನ್ನು ಅಧಿಕಾರಿಗಳು ಇನ್ನೂ ಖಚಿತಪಡಿಸಿಲ್ಲ.

# ಇರಾನ್‌ಗೆ ಚೀನಾದಿಂದ ಮಿಲಿಟರಿ ಬೆಂಬಲ ದೊರೆಯುತ್ತಿದೆ: ನಿಕ್ಕಿ ಹ್ಯಾಲಿ

### ಇರಾನ್ ಹಡಗಿನಲ್ಲಿ ಚೀನಾದಿಂದ ಟೆಹ್ರಾನ್‌ಗೆ ಕ್ಷಿಪಣಿ ರಾಸಾಯನಿಕಗಳನ್ನು ಸಾಗಿಸಲಾಗುತ್ತಿತ್ತು ಎಂದು ಗಂಭೀರ ಆರೋಪ

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆಯ ನಡುವೆ ಅಮೆರಿಕಾ ವಿರುದ್ಧದ ಯುದ್ಧದಲ್ಲಿ ಇರಾನ್ ಗೆ ಚೀನಾದ ಮಿಲಿಟರಿ ಬೆಂಬಲವಿದೆ ಎಂಬ ಆರೋಪಗಳು ಪದೇ ಪದೇ ಕೇಳಿಬರುತ್ತಿದೆ. ಇದನ್ನು ಚೀನಾ ನಿರಂತರವಾಗಿ ತಳ್ಳಿ ಹಾಕುತ್ತಿದೆ. ಆದಾಗ್ಯೂ, ಇತ್ತೀಚೆಗೆ ಹೊರ್ಮುಜ್ ಜಲಸಂಧಿಯಲ್ಲಿ ಯುಎಸ್ ದಿಗ್ಬಂಧನವನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಅಮೆರಿಕಾದ ನೌಕಾಪಡೆಗಳು ಸೆರೆಹಿಡಿದ ಇರಾನ್‌ನ ಧ್ವಜವಿದ್ದ ಹಡಗಿನಲ್ಲಿ ಚೀನಾದಿಂದ ರವಾನೆಯಾಗುತ್ತಿದ್ದ ಕ್ಷಿಪಣಿ ರಾಸಾಯನಿಕಗಳಿದ್ದವು ಎಂದು ಅಮೆರಿಕಾದ ರಿಪಬ್ಲಿಕನ್ ಪಕ್ಷದ ಸದಸ್ಯೆ ನಿಕ್ಕಿ ಹ್ಯಾಲಿ ಆರೋಪಿಸಿದ್ದಾರೆ.

- **ಎಂದು ಗಂಭೀರ ಆರೋಪ ಮಾಡಿದ ರಿಪಬ್ಲಿಕನ್ ಸದಸ್ಯೆ ನಿಕ್ಕಿ ಹ್ಯಾಲಿ**
- **ಹೊರ್ಮುಜ್‌ನಲ್ಲಿ ಯುಎಸ್ ಸೆರೆಹಿಡಿದ ಇರಾನಿ ಹಡಗಿನಲ್ಲಿ ಚೀನಾದಿಂದ ಕ್ಷಿಪಣಿ ರಾಸಾಯನಿಕ ಸಾಗಿ ಸಲಾಗುತ್ತಿತ್ತು ಎಂದು ಆರೋಪ**

**ಇರಾನ್ ಹಡಗಿನಲ್ಲಿ ಚೀನಾದ ಕ್ಷಿಪಣೆ ರಾಸಾಯನಿಕ ಪತ್ತೆ:** ಟ್ರಂಪ್ ಆಡಳಿತದ ಪಕ್ಷವಾಗಿರುವ ರಿಪಬ್ಲಿಕನ್ ಪಾರ್ಟಿಯ ಸದಸ್ಯೆಯಾಗಿರುವ ಭಾರತೀಯ ಮೂಲದ ನಿಕ್ಕಿ ಹ್ಯಾಲಿ ಹೊರ್ಮುಜ್‌ನಲ್ಲಿ ಸೆರೆ ಹಿಡಿದ ಹಡಗಿನ ಕುರಿತು ತಮ್ಮ ಅಧಿಕೃತ ಎಕ್ಸ್ ಖಾತೆಯ ಮೂಲಕ ಗಂಭೀರ ಆರೋಪವನ್ನು ಮಾಡಿದ್ದಾರೆ. ಈ ಕುರಿತು ಈ ವಾರಾಂತ್ಯದಲ್ಲಿ ಹೊರ್ಮುಜ್ ಜಲಸಂಧಿಯಲ್ಲಿ ಅಮೆರಿಕಾ ಸೆರೆಹಿಡಿದಿರುವ ಹಡಗು ತನ್ನ ಸಂಚಾರವನ್ನು ನಿಲ್ಲಿಸಲು ಆದೇಶ ನೀಡಿದಾಗ್ಯೂ, ಚೀನಾದ ಕ್ಷಿಪಣೆ ರಾಸಾಯನಿಕಗಳನ್ನು ಹೊತ್ತು ಇರಾನ್ ನತ್ತ ಸಾಗಿಸುತ್ತಿತ್ತು ಎಂದಿದ್ದಾರೆ. ಮುಂದುವರೆದು, ಇದು ಚೀನಾದಿಂದ ಇರಾನ್ ಗೆ ಸಿಗುತ್ತಿರುವ ಮಿಲಿಟರಿ ಬೆಂಬಲಕ್ಕೆ ಸಾಕ್ಷಿಯಾಗಿದೆ ಎಂದು ಹೇಳಿದ್ದು, ಇರಾನ್ ನ ಆಡಳಿತ ಸಜ್ಜಾಗಲು ಚೀನಾದಿಂದ ಮಿಲಿಟರಿ ಬೆಂಬಲ ಪೂರೈಕೆಯಾಗುತ್ತಿದೆ ಎಂಬುದಕ್ಕೆ ಇದು ಮತ್ತೊಂದು ನಿದರ್ಶನವಾಗಿದ್ದು, ಇದು ನಿರ್ಲಕ್ಷಿಸಲಾಗದಂತಹ ವಾಸ್ತವವಾಗಿದೆ ಎಂದು ಬರೆದುಕೊಂಡಿದ್ದಾರೆ.

**ಇರಾನ್ ಹಡಗು ಸೆರೆಹಿಡಿದ ಯುಎಸ್ ನೌಕಾಪಡೆ**

**ಹೊರ್ಮುಜ್ ಜಲಸಂಧಿಯಲ್ಲಿ ಯುಎಸ್ ದಿಗ್ಬಂಧನ ವಿಧಿಸಿದ್ದು, ಇದನ್ನು ಉಲ್ಲಂಘಿಸಿ ಸಂಚರಿಸಲು ಪ್ರಯತ್ನಿಸಿದ ಇರಾನ್ ಧ್ವಜಹೊತ್ತಿದ್ದ ಟೌಸ್ಕಾ ಕಂಟೇನರ್ ಹಡಗನ್ನು ಸೆರೆಹಿಡಿದಿರುವುದಾಗಿ ಅಮೆರಿಕಾ ತಿಳಿಸಿದೆ. ಈ ಕುರಿತು ಪ್ರತಿಕ್ರಿಯೆ ನೀಡಿರುವ ಇರಾನ್ ವಿದೇಶಾಂಗ ಸಚಿವಾಲಯ ಅಮೆರಿಕಾ ಈ ಕ್ರಮವನ್ನು ಅಂತಾರಾಷ್ಟ್ರೀಯ ಕಾನೂನು ಮತ್ತು ಕದನ ವಿರಾಮ ಒಪ್ಪಂದ ಎರಡನ್ನೂ ಉಲ್ಲಂಘಿಸುವ ಕಾನೂನುಬಾಹಿರ ಮತ್ತು ಅನಾಗರಿಕ ಕೃತ್ಯ ಎಂದು ಕರೆದಿದ್ದು, ಹಡುಗು ಸೇರಿದಂತೆ ಅದರಲ್ಲಿದ್ದ ಸಿಬ್ಬಂದಿ ಮತ್ತು ಅವರ ಕುಟುಂಬಗಳನ್ನು ಅಪಹರಿಸಿದೆ ಎಂದು ಆರೋಪಿಸಿದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮತ್ತು ಅಂತಾರಾಷ್ಟ್ರೀಯ ಕಡಲ ಸಂಸ್ಥೆಗೆ ಔಪಚಾರಿಕ ದೂರು ದಾಖಲಿಸಿದೆ.**



**ಇರಾನ್ ಗೆ ಮಿಲಿಟರಿ ಬೆಂಬಲ ನೀಡಿಲ್ಲ ಎಂದು ಪ್ರತಿಪಾದಿಸುತ್ತಿರುವ ಚೀನಾ**

**ಇತ್ತ, ಚೀನಾದಿಂದ ಇರಾನ್ ಗೆ ಮಿಲಿಟರಿ ಸೌಲಭ್ಯಗಳು ದೊರೆಯುತ್ತಿವೆ ಎಂಬ ಆರೋಪಗಳ ಬೆನ್ನಲ್ಲೇ, ನಿಕ್ಕಿ ಹ್ಯಾಲಿ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಆದಾಗ್ಯೂ, ಈ ಕುರಿತು ಈಗಾಗಲೇ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಮ್ಮೆ ಪ್ರಸ್ತಾಪಿಸಿದ್ದು, ಚೀನಾದ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರೊಂದಿಗೆ ನೇರ ಪತ್ರವನ್ನು ಹಂಚಿಕೊಂಡಿದ್ದು, ಇರಾನ್ ಗೆ ಮಿಲಿಟರಿ ಬೆಂಬಲ ನೀಡದಂತೆ ಒತ್ತಾಯಿಸಿದ್ದು, ಇದಕ್ಕೆ ಚೀನಾ ಅಧ್ಯಕ್ಷರು ಸಹ ಬೀಜಿಂಗ್ ಅಂತಹ ಕೆಲಸ ಮಾಡುತ್ತಿಲ್ಲ ಎಂಬುದಾಗಿ ಭರವಸೆ ನೀಡಿದ್ದಾರೆ ಎಂದಿದ್ದರು. ಅಲ್ಲದೆ, ಚೀನಾ ಈ ಹಿಂದೆ ಸಹ ಈ ಕುರಿತಂತೆ ಪ್ರತಿಕ್ರಿಯಿಸಿ ಚೀನಾ ಸಂಘರ್ಷದಲ್ಲಿ ಭಾಗಿಯಾಗಿರುವ ಯಾವುದೇ ಪಕ್ಷಕ್ಕೆ ಎಂದಿಗೂ ಶಸ್ತ್ರಾಸ್ತ್ರಗಳನ್ನು ಒದಗಿಸಿಲ್ಲ. ಹಾಗಾಗಿ ಆಧಾರರಹಿತ ಆರೋಪಗಳನ್ನು ಮಾಡುವುದರಿಂದ, ದುರುದ್ದೇಶಪೂರಿತ ಸಂಪರ್ಕಗಳನ್ನು ಸೆಳೆಯುವುದರಿಂದ ಮತ್ತು ಉದ್ರೇಕಕಾರಿತ್ವದಲ್ಲಿ ತೊಡಗಿಕೊಳ್ಳುವುದರಿಂದ ದೂರವಿರಲು ನಾವು ಅಮೆರಿಕಾವನ್ನು ಒತ್ತಾಯಿಸುತ್ತೇವೆ ಎಂದು ಸ್ಪಷ್ಟನೆ ನೀಡಿತ್ತು. ಆದಾಗ್ಯೂ, ನಿರಂತರವಾಗಿ ಟ್ರಂಪ್ ಪಕ್ಷದ ನಾಯಕರು ಚೀನಾದ ಮೇಲೆ ಈ ಆರೋಪಗಳನ್ನು ಮಾಡುತ್ತಿದ್ದು, ಇದು ಉಭಯದೇಶಗಳ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಹದಗೆಡಿಸುವ ಸಾಧ್ಯತೆ ಇದೆ.**

# ಧುರಂಧರ್ 2 ನಿಲ್ಲಿಸುವಂತೆ ಆಗ್ರಹ

ಕೆಲವರು 'ಧುರಂಧರ್ 2' ಸಿನಿಮಾವನ್ನು ಟೀಕೆ ಸಹ ಮಾಡುತ್ತಿದ್ದು, ಇದೊಂದು ಪ್ರಾಪಗಾಂಡ ಸಿನಿಮಾ ಎನ್ನುತ್ತಿದ್ದಾರೆ. ಜೊತೆಗೆ ಸಿನಿಮಾ ಪ್ರದರ್ಶನ ನಿಲ್ಲಿಸುವ ಪ್ರಯತ್ನಗಳು ಸಹ ಅಲ್ಲಲ್ಲಿ ನಡೆಯುತ್ತಿವೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಸಿನಿಮಾ ಪ್ರದರ್ಶನ ನಿಲ್ಲಿಸುವಂತೆ ಆಗ್ರಹಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಇದೀಗ ಉತ್ತರ ಪ್ರದೇಶದಲ್ಲಿ ಸಿನಿಮಾದ ವಿರುದ್ಧ ಹೈಕೋರ್ಟ್ ಮೊರೆ ಹೋಗಲಾಗಿದೆ.

ರಣ್ವೀರ್ ಸಿಂಗ್ ನಟನೆಯ 'ಧುರಂಧರ್ 2' ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹಲವು ದಾಖಲೆಗಳನ್ನು ಬರೆಯುತ್ತಿದೆ. ಸಿನಿಮಾ ಬಿಡುಗಡೆ ಆಗಿ ತಿಂಗಳ ಮೇಲಾದರೂ ಸಾವಿರಾರು ಚಿತ್ರಮಂದಿರಗಳಲ್ಲಿ ಇನ್ನೂ ಪ್ರದರ್ಶನ ಕಾಣುತ್ತಿದೆ. ಸಿನಿಮಾ ಬಗ್ಗೆ ಸ್ವತಃ ಪ್ರಧಾನಿ ಮೋದಿ ಅವರೇ ಹೊಗಳಿದ್ದಾರೆ.

ಇದೆಲ್ಲದರ ಜೊತೆಗೆ ಕೆಲವರು ಸಿನಿಮಾವನ್ನು ಟೀಕೆ ಸಹ ಮಾಡುತ್ತಿದ್ದು, ಇದೊಂದು ಪ್ರಾಪಗಾಂಡ ಸಿನಿಮಾ ಎನ್ನುತ್ತಿದ್ದಾರೆ.

ಜೊತೆಗೆ ಸಿನಿಮಾ ಪ್ರದರ್ಶನ ನಿಲ್ಲಿಸುವ ಪ್ರಯತ್ನಗಳು ಸಹ ಅಲ್ಲಲ್ಲಿ ನಡೆಯುತ್ತಿವೆ. ಇತ್ತೀಚೆಗೆ ತಮಿಳುನಾಡಿನಲ್ಲಿ ಸಿನಿಮಾ ಪ್ರದರ್ಶನ ನಿಲ್ಲಿಸುವಂತೆ ಆಗ್ರಹಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಇದೀಗ ಉತ್ತರ ಪ್ರದೇಶದಲ್ಲಿ ಸಿನಿಮಾದ ವಿರುದ್ಧ ಹೈಕೋರ್ಟ್ ಮೊರೆ ಹೋಗಲಾಗಿದೆ.


'ಧುರಂಧರ್ 2' ಸಿನಿಮಾ ಕಾಲ್ಪನಿಕ ಕತೆಯಾದರೂ ಹಲವು ನಿಜ ವ್ಯಕ್ತಿಗಳ ಪಾತ್ರಗಳು ಸಿನಿಮಾನಲ್ಲಿವೆ. ಭೂಗತ ಪಾತಕಿ ದಾವೂದ್ ಇಬ್ರಾಹಿಂ, ಪಾಕಿಸ್ತಾನದ ಹಲವು ಉಗ್ರ ಸಂಘಟನೆ ಮುಖಂಡರು, ಪಾಕ್‌ನ ರಾಜಕಾರಣಿ, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಉತ್ತರ ಪ್ರದೇಶದ ಮಾಜಿ ಸಂಸದ ಅತೀಕ್ ಅಹ್ಮದ್ ಇನ್ನೂ ಕೆಲವರ ಪಾತ್ರಗಳು ಸಿನಿಮಾನಲ್ಲಿವೆ. ಇದೀಗ ಅತೀಕ್ ಅಸ್ಲಂ ಪಾತ್ರದ ಕುರಿತಾಗಿ ಕೆಲವರು ಆಕ್ಷೇಪ ಎತ್ತಿ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದಾರೆ. 'ಧುರಂಧರ್ 2' ಸಿನಿಮಾನಲ್ಲಿ ಮಾಜಿ ಸಂಸದ ಮತ್ತು ರೌಡಿಯಾಗಿಯೂ ಕುಖ್ಯಾತಿ ಪಡೆದಿದ್ದ ಅತೀಕ್ ಅಹ್ಮದ್ ಅನ್ನು ಪಾಕಿಸ್ತಾನದ ಜೊತೆಗೆ ಸಂಬಂಧ ಹೊಂದಿದ್ದ ವ್ಯಕ್ತಿಯಾಗಿ ತೋರಿಸಲಾಗಿದೆ. ಸಿನಿಮಾನಲ್ಲಿ ಆತನ ಕೊಲೆಯನ್ನು ರಾಷ್ಟ್ರೀಯ ಗುಪ್ತಚರ ಇಲಾಖೆ ಮಾಡಿಸಿದೆ ಎಂದು ತೋರಿಸಲಾಗಿದೆ.



# ಕೆಜಿಎಫ್ 3 ಸಿನಿಮಾ ಬಗ್ಗೆ ಯಶ್ ಮಾತು

ಯಶ್ ನಟಿಸಿರುವ 'ರಾಮಾಯಣ' ಮತ್ತು 'ಟಾಕ್ಸಿಕ್' ಸಿನಿಮಾಗಳು ಈ ವರ್ಷ ಬಿಡುಗಡೆ ಆಗಲಿವೆ. ಇವುಗಳ ಜೊತೆಗೆ ಯಶ್ ಅವರ ಅಭಿಮಾನಿಗಳಿಗೆ, ಸದಾ ಒಂದು ಪ್ರಶ್ನೆ ಇದ್ದಿದ್ದೇ, ಅದುವೇ 'ಕೆಜಿಎಫ್ 3'ನದ್ದು. ಹೊಂಬಾಳೆ ಫಿಲಮ್ಸ್ ಹಾಗೂ ಪ್ರಶಾಂತ್ ನೀಲ್ ಸಹ ಹಿಂದೆ 'ಕೆಜಿಎಫ್ 3' ಬಗ್ಗೆ ಮಾತನಾಡಿದ್ದರು. ಇದೀಗ ಸ್ವತಃ ಯಶ್ ಅವರು 'ಕೆಜಿಎಫ್ 3' ಸಿನಿಮಾದ ಬಗ್ಗೆ ಮಾತನಾಡಿದ್ದಾರೆ. ಯಶ್ ನಟನೆಯ 'ಟಾಕ್ಸಿಕ್' ಮತ್ತು 'ರಾಮಾಯಣ' ಎರಡೂ ಸಿನಿಮಾಗಳು ಈ ವರ್ಷದ ಬಹು ನಿರೀಕ್ಷಿತ ಸಿನಿಮಾಗಳು ಎನಿಸಿಕೊಂಡಿವೆ. ಅದರಲ್ಲೂ ಯಶ್ ಅವರ 'ಟಾಕ್ಸಿಕ್' ಬಿಡುಗಡೆ ಹತ್ತಿರದಲ್ಲೇ ಇದ್ದು, ಈ ಸಿನಿಮಾದ ಬಗ್ಗೆಯಂತೂ ಭಾರತದಲ್ಲಿ ಮಾತ್ರವಲ್ಲ, ವಿದೇಶದಲ್ಲೂ ನಿರೀಕ್ಷೆ ಇದೆ. 'ರಾಮಾಯಣ' ಸಿನಿಮಾ ಸಹ ವಿಶ್ವದಾದ್ಯಂತ ಭಾರಿ ಅದ್ದೂರಿಯಾಗಿ ಬಿಡುಗಡೆ ಆಗಲು ಸಜ್ಜಾಗುತ್ತಿದೆ. 'ಕೆಜಿಎಫ್ 3' ಸಿನಿಮಾ ಆಗುತ್ತದೆಯೋ ಇಲ್ಲವೋ ಎಂಬ ಅನುಮಾನ ಹಲವರಿಗೆ ಇದೆ.

ಇದೀಗ ನಟ ಯಶ್ ಅವರು 'ಕೆಜಿಎಫ್: ಚಾಪ್ಟರ್ 3' ಸಿನಿಮಾ ಖಂಡಿತವಾಗಿಯೂ ನಡೆಯುತ್ತದೆ ಎಂದು ಭರವಸೆ ನೀಡಿದ್ದಾರೆ. ಆದರೆ ಅದು ಸನಿಹ ಭವಿಷತ್ನಲ್ಲಿ ಸಾಧ್ಯವಿಲ್ಲ ಎಂದು ಸಹ ಖಚಿತಪಡಿಸಿದ್ದಾರೆ. ಯಶ್ ಪ್ರಸ್ತುತ ತಮ್ಮ ಮುಂಬರುವ ಚಿತ್ರಗಳಾದ 'ಟಾಕ್ಸಿಕ್' ಮತ್ತು ನಿತೇಶ್ ತಿವಾರಿ ನಿರ್ದೇಶನದ 'ರಾಮಾಯಣ' ಚಿತ್ರಗಳ ಮೇಲೆ ಗಮನ ಹರಿಸುತ್ತಿದ್ದು, 'ಕೆಜಿಎಫ್ 3' ಬಗ್ಗೆ ಸದ್ಯಕ್ಕೆ ಯೋಚನೆ ಮಾಡಿಲ್ಲ ಎಂದು ಹೇಳಿದ್ದಾರೆ. 'ಸದ್ಯಕ್ಕೆ ನಾನು 'ಟಾಕ್ಸಿಕ್', 'ರಾಮಾಯಣ' ಮತ್ತು 'ರಾಮಾಯಣ 2' ಸಿನಿಮಾಗಳ ಮೇಲೆ ಮಾತ್ರವೇ ಗಮನ ಹರಿಸಿದ್ದೇನೆ ಎಂದಿದ್ದಾರೆ.



# ಎನ್‌ಟಿಆರ್-ನೀಲ್ ಸಿನಿಮಾ ರಿಲೀಸ್ ದಿನಾಂಕ ಘೋಷಣೆ



ಜೂನಿಯರ್ ಎನ್‌ಟಿಆರ್ ಮತ್ತು ಪ್ರಶಾಂತ್ ನೀಲ್ ಕಾಂಬಿನೇಷನ್ ಚಿತ್ರ 2027ರ ಜೂನ್ 11ರಂದು ತೆರೆಗೆ ಬರಲಿದೆ. ಇದು ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದೆ. ಹಲವು ವರ್ಷಗಳ ಹಿಂದೆ ಘೋಷಣೆಯಾಗಿದ್ದ ಈ ಸಿನಿಮಾ ಶೂಟಿಂಗ್ ವಿವಿಧ ಹಂತಗಳಲ್ಲಿ ನಡೆದಿದೆ. ಟೈಟಲ್ ಇನ್ನೂ ಬಹಿರಂಗವಾಗಿಲ್ಲ. ಮೈತ್ರಿ ಮೂವೀ ಮೇಕರ್ಸ್ ನಿರ್ಮಾಣದ ಅದ್ದೂರಿ ಬಜೆಟ್ ಚಿತ್ರ ಇದಾಗಿದ್ದು, ಇನ್ನಷ್ಟು ಚಿತ್ರೀಕರಣ ಬಾಕಿ ಇದೆ.

ಜೂನಿಯರ್ ಎನ್‌ಟಿಆರ್ ಹಾಗೂ ಪ್ರಶಾಂತ್ ನೀಲ್ ಸಿನಿಮಾ ಘೋಷಣೆ ಆಗಿದ್ದು ಕೆಲವು ವರ್ಷಗಳ ಹಿಂದೆ. ಆ ಬಳಿಕ, ಸಿನಿಮಾ ಸೆಟ್ಟೇರಲು ಬಹಳ ಸಯಮ ತೆಗೆದುಕೊಂಡಿತು. ಈ ಚಿತ್ರದ ಶೂಟಿಂಗ್ ಆರಂಭ ಆಗಿ ಸಾಕಷ್ಟು ಸಮಯ ಕಳೆದಿದೆ. ಆದರೆ, ಈವರೆಗೆ ಸಿನಿಮಾದ ರಿಲೀಸ್ ದಿನಾಂಕ ಹಾಗೂ ಟೈಟಲ್ ರಿವೀಲ್ ಆಗಿರಲಿಲ್ಲ. ಈಗ ಈ ಚಿತ್ರದ ಬಿಡುಗಡೆ ದಿನಾಂಕವನ್ನು ತಂಡ ಘೋಷಣೆ ಮಾಡಿದೆ. ಈ ಇತ್ರ ಜೂನ್ 11ರಂದು ತೆರೆಗೆ ಬರಲಿದೆ!

ಈ ಸಿನಿಮಾಗೆ ಟೈಟಲ್ ಇನ್ನೂ ರಿವೀಲ್ ಆಗಿಲ್ಲ. ಜೂನ್ 4ರಂದು 'ಟಾಕ್ಸಿಕ್' ರಿಲೀಸ್ ಆಗುತ್ತಿದೆ. ಜೂನ್ 11ರಂದು 'ಎನ್‌ಟಿಆರ್‌ನೀಲ್' ಸಿನಿಮಾ ಬರಲು ಹೇಗೆ ಸಾಧ್ಯ ಎಂಬ ಪ್ರಶ್ನೆ ನಿಮ್ಮದೇ ಅದಕ್ಕೆ ಉತ್ತರ ಇದೆ. ಎನ್‌ಟಿಆರ್ ನೀಲ್ ಚಿತ್ರ ಈ ವರ್ಷ ಅಲ್ಲ, ಅದು ತೆರೆಗೆ ಬರುತ್ತಿರುವುದು 2027ರ ಜೂನ್ 11ರಂದು. ಅಂದರೆ ಒಂದು ವರ್ಷಗಳಿಗೂ ಅಧಿಕ ಕಾಲ ಈ ಸಿನಿಮಾಗಾಗಿ ಅಭಿಮಾನಿಗಳಿಗೆ ಕಾಯಬೇಕು. ಇದು ಅಭಿಮಾನಿಗಳ ಬೇಸರಕ್ಕೆ ಕಾರಣ ಆಗಿದೆ. ಪ್ರಶಾಂತ್ ನೀಲ್ ಅವರ ಸಿನಿಮಾ ಶೂಟ್ 2025ರಲ್ಲೇ ಆರಂಭ ಆಗಿದೆ.

# ಅವಳನ್ನು ಕೇಳುವಷ್ಟು ಧೈರ್ಯ ಇಲ್ಲ



ಅಮಿತಾಭ್ ಪುತ್ರನೆಂಬ ಹಣೆಪಟ್ಟಿ ಅಭಿಷೇಕ್ ಬಚ್ಚನ್ ವೃತ್ತಿಜೀವನಕ್ಕೆ ಅಡ್ಡಿಯಾಗಿದೆ. ತನ್ನ ಸಿನಿಮಾಗಳ ಬಗ್ಗೆ ಮಗಳು ಆರಾಧ್ಯಳ ಅಭಿಪ್ರಾಯ ಕೇಳಲು ತನಗೆ ಧೈರ್ಯವಿಲ್ಲ ಎಂದು ಅಭಿಷೇಕ್ ಹೇಳಿದ್ದಾರೆ.

ಇಂದಿನ ಮಕ್ಕಳು ಆತ್ಮವಿಶ್ವಾಸದಿಂದ ಮತ್ತು ಸ್ಪಷ್ಟವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ಅವರು ಶ್ಲಾಘಿಸಿದ್ದಾರೆ. ಆರಾಧ್ಯಳ ಪ್ರತಿಕ್ರಿಯೆ ತನ್ನ ಕೆಲಸದ ಮೇಲೆ ಪ್ರಭಾವ ಬೀರಬಹುದೆಂಬ ಭಯ ಅವರಿಗೆ ಇದೆ. ಅಮಿತಾಭ್ ಬಚ್ಚನ್ ಮಗ ಎಂಬ ಹಣೆಪಟ್ಟಿಯೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ಅಭಿಷೇಕ್ ಬಚ್ಚನ್ ಹಲವು ಏರಿಳಿತ ಕಂಡರು. ಎಲ್ಲರೂ ಅವರನ್ನು ಅಮಿತಾಭ್ ಬಚ್ಚನ್ ಅವರೊಂದಿಗೆ ಹೋಲಿಕೆ ಮಾಡುತ್ತಾರೆ. ಇದು ಅವರ ವೃತ್ತಿ ಜೀವನಕ್ಕೆ ಸಾಕಷ್ಟು ಹಿನ್ನಡೆ ತಂದಿದೆ. ಇನ್ನು, ಯಾವುದೇ ಸ್ಟಾರ್ ನಿರ್ದೇಶಕರು ಅವರಿಗೆ ಸಿನಿಮಾ ಆಫರ್ ನೀಡುತ್ತಿಲ್ಲ. ಈ ಮೊದಲು ನಟಿಸಿದ ಸಿನಿಮಾಗಳ ಪೈಕಿ ಕೆಲವು ಒಳ್ಳೆಯ ಸಿನಿಮಾಗಳಿವೆ. ಹಾಗಾದರೆ, ಅಭಿಷೇಕ್ ಸಿನಿಮಾಗಳ ಮೇಲೆ ಮಗಳು ಆರಾಧ್ಯಗೆ ಯಾವ ರೀತಿಯ ಅಭಿಪ್ರಾಯ ಇದೆ ಈ ಪ್ರಶ್ನೆಗೆ ಅಭಿಷೇಕ್ ಉತ್ತರ ನೀಡಿದ್ದಾರೆ. ಸಿನಿಮಾ ನೋಡಿ ಮಗಳು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ಅಭಿಷೇಕ್‌ಗೆ ಕೇಳಲಾಯಿತು. ಈ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಆ ಬಗ್ಗೆ ಮಗಳನ್ನು ಕೇಳಲ್ಲ. ಆ ಪ್ರಶ್ನೆ ನನ್ನ ತಲೆಯಲ್ಲೇ ಇರಲು ಬಿಡುತ್ತೇನೆ. ಅವಳು ಸಿನಿಮಾ ಇಷ್ಟಪಟ್ಟಿದ್ದೇನೆ ಅಥವಾ ಇಷ್ಟಪಟ್ಟಿಲ್ಲ ಎಂಬುದರಲ್ಲಿ ಒಂದನ್ನು ಹೇಳುತ್ತಾಳೆ. ಅದು ನನ್ನ ಕೆಲಸದ ವಿಧಾನವನ್ನು ಬದಲಿಸುತ್ತದೆ. ನಾನು ಅವಳನ್ನು ಈ ಬಗ್ಗೆ ಕೇಳುವುದಿಲ್ಲ, ಏಕೆಂದರೆ ಅವಳ ಉತ್ತರ ಕೇಳುವಷ್ಟು ಧೈರ್ಯ ನನಗೆ ಇಲ್ಲ' ಎಂದಿದ್ದಾರೆ ಅವರು. 'ಇಂದಿನ ಮಕ್ಕಳು ತುಂಬಾ ಆತ್ಮವಿಶ್ವಾಸ ಹೊಂದಿದ್ದಾರೆ. ಅವರಿಗೆ ಏನು ಬೇಕು ಎಂದು ನಿಖರವಾಗಿ ತಿಳಿದಿದೆ. ಅವರು ಅದನ್ನು ತಿಳಿಸುವಲ್ಲಿ ತುಂಬಾ ನಿಪುಣರು. ನನ್ನ ಪೀಳಿಗೆಯ ಜನರಿಗೆ ಹಾಗಲ್ಲ. ಕೆಲವೊಮ್ಮೆ ಕೇಳುವುದು ಕೂಡ ಕಷ್ಟವಾಗಬಹುದು. ಓರ್ವ ಪೋಷಕನಾಗಿ ಅವಳ ಅಭಿಪ್ರಾಯದಿಂದ ನಾನು ನಂಬುವ ಕೆಲಸ ಪ್ರಭಾವಿತ ಆಗದಂತೆ ನೋಡಿಕೊಳ್ಳಲು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ.

# ಪಾಕಿಸ್ತಾನದ ಬಟ್ಟೆ ಬ್ರ್ಯಾಂಡ್ ಜಾಹೀರಾತಿನಲ್ಲಿ ಆಲಿಯಾ



ಆಲಿಯಾ ಭಟ್ ಭಾರತದ ಸ್ಟಾರ್ ನಟಿ, ಹಲವಾರು ಬ್ರ್ಯಾಂಡುಗಳಿಗೆ ಅವರು ರಾಯಭಾರಿ ಸಹ ಆಗಿದ್ದಾರೆ. ಹಲವು ಫ್ಯಾಷನ್ ಶೋಗಳಲ್ಲಿ ರ್‍ಯಾಂಪ್ ವಾಕ್ ಸಹ ಮಾಡಿದ್ದಾರೆ. ಖುದ್ದು ಆಲಿಯಾ ಅವರು ಫ್ಯಾಷನ್ ಬ್ರ್ಯಾಂಡ್ ಒಂದರ ಮಾಲಕಿಯೂ ಹೌದು. ಆದರೆ ಇದೀಗ ಆಲಿಯಾ ಭಟ್ ಅವರು ಪಾಕಿಸ್ತಾನದ ಬಟ್ಟೆ ಬ್ರ್ಯಾಂಡಿನ ಜಾಹೀರಾತುಗಳಲ್ಲಿ ಕಾಣಿಸಿಕೊಂಡಿದ್ದಾರೆ. ವಜಾಯೆಶಾ ಹೆಸರಿನ ಬ್ರ್ಯಾಂಡಿನ ಬಟ್ಟೆಗಳನ್ನು ಧರಿಸಿ ಆಲಿಯಾ ಭಟ್ ಫೋಸು ನೀಡಿದ್ದಾರೆ. ಪಾಕಿಸ್ತಾನದಲ್ಲಿ ಈ ಫೋಟೊಗಳು ವೈರಲ್ ಆಗಿವೆ. ಆದರೆ ನಿಜಾಂಶ ಬೇರೆಯೇ ಇದೆ.

ಅಸಲಿಗೆ ನಟಿ ಆಲಿಯಾ ಭಟ್ ಪಾಕ್ ಬ್ರ್ಯಾಂಡಿಗಾಗಿ ಯಾವುದೇ ಫೋಟೊಶೂಟ್ ಮಾಡಿಸಿಲ್ಲ, ಪಾಕ್ ಬ್ರ್ಯಾಂಡಿನ ಬಟ್ಟೆಗಳನ್ನು ಸಹ ಧರಿಸಿಲ್ಲ. ಆದರೆ ವಜಾಯೆಶಾ ಬ್ರ್ಯಾಂಡಿನವರು ಎಐ ಬಳಸಿ ಆಲಿಯಾ ಅವರ ಚಿತ್ರಗಳನ್ನು ತಿರುಚಿ ತಮ್ಮ ಬಟ್ಟೆಯ ಜಾಹೀರಾತಿಗಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ಚಿತ್ರಗಳು ವೈರಲ್ ಆಗುತ್ತಿದ್ದಂತೆ ಆಲಿಯಾ ಭಟ್ ಅಭಿಮಾನಿಗಳು, ನೆಟ್ಟಿಗರು, ವಜಾಯಿಷಾ ಇನ್‌ಸ್ಟಾಗ್ರಾಂ ಪೇಜಿನಲ್ಲಿ ಛೀಮಾರಿ ಹಾಕಿದ್ದು, ಆಲಿಯಾ ಭಟ್, ಕೇಸು ಹಾಕುವುದು ಖಾತ್ರಿ ಎಂದಿದ್ದಾರೆ. ಆಲಿಯಾ ಭಟ್ ಅವರು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿರುವ ಚಿತ್ರಗಳನ್ನು ಬಳಸಿಕೊಂಡು ಆಲಿಯಾ, ತಮ್ಮ ಬ್ರ್ಯಾಂಡಿನ ಸಲ್ವಾರ್ ಕಮೀಜ್ ಇನ್ನಿತರೆ ಉಡುಗೆಗಳನ್ನು ತೊಟ್ಟು ಫೋಸು ಕೊಡುತ್ತಿರುವಂತೆ ಚಿತ್ರಗಳನ್ನು ಬದಲಾಯಿಸಿ ಬಳಸಲಾಗಿದೆ. ಆಲಿಯಾ ಭಟ್ ಅವರು ಫ್ಯಾಷನ್ ಶೋಗಳಲ್ಲಿ ಮಾಡರ್ನ್ ಡ್ರೆಸ್ ಧರಿಸಿ ತೆಗೆಸಿಕೊಂಡ ಚಿತ್ರಗಳನ್ನು ಸಹ ತಿರುಚಿ ತಮ್ಮ ಉಡುಗೆಗಳನ್ನು ಹಾಕಿಕೊಂಡಿರುವಂತೆ ಬದಲಾಯಿಸಲಾಗಿದೆ.

ಆಲಿಯಾ ಭಟ್ ಅವರು ನ್ಯಾಯಾಲಯದಿಂದ ಪರ್ಸನಾಲಿಟಿ ರೈಟ್ಸ್ ಅನ್ನು ಪಡೆದುಕೊಂಡಿದ್ದಾರೆ. ಅವರ ಅನುಮತಿ ಇಲ್ಲದೆ ಯಾರೂ ಸಹ ಯಾವುದೇ ಕಾರಣಕ್ಕೂ ಸಹ ಅವರ ಚಿತ್ರವನ್ನು, ವಿಡಿಯೋವನ್ನು, ಧ್ವನಿಯನ್ನು, ಅವರ ಹಾವ-ಭಾವದ ನಕಲನ್ನು ಸಹ ಬಳಸುವಂತಿಲ್ಲ. ಆದರೆ ಪಾಕ್‌ನ ಸಂಸ್ಥೆಯೊಂದು ನೇರವಾಗಿ ಚಿತ್ರವನ್ನೇ ಬಳಸಿದೆ.

# ಜಿಟಿ ಸೋಲಲು ಆ ಮೂವರೇ ಕಾರಣ

ಐಪಿಎಲ್ 2026ರ ಕಣದಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟನ್ಸ್ ನಡುವಿನ ಹಣಾಹಣಿ ಎಂದರೆ ಅದು ಕೇವಲ ಎರಡು ತಂಡಗಳ ನಡುವಿನ ಪಂದ್ಯವಲ್ಲ, ಅದು ಪ್ರತಿಷ್ಠೆಯ ಹೋರಾಟ. ಆದರೆ, ಇಂದಿನ ಪಂದ್ಯದಲ್ಲಿ ನಡೆದಿದ್ದೇ ಬೇರೆ. ಮುಂಬೈ ನೀಡಿದ 200 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟಲು ಹೊರಟ ಗುಜರಾತ್ ಟೈಟನ್ಸ್, ತನ್ನ ಶಕ್ತಿಯಾಗಿದ್ದ ಆ ಮೂವರು ಘಟಾನುಘಟಿ ಆಟಗಾರರನ್ನೇ ಅತಿಯಾಗಿ ನಂಬಿತ್ತು. ಆ ತ್ರಿಮೂರ್ತಿಗಳು ಕೈ ಹಿಡಿಯದ ಕಾರಣ 100 ರನ್‌ಗೆ ನೆಲಕಚ್ಚಿತು.

**ವಿಧಿಯಾಟವೇ ಬೇರೆಯಾಗಿತ್ತು:** ಇಡೀ ಕ್ರೀಡಾಂಗಣ ಆ ಮೂವರು ಸ್ಟಾರ್‌ಗಳ ಅಬ್ಬರ ನೋಡಲು ಕಾಯುತ್ತಿತ್ತು. ಆದರೆ, ವಿಧಿಯಾಟವೇ ಬೇರೆಯಾಗಿತ್ತು. ಪಂದ್ಯದ ಆರಂಭದ ಕೆಲವೇ ನಿಮಿಷಗಳಲ್ಲಿ ಆ ಮೂವರು ಅನಿರೀಕ್ಷಿತವಾಗಿ ಪೆವಿಲಿಯನ್ ಸೇರಿದ್ದು ಜಿಟಿ ಪಾಲಿಗೆ ಚೇತರಿಸಿಕೊಳ್ಳಲಾಗದ ಹೊಡೆತ ನೀಡಿತು. ಅಷ್ಟಕ್ಕೂ ಆ ಮೂವರು ಯಾರು ಅಂತಹದ್ದೇನು ತಪ್ಪಾಯಿತು ಇಲ್ಲಿದೆ ಪೂರ್ಣ ವಿವರ.

**ಕೈಕೊಟ್ಟ ಆರಂಭಿಕ ಭರವಸೆ!:** ಯಾವುದೇ ಬೃಹತ್ ಮೊತ್ತವನ್ನು ಚೇಸ್ ಮಾಡುವಾಗ ತಂಡಕ್ಕೆ ಬೇಕಿರುವುದು ಭದ್ರವಾದ ಅಡಿಪಾಯ. ಗುಜರಾತ್ ತಂಡದ ಶಕ್ತಿಯೇ ಅದರ ಟಾಪ್ ಆರ್ಡರ್.

ವಿಶ್ವದ ಶ್ರೇಷ್ಠ ಬ್ಯಾಟರ್‌ಗಳನ್ನೇ ಹೊಂದಿರುವ ಜಿಟಿ, ಇಂದಿನ ಪಂದ್ಯದಲ್ಲಿ ಸುಲಭವಾಗಿ ಗೆಲ್ಲುತ್ತದೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ, ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಎಸೆದ ಬಲೆಯಲ್ಲಿ ಗುಜರಾತ್‌ನ ಈ ಮೂವರು ಪ್ರಮುಖ ಬ್ಯಾಟರ್‌ಗಳು ಒಬ್ಬರ ಹಿಂದೆ ಒಬ್ಬರಂತೆ ಸಿಕ್ಕಿಬಿದ್ದರು.

ಪವರ್‌ಪ್ಲೇ ಮುಗಿಯುವ ಮೊದಲೇ ಈ ಮೂವರು ಪೆವಿಲಿಯನ್ ಸೇರಿದ್ದು ಕೇವಲ ಸೋಲಲ್ಲ, ಅದೊಂದು ಆಘಾತವಾಗಿತ್ತು. ಇವರು ಒಟ್ಟಾಗಿ ಕನಿಷ್ಠ 20 ರನ್ ಕೂಡ ಸೇರಿಸದಿರುವುದು ಇಡೀ ತಂಡದ ಆತ್ಮವಿಶ್ವಾಸವನ್ನೇ ಕುಸಿಯುವಂತೆ ಮಾಡಿತು.

**ಹಾರ್ದಿಕ್ ಪಾಂಡ್ಯರ ಚಾಣಾಕ್ಷ ತಂತ್ರ!:** ಗುಜರಾತ್ ಮುಗ್ಗರಿಸಲು ಕೇವಲ ಬ್ಯಾಟಿಂಗ್ ವೈಫಲ್ಯ ಕಾರಣವಲ್ಲ, ಹಾರ್ದಿಕ್ ಪಾಂಡ್ಯ ಅವರ ಚಾಣಾಕ್ಷ ನಾಯಕತ್ವವೂ ಪ್ರಮುಖ ಪಾತ್ರ ವಹಿಸಿತು. ತನ್ನ ಹಳೆಯ ತಂಡದ ದೌರ್ಬಲ್ಯಗಳನ್ನು ಚೆನ್ನಾಗಿ ಅರಿತಿದ್ದ ಹಾರ್ದಿಕ್, ಆರಂಭದಲ್ಲೇ ತನ್ನ ಪ್ರಮುಖ ವೇಗಿಯನ್ನು ಕಣಕ್ಕಿಳಿಸಿ ಶಾಕ್ ನೀಡಿದರು. ಗುಜರಾತ್‌ನ ಮೊದಲ ವಿಕೆಟ್ ಉರುಳಿದಾಗ ಇಡೀ ಮೈದಾನ ಸ್ತಬ್ಧವಾಯಿತು. ತನ್ನ ನೆಚ್ಚಿನ ಬ್ಯಾಟರ್ ಪೆವಿಲಿಯನ್ ಹಾದಿಯಲ್ಲಿ ಕಂಡು ಜಿಟಿ ಅಭಿಮಾನಿಗಳು ಮೌನಕ್ಕೆ ಶರಣಾದರು. ಇದಾದ ಕೆಲವೇ ಎಸೆತಗಳಲ್ಲಿ ಎರಡನೇ ಮತ್ತು ಮೂರನೇ ವಿಕೆಟ್ ಪತನವಾದಾಗ ಪಂದ್ಯದ ಅರ್ಧ ಫಲಿತಾಂಶ ಅಲ್ಲಿಗೆ ನಿರ್ಧಾರವಾಗಿತ್ತು.

**ಬೌಲಿಂಗ್‌ನಲ್ಲಿಯೂ ತಪ್ಪಿದ ಲೆಕ್ಕಾಚಾರ!:** ಗುಜರಾತ್ ತಂಡ ಕೇವಲ ಬ್ಯಾಟಿಂಗ್‌ನಲ್ಲಿ ಮಾತ್ರವಲ್ಲ, ಬೌಲಿಂಗ್‌ನಲ್ಲಿಯೂ ಎಡವಿತು. ಅದರಲ್ಲೂ 9.50 ಕೋಟಿ ರೂಪಾಯಿ ಕೊಟ್ಟು ಖರೀದಿಸಿದ ಆ ಸ್ಟಾರ್ ವೇಗಿ ಇಂದಿನ ಪಂದ್ಯದಲ್ಲಿ ಅತ್ಯಂತ ದುಬಾರಿಯಾದರು. ಪರ್ಪಲ್ ಕ್ಯಾಪ್ ಹೊಂದಿದ್ದ ಇವರು 4 ಓವರ್‌ಗಳಲ್ಲಿ 50ಕ್ಕೂ ಹೆಚ್ಚು ರನ್ ಬಿಟ್ಟುಕೊಟ್ಟಿದ್ದು ಮುಂಬೈ ಮೊತ್ತ 200ಕ್ಕೆ ಹತ್ತಿರವಾಗಲು ಕಾರಣವಾಯಿತು. ತಿಲಕ್ ವರ್ಮಾ ಅವರ ಅಬ್ಬರದ ಮುಂದೆ ಜಿಟಿ ಬೌಲರ್‌ಗಳಿಗೆ ಏನು ಮಾಡಬೇಕೆಂದು ತಿಳಿಯದಂತಾಗಿತ್ತು. ಅಂತಿಮವಾಗಿ ತಿಲಕ್ ಸಿಡಿಸಿದ ಅಜೇಯ ಶತಕವೇ ಗುಜರಾತ್ ಪಾಲಿಗೆ ಸಿಂಹಸ್ವಪ್ನವಾಯಿತು.



# ಕೊಹ್ಲಿಗಾಗಿ ನೊವಾಕ್ ಬ್ಯಾಟಿಂಗ್



ವಿಶ್ವ ಟೆನ್ನಿಸ್ ಅಂಗಳದ ಅಧಿಪತಿ ನೊವಾಕ್ ಜೋಕೊವಿಚ್ ಈಗ ಕ್ರಿಕೆಟ್ ಪ್ರೇಮಿಯಾಗಿ ಬದಲಾಗಿದ್ದಾರೆ. ಇದಕ್ಕೆ ಕಾರಣ ಬೇರೆ ಯಾರೂ ಅಲ್ಲ, ಭಾರತದ ಕ್ರಿಕೆಟ್ ಐಕಾನ್ ವಿರಾಟ್ ಕೊಹ್ಲಿ. ಇತ್ತೀಚೆಗೆ ಮ್ಯಾಡ್ರಿಡ್‌ನಲ್ಲಿ ನಡೆದ 'ಲಾರಿಯಸ್ ವರ್ಲ್ಡ್ ಸ್ಪೋರ್ಟ್ಸ್ ಅವಾರ್ಡ್ಸ್' ಸಮಾರಂಭದಲ್ಲಿ ಮಾತನಾಡಿದ ಜೋಕೊವಿಚ್, ತಾನು ಕ್ರಿಕೆಟ್ ವೀಕ್ಷಿಸಲು ಮತ್ತು ಆಸಕ್ತಿ ಬೆಳೆಸಿಕೊಳ್ಳಲು ವಿರಾಟ್ ಕೊಹ್ಲಿ ಅವರೊಂದಿಗಿನ ಸ್ನೇಹವೇ ಮುಖ್ಯ ಕಾರಣ ಎಂದು ಬಹಿರಂಗಪಡಿಸಿದ್ದಾರೆ.

**ಕೊಹ್ಲಿ ಕಾರಣದಿಂದ ಕ್ರಿಕೆಟ್ ಪರಿಚಯ:** ಸರ್ಬಿಯಾ ಮೂಲದ ನೊವಾಕ್ ಜೋಕೊವಿಚ್‌ಗೆ ಕ್ರಿಕೆಟ್ ಬಗ್ಗೆ ಮೊದಲೇನೂ ತಿಳಿದಿರಲಿಲ್ಲ. ಆದರೆ, ವಿರಾಟ್ ಕೊಹ್ಲಿ ಅವರ ಸಾಧನೆ ಮತ್ತು ಅವರ ವ್ಯಕ್ತಿತ್ವದಿಂದ ಪ್ರಭಾವಿತರಾದ ಜೋಕೊವಿಚ್, ಈಗ ಕ್ರಿಕೆಟ್ ಪಂದ್ಯಗಳನ್ನು ಗಮನಿಸುತ್ತಿದ್ದಾರೆ. ''ನನ್ನ ಗೆಳೆಯ ವಿರಾಟ್‌ಗಾಗಿ ನಾನು ಕ್ರಿಕೆಟ್ ಪ್ರೇಮಿಯಾಗಿದ್ದೇನೆ'' ಎಂದು ಅವರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

**ಸೋಷಿಯಲ್ ಮೀಡಿಯಾ ಸ್ನೇಹ:** ಈ ಇಬ್ಬರು ದಿಗ್ಗಜರ ಸ್ನೇಹ ಶುರುವಾಗಿದ್ದು ಇನ್‌ಸ್ಟಾಗ್ರಾಮ್ ಮೂಲಕ ಎಂಬುದು ವಿಶೇಷ. ಒಂದೊಮ್ಮೆ ಕೊಹ್ಲಿ ಅವರು ಜೋಕೊವಿಚ್‌ಗೆ ಸಂದೇಶ ಕಳುಹಿಸಲು ಹೋದಾಗ, ಅದಾಗಲೇ ಜೋಕೊವಿಚ್ ಅವರಿಂದ ಮೆಸೇಜ್ ಬಂದಿರುವುದನ್ನು ಕಂಡು ಆಶ್ಚರ್ಯಚಕಿತರಾಗಿದ್ದರಂತೆ. ಅಂದಿನಿಂದ ಇಂದಿನವರೆಗೆ ಇವರಿಬ್ಬರು ನಿಯಮಿತವಾಗಿ ಸಂಪರ್ಕದಲ್ಲಿದ್ದಾರೆ.

**ಭಾರತಕ್ಕೆ ಬರಲಿದ್ದಾರೆ ಜೋಕೊವಿಚ್:**

ಶೀಘ್ರದಲ್ಲೇ ಭಾರತಕ್ಕೆ ಭೇಟಿ ನೀಡುವ ಹಂಬಲವನ್ನು ನೊವಾಕ್ ಜೋಕೊವಿಚ್ ವ್ಯಕ್ತಪಡಿಸಿದ್ದಾರೆ. ಈ ಭೇಟಿಯ ವೇಳೆ ವಿರಾಟ್ ಕೊಹ್ಲಿ ಅವರೊಂದಿಗೆ ಸೇರಿ ಟೆನ್ನಿಸ್ ಮತ್ತು ಕ್ರಿಕೆಟ್‌ನ 'ಕ್ರಾಸ್‌ಓವರ್' ಕಾರ್ಯಕ್ರಮವೊಂದರಲ್ಲಿ ಭಾಗವಹಿಸುವ ಆಸೆಯನ್ನೂ ಅವರು ತೋಡಿಕೊಂಡಿದ್ದಾರೆ.



# 18 ವರ್ಷಗಳ ಬಳಿಕ ಮೂಡಿಬಂದ ಸ್ಫೋಟಕ ಸೆಂಚುರಿ

ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಈವರೆಗೆ 8 ಬ್ಯಾಟರ್‌ಗಳು ಶತಕ ಸಿಡಿಸಿದ್ದಾರೆ. ಈ ಎಂಟು ಆಟಗಾರರಲ್ಲಿ ಈ ಸಾಧನೆ ಮಾಡಿದ ಮೊದಲ ದಾಂಡಿಗ ಶ್ರೀಲಂಕಾದ ಸನತ್ ಜಯಸೂರ್ಯ. ಜಯಸೂರ್ಯ ಬಾರಿಸಿದ ಈ ಸೆಂಚುರಿ ದಾಖಲೆಯನ್ನು ಇದೀಗ 18 ವರ್ಷಗಳ ಬಳಿಕ ತಿಲಕ್ ವರ್ಮಾ ಸರಿಗಟ್ಟಿದ್ದಾರೆ. ಮುಂಬೈ ಇಂಡಿಯನ್ಸ್ ಪರ ಸ್ಫೋಟಕ ಶತಕ ಬಾರಿಸಿದ ದಾಖಲೆ ಸನತ್ ಜಯಸೂರ್ಯ ಅವರ ಹೆಸರಿನಲ್ಲಿತ್ತು. 2008 ರಲ್ಲಿ ಮುಂಬೈ ಪರ ಮೂಡಿಬಂದ ಚೊಚ್ಚಲ ಶತಕವನ್ನು ಜಯಸೂರ್ಯ ಕೇವಲ 45 ಎಸೆತಗಳಲ್ಲಿ ಪೂರೈಸಿದ್ದರು. ಈ ಮೂಲಕ ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಅತೀ ಕಡಿಮೆ ಎಸೆತಗಳಲ್ಲಿ ಸೆಂಚುರಿ ಸಿಡಿಸಿದ ದಾಖಲೆ ನಿರ್ಮಿಸಿದ್ದರು.

ಇದಾದ ಬಳಿಕ ಸಚಿನ್ ತೆಂಡೂಲ್ಕರ್ (66), ರೋಹಿತ್ ಶರ್ಮಾ (52), ಲಿಂಡ್ಲ್ ಸಿಮನ್ಸ್ (61), ಸೂರ್ಯಕುಮಾರ್ ಯಾದವ್ (49), ಕ್ಯಾಮರೋನ್ ಗ್ರೀನ್ (47), ಕ್ವಿಂಟನ್ ಡಿಕಾಕ್ (53) ಸೆಂಚುರಿಗಳನ್ನು ಸಿಡಿಸಿದ್ದರು. ಆದರೆ ಯಾರಿಗೂ ಸಹ ಜಯಸೂರ್ಯ ಹೆಸರಿನಲ್ಲಿರುವ ಸ್ಫೋಟಕ ಶತಕದ ದಾಖಲೆಯನ್ನು ಮುರಿಯಲು ಸಾಧ್ಯವಾಗಿರಲಿಲ್ಲ.

ಇದೀಗ 18 ವರ್ಷಗಳ ಬಳಿಕ ಈ ದಾಖಲೆಯನ್ನು ಸರಿಗಟ್ಟುವಲ್ಲಿ ತಿಲಕ್ ವರ್ಮಾ ಯಶಸ್ವಿಯಾಗಿದ್ದಾರೆ. ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ 5ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ತಿಲಕ್ 45 ಎಸೆತಗಳಲ್ಲಿ 7 ಸಿಕ್ಸ್ ಹಾಗೂ 8 ಫೋರ್ ಗಳೊಂದಿಗೆ ಅಜೇಯ 101 ರನ್ ಬಾರಿಸಿದ್ದಾರೆ.

ಈ ಮೂಲಕ ಮುಂಬೈ ಇಂಡಿಯನ್ಸ್ ಪರ ಅತೀ ವೇಗದ ಸೆಂಚುರಿ ಸಿಡಿಸಿದ ಭಾರತೀಯ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಚೊಚ್ಚಲ ಐಪಿಎಲ್‌ನಲ್ಲಿ ಸನತ್ ಜಯಸೂರ್ಯ ಬರೆದಿದ್ದ ದಾಖಲೆಯನ್ನು ಸರಿಗಟ್ಟುವಲ್ಲಿ ತಿಲಕ್ ವರ್ಮಾ ಯಶಸ್ವಿಯಾಗಿದ್ದಾರೆ. ಲೆಕ್ಕಾಚಾರದಿಂದ ಪಂದ್ಯ ಗೆಲ್ಲಲು ಸಾಧ್ಯವಿಲ್ಲ'' ಎಂದು ಅಶ್ವಿನ್ ಅಭಿಪ್ರಾಯಪಟ್ಟಿದ್ದಾರೆ. ಮೇಲ್ನೋಟಕ್ಕೆ ಯುವ ನಾಯಕ ರಿಯಾನ್ ಪರಾಗ್ ಅವರು ಸಂಪ್ರದಾಯಕ್ಕಿಂತ ಭಿನ್ನವಾಗಿ ಯೋಚಿಸುತ್ತಿರುವುದು ಕಂಡು ಬಂದರೂ, ರವೀಂದ್ರ ಜಡೇಜಾ ಅವರಂತಹ ಆಟಗಾರನನ್ನು ಕಡೆಗಣಿಸುವುದು ತಂಡದ ಫಲಿತಾಂಶದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂಬುದಕ್ಕೆ ಆರ್‌ಆರ್ ತಂಡ ಕೊನೆಯ ಎರಡು ಸೋಲುಗಳೇ ಸಾಕ್ಷಿ.

# ದಾಂಪತ್ಯ ಜೀವನಕ್ಕೆ ಕಾಲಿಟ್ಟ ಆಟಗಾರ

ಮುಂದಿನ ವಾರ ಭಾರತಕ್ಕೆ ಆಗಮನ



ಆಸ್ಟ್ರೇಲಿಯಾದ ಸ್ಫೋಟಕ ದಾಂಡಿಗ ಜೋಸ್ ಇಂಗ್ಲಿಸ್ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಈವರೆಗೆ ಆಡಿರುವುದು ಕೇವಲ 11 ಪಂದ್ಯಗಳನ್ನು ಮಾತ್ರ. ಅದು ಕೂಡ ಪಂಜಾಬ್ ಕಿಂಗ್ಸ್ ಪರ. ಕಳೆದ ಸೀಸನ್‌ನಲ್ಲಿ ಪಂಜಾಬ್ ಪರ 11 ಮ್ಯಾಚ್‌ಗಳನ್ನಾಡಿದ್ದ ಇಂಗ್ಲಿಸ್ ಒಂದು ಅರ್ಧಶತಕದೊಂದಿಗೆ 278 ರನ್ ಕಲೆಹಾಕಿದ್ದರು. ಈ ಬಾರಿ ಆಸ್ಟ್ರೇಲಿಯನ್ ದಾಂಡಿಗ ಲಕ್ನೋ ಸೂಪರ್ ಜೈಂಟ್ಸ್ ಪರ ಕಣಕ್ಕಿಳಿಯಲಿದ್ದಾರೆ. ಲಕ್ನೋ ಸೂಪರ್ ಜೈಂಟ್ಸ್ ತಂಡದ ಆಟಗಾರ ಜೋಶ್ ಇಂಗ್ಲಿಸ್ ತಮ್ಮ ದೀರ್ಘಕಾಲದ ಗೆಳತಿ ಮೇಗನ್ ಕಿನ್ನಾರ್ಟ್ ಅವರನ್ನು ವರಿಸುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಆಸ್ಟ್ರೇಲಿಯಾದ ಈ ಸ್ಫೋಟಕ ಬ್ಯಾಟರ್ ಏಪ್ರಿಲ್ 18, 2026 ರಂದು ಪಶ್ಚಿಮ ಆಸ್ಟ್ರೇಲಿಯಾದ ಮಾರ್ಗರೆಟ್ ರಿವರ್‌ನಲ್ಲಿರುವ ಐಷಾರಾಮಿ ರೆಸಾರ್ಟ್‌ನಲ್ಲಿ ಕುಟುಂಬಸ್ಥರು ಮತ್ತು ಆಪ್ತರ ಸಮ್ಮುಖದಲ್ಲಿ ವಿವಾಹವಾಗಿದ್ದಾರೆ. ಈ ವಿವಾಹದ ಕಾರಣ ಜೋಶ್ ಇಂಗ್ಲಿಸ್ ಲಕ್ನೋ ಸೂಪರ್ ಜೈಂಟ್ಸ್ ತಂಡದ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಿದ್ದರು. ಇದೀಗ ಮದುವೆ ಕಾರ್ಯಕ್ರಮಗಳು ಮುಗಿದಿದ್ದು, ಹೀಗಾಗಿ ಮುಂದಿನ ವಾರ ಭಾರತಕ್ಕೆ ಆಗಮಿಸಲಿದ್ದಾರೆ. ಅಂದರೆ ಮೇ 4 ರಂದು ಜೋಶ್ ಇಂಗ್ಲಿಸ್ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಕೂಡಿಕೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ. ಸದ್ಯ ಅಂಕಪಟ್ಟಿಯಲ್ಲಿ 8ನೇ ಸ್ಥಾನದಲ್ಲಿರುವ ಲಕ್ನೋ ತಂಡಕ್ಕೆ ಜೋಶ್ ಇಂಗ್ಲಿಸ್ ಅವರ ಆಗಮನವು ಹೊಸ ಚೈತನ್ಯ ನೀಡುವ ನಿರೀಕ್ಷೆಯಿದೆ.

ತಂಡವು ಸತತ ಸೋಲುಗಳಿಂದ ಕಂಗೆಟ್ಟಿದ್ದು, ಇಂಗ್ಲಿಸ್ ಅವರ ಬಿರುಸಿನ ಬ್ಯಾಟಿಂಗ್ ತಂಡದ ಮಧ್ಯಮ ಕ್ರಮಾಂಕವನ್ನು ಬಲಪಡಿಸಲಿದೆ. ಈ ಭರ್ಜರಿ ಪ್ರದರ್ಶನದ ಫಲವಾಗಿ ಲಕ್ನೋ ಸೂಪರ್ ಜೈಂಟ್ಸ್ ತಂಡವು ಜೋಶ್ ಇಂಗ್ಲಿಸ್ ಅವರನ್ನು ಈ ಬಾರಿಯ ಹರಾಜಿನ ಮೂಲಕ ಬರೋಬ್ಬರಿ 8.60 ಕೋಟಿ ರೂ.ಗೆ ಖರೀದಿಸಿತ್ತು. ಇದಾಗ್ಯೂ, ಮದುವೆಯ ಕಾರಣ ಅವರು ಐಪಿಎಲ್‌ನ ಮೊದಲಾರ್ಧಕ್ಕೆ ಅಲಭ್ಯರಾಗಿದ್ದಾರೆ. ಅಲ್ಲದೆ ದ್ವಿತೀಯಾರ್ಧದ ವೇಳೆ ಜೋಶ್ ಇಂಗ್ಲಿಸ್ ಎಲ್‌ಎಸ್‌ಜಿ ತಂಡವನ್ನು ಕೂಡಿಕೊಳ್ಳಲಿದ್ದು, ಈ ಮೂಲಕ ಲಕ್ನೋ ಸೂಪರ್ ಜೈಂಟ್ಸ್ ತಂಡವನ್ನು ಗೆಲುವಿನ ಲಯಕ್ಕೆ ಮುನ್ನಡೆಸಲಿದ್ದಾರಾ ಕಾದು ನೋಡಬೇಕಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966